ಕಾಯಕವೇ ಕೈಲಾಸ

ಸಿದ್ಧಗಂಗಾ

ದೀಪಾವಳಿ ಹಬ್ಬದ ಶುಭಾಶಯಗಳು

ಸಂಪುಟ : ೫೩ ಅಕ್ಟೋಬರ್ ೨೦೧೭ ಸಂಚಿಕೆ : ೧೦

ಸೆಪ್ಟೆಂಬರ್ ೧೦ ರಂದು ತುಮಕೂರಿನಲ್ಲಿ ಏರ್ಪಡಿಸಿದ್ದ ಸಿದ್ಧಗಂಗಾ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಲೋಕಾರ್ಪಣೆ ಸಮಾರಂಭ ಪದ್ಮಭೂಷಣ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಕರ್ನಾಟಕ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಿ.ಆರ್. ವಾಲಾ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾಜಿಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ, ಶ್ರೀ ಎಂ.ಬಿ. ಪಾಟೀಲ್, ಮಾಜಿ ಸಂಸದ ಶ್ರೀ ಜಿ.ಎಸ್. ಬಸವರಾಜು, ಆಸ್ಪತ್ರೆಯ ಆಡಳಿತ ಮಂಡಳಿಯವರು, ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಆಸ್ಪತ್ರೆಯ ಕಟ್ಟಡವನ್ನು ಟೇಪ್ ಕತ್ತರಿಸುವುದರ ಮೂಲಕ ಲೋಕಾರ್ಪಣೆ ಮಾಡಿ ಆಶೀರ್ವದಿಸಿದರು. ಡಾ.ಎಂ.ಎಸ್. ಪರಮೇಶ್ ಅವರು ಉಪಸ್ಥಿತರಿದ್ದರು

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಿ.ಆರ್. ವಾಲಾ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸುತ್ತಿರುವುದು. ಈ ಸಂದರ್ಭದಲ್ಲಿ ಡಾ. ಆರ್. ಉಮಾಶಂಕರ್ ಅವರು ಉಪಸ್ಥಿತರಿದ್ದರು.

ತುಮಕೂರು ನಗರದಲ್ಲಿ ನೂತನವಾಗಿ ನಿರ್ಮಿಸಿರುವ
ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ ವಸತಿಗೃಹ

ಹೋಟೆಲ್ ಶ್ರೀ ವಿಘ್ನೇಶ್ವರ ಕಂಫರ್ಟ್

ಸರ್ಕಾರಿ ಕಾಲೇಜು ಮುಂಭಾಗ, ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2255883, 2257770, 2257774, 2257772 ಫ್ಯಾಕ್ಸ್ : 2255873

- ಮೂರು ವಿವಿಧ ದರ್ಜೆಯ 50 ಸುಸಜ್ಜಿತ ಕೊಠಡಿಗಳು
- ವಿಶೇಷ ವ್ಯವಸ್ಥೆಯ ಹವಾನಿಯಂತ್ರಿತ ಕೊಠಡಿಗಳು
- ಹವಾನಿಯಂತ್ರಿತ ಮಿನಿ ಕಾನ್ಫರೆನ್ಸ್ ಹಾಲ್
- ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ
- ಪ್ರತಿ ಕೊಠಡಿಗೆ ಟಿ.ವಿ., ಟೆಲಿಫೋನ್ ಸಂಪರ್ಕ
- ಹವಾನಿಯಂತ್ರಿತ ವಿ.ಐ.ಪಿ. ರೂಂ.
- ಶಾಶ್ವತ ವಿದ್ಯುತ್ ವ್ಯವಸ್ಥೆ
- ಪರಿಣಿತ ಸಿಬ್ಬಂದಿಯ ವಿನೀತ ಸೇವೆ

ಲಿಫ್ಟ್ ಸೌಲಭ್ಯವಿದೆ

ಹವಾನಿಯಂತ್ರಿತ ಉಪಹಾರ ಗೃಹ

ಮಾಲೀಕರು : ಎಸ್.ಜಿ. ಚಂದ್ರಮೌಳಿ, ಗ್ರಾನೈಟ್ ಉದ್ಯಮಿ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥
ಆವಾವ ಕಾಯಕವ ಮಾಡಿದರು ಬಸವೇಶ
ಆವಗಂ ಶರಣರನು ಸೇವಿಪೆನು ಬಸವೇಶ

ಸಿದ್ಧಗಂಗಾ

ಸಂಪುಟ : ೫೩ ಅಕ್ಟೋಬರ್ ೨೦೧೭ ಸಂಚಿಕೆ : ೧೦

ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು
ಸಂಸ್ಥಾಪಕ ಅಧ್ಯಕ್ಷರು

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಉಪಾಧ್ಯಕ್ಷರು

ಸಂಪಾದಕರು :
ಹೆಚ್.ವಿ. ವೀರಭದ್ರಯ್ಯ

ಸಹ ಸಂಪಾದಕರು :
ಎಚ್.ಎಸ್. ಸಿದ್ಧಗಂಗಪ್ಪ

ಪತ್ರಿಕಾ ನಿರ್ವಹಣಾ ಸಮಿತಿ :
ಎಂ. ರೇಣುಕಾರಾಧ್ಯ
ಆರ್.ಎಸ್. ಮಲ್ಲೇಶಪ್ಪ
ಕೆ.ಬಿ. ಶಿವಶಂಕರಯ್ಯ
ಸಿ. ಕುಮಾರಸ್ವಾಮಿ

ಪ್ರಕಾಶನ :
ಹಳೆಯ ವಿದ್ಯಾರ್ಥಿಗಳ ಸಂಘ
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ -572 104.

ಮುದ್ರಕರು :
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಆಫ್‌ಸೆಟ್ ಮುದ್ರಣಾಲಯ
ಶ್ರೀ ಸಿದ್ಧಗಂಗಾ ಮಠ,
ತುಮಕೂರು-572 104.

ವಿಳಾಸ :
"ಸಂಪಾದಕರು"
'ಸಿದ್ಧಗಂಗಾ' ಮಾಸಪತ್ರಿಕೆ
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ-572 104
ದೂ: 0816-2282322.

ಲೇಖಕರ ಅಭಿಪ್ರಾಯಗಳು
ಪತ್ರಿಕೆಯ ಅಭಿಪ್ರಾಯಗಳಲ್ಲ

ಒಳಪುಟಗಳಲ್ಲಿ ....

೨. ಸಂಪಾದಕೀಯ
೩. ಶ್ರೀವಾಣಿ
೪. ಸಿದ್ಧಲಿಂಗೇಶ್ವರ ವಚನ – ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ
೫. ಪರಮಪೂಜ್ಯ ಶ್ರೀ ಶ್ರೀಗಳವರು ನೀಡಿದ ನುಡಿ ಸಂದೇಶ
೬. ರಾಜ್ಯಪಾಲರಿಂದ ಉದ್ಘಾಟನಾ ಭಾಷಣ
೮. ಬಯಕೆಯ ಬಳ್ಳಿ – ಶ್ರೀ ಸಿದ್ಧೇಶ್ವರ ಸ್ವಾಮಿಗಳು
೧೦. ಪ್ರೊ. ಚಂದ್ರಶೇಖರ ಪಾಟೀಲ್ ಅವರಿಗೆ ಅಭಿನಂದನೆ
೧೧. ಶ್ರೀ ಸಿದ್ಧಗಂಗಾ ಕ್ಷೇತ್ರ: ಪರಿಸರ ಮತ್ತು ಈಚಿನ ಶೋಧಗಳು – ಡಾ. ಎಂ.ಜಿ. ನಾಗರಾಜ್
೧೫. ಪ್ರೊ. ಟಿ.ಆರ್. ಮಹಾದೇವಯ್ಯ ಹಾಗೂ ಪ್ರೊ. ಜಿ. ಪರಮೇಶ್ವರಪ್ಪ ಅವರಿಗೆ ಶ್ರದ್ಧಾಂಜಲಿ
೧೬. ನಿಜಗುಣ ಶಿವಯೋಗಿ – ಮಲೆಯೂರು ಗುರುಸ್ವಾಮಿ
೨೧. ಶ್ರೇಷ್ಠ ವಿದ್ವಾಂಸ ಡಾ. ಹೆಚ್. ತಿಪ್ಪೇರುದ್ರಸ್ವಾಮಿ – ಎಚ್.ಎಸ್. ಸಿದ್ಧಗಂಗಪ್ಪ
೨೫. ಶ್ರೀ ಸಿ. ಕುಮಾರಸ್ವಾಮಿ ಹಾಗೂ ಶ್ರೀ ಎಂ. ಚಂದ್ರಪ್ಪ ಅವರಿಗೆ ಶ್ರದ್ಧಾಂಜಲಿ
೨೬. ಚೆನ್ನಬಸವಣ್ಣ – ಕ.ನ. ಪ್ರಮೀಳಾ ಫಾಲನೇತ್ರ
೨೮. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯ ಪತ್ರಿಕಾ ಪ್ರಕಟಣೆ
೩೦. ಚಿಂತನೆ – ಶ್ರೀ ಮ.ನಿ.ಪ್ರ.ಸ್ವ. ಶಾಂತಮಲ್ಲಿಕಾರ್ಜುನ ಸ್ವಾಮಿಗಳು
೩೧. ಕ್ಷೇತ್ರವಾರ್ತೆ
೩೨. ಶ್ರೀ ಸಿದ್ಧಗಂಗಾ ಗುರುಕುಲ ಡೆವಲಪ್‌ಮೆಂಟ್ ಟ್ರಸ್ಟ್‌ಗೆ ದೇಣಿಗೆ ನೀಡಿದ ದಾನಿಗಳು

ಚಂದಾ ವಿವರ : ವಾರ್ಷಿಕ ಚಂದಾ ರೂ. 200/-
ಆಜೀವ ಸದಸ್ಯತ್ವ ರೂ. 1500/- ಬಿಡಿ ಪ್ರತಿ ರೂ. 20.00

ಗಾಂಧೀಜಿ – ಸಿದ್ಧಗಂಗಾ ಮಾಸಪತ್ರಿಕೆ

ಅಕ್ಟೋಬರ್ ೨, ಗಾಂಧಿಯವರು ಹುಟ್ಟಿದ ದಿನ. ಜಗತ್ತು ಕಂಡ ಪುಣ್ಯಮೂರ್ತಿ. 'ಗಾಂಧಿಯೆಂಬಾ ಹೆಸರೇ ನಾಂದಿಯಾಗಲಿ ನಮ್ಮ ಸ್ವಾತಂತ್ರ್ಯ ಸಂಭ್ರಮಕ್ಕೆ ಹಾಡು ಪಕ್ಷಿ' – ಎಂದರು ಕವಿ ಕುವೆಂಪು. **'ಅನಾವರಣವಾಯಿತಂತೆ ಗಾಂಧೀಜಿಯ ಚಿತ್ರಕೆ, ಅನಾವರಣವಾಗಬೇಕು ಮೊದಲು ನಮ್ಮ ಹೃದಯಕೆ'** ಎಂದರು ಜಿ.ಎಸ್. ಶಿವರುದ್ರಪ್ಪನವರು. ಹೌದು ಸಾವಿಲ್ಲದ ಚೆಲುವ 'ಮಹಾತ್ಮ ಗಾಂಧೀಜಿ'. ಅವರ ಹೆಸರು ಹೇಳಿಕೊಳ್ಳುವ ನಾವಿಂದು ಮಾಡುತ್ತಿರುವುದಾದರೂ ಏನು? ಉಟ್ಟಿದ್ದು ಒಂದು ಸಾದಾ ಬಿಳಿಯ ಪಂಚೆ, ಹೊದ್ದದ್ದು ಒಂದು ಬಿಳಿಯ ತುಂಡು ವಸ್ತ್ರ, ಮೆಟ್ಟಿದ್ದು ಒಂದು ಜೊತೆ ಸಾದಾ ಚಪ್ಪಲಿ. ಬಾಳಿದ್ದು ಭಾರತೀಯರಿಗಾಗಿ. ಆದರೆ ಅವರ ಹೆಸರು ಹೇಳುತ್ತಿರುವ ದೇಶ, ರಾಜ್ಯಗಳನ್ನು ಆಳುತ್ತಿರುವ ನಾವೆಷ್ಟು ಅವರ ತತ್ತ್ವಾನುಯಾಯಿಗಳಾಗಿದ್ದೇವೆ! ಮೊದಲು ಅನಾವರಣಬೇಕು ನಮ್ಮ ಹೃದಯಗಳಿಗೆ. ನಮ್ಮ ಪ್ರಧಾನಿಗಳು, ಮುಖ್ಯಮಂತ್ರಿಗಳು, ಪ್ರಜಾಪ್ರಭುಗಳು ಧರಿಸುತ್ತಿರುವ ಸೂಟುಗಳ ಬೆಲೆ ಲಕ್ಷ ಲಕ್ಷ ! ಕಟ್ಟುವ ಕೈಗಡಿಯಾರದ ಲಕ್ಷ ಲಕ್ಷ. ಇದು ನಮ್ಮ ಗಾಂಧೀಜಿಯ ಮೇಲಿರುವ ಪ್ರೀತಿ.

ಸೆಪ್ಟೆಂಬರ್ ೯-೧೦ ರಂದು ತುಮಕೂರಿಗೆ ರಾಮಕೃಷ್ಣಾಶ್ರಮದಲ್ಲಿ ಆಯೋಜಿತವಾಗಿದ್ದ ರಾಮಕೃಷ್ಣ ವಿವೇಕಾನಂದರ ಸಾಹಿತ್ಯ ಸಮ್ಮೇಳನದಲ್ಲಿ ೧೦ನೇ ದಿನಾಂಕದಂದು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸೇವಾಪಥಗಾಮಿಗಳಾಗಿರುವ ರಾಜ್ಯದ ೯ ಮಾಸಪತ್ರಿಕೆಗಳ ಸಂಪಾದಕರ ಸನ್ಮಾನ ಸಮಾರಂಭವಿತ್ತು. ಶ್ರೀಮಠದಿಂದ ೫೩ ವರ್ಷಗಳಿಂದ ಪ್ರಕಟವಾಗುತ್ತಿರುವ ಪತ್ರಿಕೆಯ ಪರವಾಗಿ ಸಂಪಾದಕರನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತ ಪೂಜ್ಯ ಶ್ರೀ ವೀರೇಶಾನಂದ ಮಹಾಸ್ವಾಮಿಗಳು ಆಶೀರ್ವದಿಸಿದರು. ಪತ್ರಿಕೆ 'ಸಿದ್ಧಗಂಗಾ'ಸಲ್ಲಿಸುತ್ತಿರುವ ನಮ್ರ ಸೇವೆಗೆ ಆಶೀರ್ವದಿಸುತ್ತಿರುವ ಕರ್ನಾಟಕರತ್ನ, ಪದ್ಮಭೂಷಣ, ತ್ರಿವಿಧ ದಾಸೋಹಜ್ಯೋತಿ, ೧೧೦ ವರ್ಷಗಳ ಮಹಾಚೇತನ ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಹಾಗೂ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾಗಿರುವ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಪ್ರೋತ್ಸಾಹವೇ ಕಾರಣವೆಂಬುದನ್ನು ತಿಳಿಸಬಯಸುತ್ತೇವೆ.

ಅಂದ ಹಾಗೆ ಇತ್ತೀಚಿನ 'ವೀರಶೈವ ಲಿಂಗಾಯತ' ವಿಚಾರದಲ್ಲಿ ಗಣ್ಯಮಾನ್ಯರು, ಪೂಜ್ಯ ಶ್ರೀ ಶ್ರೀಗಳವರ ವಿಚಾರದಲ್ಲಿ ಗೊಂದಲ ಉಂಟುಮಾಡಿರುವುದಕ್ಕೆ 'ಸಿದ್ಧಗಂಗಾ' ವಿಷಾದಿಸುತ್ತದೆ.

ಪ್ರೊ. ಹೆಚ್.ವಿ. ವೀರಭದ್ರಯ್ಯ
ಸಂಪಾದಕರು



ಶರಣರ ಕಾಯಕ ಸಂಸ್ಕೃತಿ

ಕಾಯಕ ಬಸವಣ್ಣನವರು ಅಭಿನ್ನ. ಲೋಕ ಕಲ್ಯಾಣ ಹಾಗೂ ಆತ್ಮಕಲ್ಯಾಣಕ್ಕೆ ಬಸವಣ್ಣನವರು ನೀಡಿದ ಸಾರ್ವಕಾಲಿನ ತತ್ತ್ವಸಿರಿ ಕಾಯಕ. ಸ್ವಾಭಿಮಾನದ ಹೆದ್ದಾರಿ. ಆತ್ಮವಿಕಾಸದ ಸಮರ್ಥ ಮಾಧ್ಯಮ. ವ್ಯಕ್ತಿಯ ಏಳಿಗೆ ಸಮಾಜದ ಅಭಿವೃದ್ಧಿಯನ್ನು ಸಾಧಿಸುವ ನಿಚ್ಚಣಿಕೆ. ಬಸವಣ್ಣನವರ ಕಾಯಕ ದಾಸೋಹ ತತ್ತ್ವ ಸುಭಿಕ್ಷ, ಸಮೃದ್ಧಿ, ಸಮಾನತೆಯ ಸಮಾಜ ಕಟ್ಟಲು ಸಹಾಯಕವಾಗುವ ವಿಶೇಷ ಮಾರ್ಗ.

ಕಾಯಕ ಮಾನವೀಯತೆಯನ್ನು, ಮಧುರ ವ್ಯಕ್ತಿತ್ವವನ್ನು, ಶ್ರಮ ಸಂಸ್ಕೃತಿಯನ್ನು, ಧರ್ಮಪ್ರಜ್ಞೆಯನ್ನು, ದೇವರಲ್ಲಿ ಅಖಂಡ ನಿಷ್ಠೆಯನ್ನು ತಂದು ಕೊಡುತ್ತದೆ. ಇಹಪರಗಳ, ವ್ಯಷ್ಟಿ ಸಮಷ್ಟಿಗಳ, ಅಂತರಂಗ ಬಹಿರಂಗಗಳ ಸಮನ್ವಯಕ್ಕೆ ಸೋಪಾನವಾಗುತ್ತದೆ. ಬಸವಾದಿ ಶರಣರು ಗುರುಲಿಂಗ ಜಂಗಮಕ್ಕೆ ಕೊಟ್ಟ ಸ್ಥಾನಮಾನವನ್ನೇ ಕಾಯಕ, ಪ್ರಸಾದ, ಮಾನವೀಯತೆಗೆ ಕೊಟ್ಟು ಪವಿತ್ರತಮ ಸಂಸ್ಕೃತಿಯನ್ನು ರೂಪಿಸಿದರು. ಶರಣರಿಗೆ ಬೇರೆ ಒಂದು ಕೈಲಾಸವೇ ಕಾಣಿಸಲಿಲ್ಲ. ಕಾಯಕವೇ ಕೈಲಾಸವಾಯಿತು. ಅದಕ್ಕೆಂದೇ ಜನಪದರು ಹಾಡಿದರು

ಕಾಯಕವೇ ಕೈಲಾಸ ಮಾಯೆ ಕೊಲ್ಲುವ ಕೆಲಸ
ಆಯು ಬೆಳೆಸುದಕೆ ಸಾಹಸವು । ಜಗದೊಳಗೆ
ಹೇಯ ಸಂಸಾರ ನೀಡುವಕೆ ॥

* * *

ಶರಣರು ಕಾಯವನ್ನು ಕ್ರಿಯಾಶೀಲಗೊಳಿಸುವುದರ ಮೂಲಕ ತನ್ನೊಳಗಿನ ನಿರ್ಮಲ ಬೆಳಕನ್ನು ಜನರ ಕಲ್ಯಾಣಕ್ಕೆ ವಿನಿಯೋಗಿಸುವುದನ್ನು "ಕಾಯಕವೇ ಕೈಲಾಸ" ಎಂದು ಅದನ್ನು ಉನ್ನತೀಕರಿಸಿದರು, ದೈವೀಕರಣಗೊಳಿಸಿದರು. ಕಾಯಕಜೀವಿ ಪ್ರಸಾದ ಸದ್ಭಾವಿಯೆಂಬುದನ್ನು ಸಾಧಿಸಿ ತೋರಿಸಿದರು. ಪ್ರಸಾದದಲ್ಲಿ ಪರಶಿವನಿದ್ದಾನೆಂಬುದನ್ನು ನಂಬಿ ತನಗೆ ಪ್ರಾಪ್ತವಾದ ಮನುಷ್ಯ ಜನ್ಮವನ್ನು ಜೀವರತ್ನವೆಂದು ವಿಶ್ವಾಸದಿಂದ, ಕೃತಜ್ಞತಾ ಭಾವದಿಂದ ಬಾಳುವ ಕಲೆಯನ್ನು ಕಲಿಯಬೇಕು.

ಶ್ರೀ ಸಿದ್ಧಲಿಂಗೇಶ್ವರ ವಚನ

ಗಿರಿಯ ಮೇಲಣಕೋಡಗ ಹಿರಿಯ ಮಾರಿಯ ನುಂಗಿತ್ತು ನೋಡಾ ಹಿರಿಯ ಮಾರಿಯ ನುಂಗಿ ಅವಸ್ಥೆಯಡಗದೆ ಇಪ್ಪತ್ತೈದು ಗ್ರಾಮವನೆಯ್ದೆ ನುಂಗಿತ್ತು ನೋಡಾ ದಶಗಮನಂಗಳ ಕೂಡಿ ವಿಶ್ವತೋಪಥದಲ್ಲಿ ನಡೆವುತಿಪ್ಪದು ನೋಡಾ ಒಂದು ಪಥವ ತಾನೆಂದರಿಯದು ನೋಡಾ, ತಾ ಬಂದಂದಿಂದ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

ಗಿಡದ ಮೇಲಣ – ಮೂಲಹಂಕಾರ ಸ್ವರೂಪವಾದ ದೇಹವೆಂಬಿಂದ್ರಿಯ ಮೇಲಣ, ಕೋಡಗ – ಮನೋ ಮರ್ಕಟನು, ಹಿರಿಯ – ದೊಡ್ಡಿತ್ತಾದ, ಮಾರಿಯ– ಸಂಸಾರ ರೂಪಿಣಿಯಾದ ಮಾಯಾಶಕ್ತಿಯನು, ನುಂಗಿತ್ತು – ಅವಗ್ರಹಿಸಿತ್ತು, ಅವಗ್ರಹಿಸಿ, ಅವಸ್ಥೆಯ – ದುಃಖಾವಸ್ಥೆಯ, ಅರಗದೆ – ಅಚಿತರರಿಸದೆ, ಇಪ್ಪತ್ತೈದು ಗ್ರಾಮದ – ಇಪ್ಪತ್ತೈದು ತತ್ತ್ವಯುಕ್ತವಾದ ದೇಹವೆಂಬ ನಗರವನು, ಎಯ್ದೆ – ಚೆನ್ನಾಗಿ, ನುಂಗಿತ್ತು– ಅವಗ್ರಹಿಸಿತ್ತು, ನೋಡಾ– ಕಂಡಾ, ದಶಮನಂಗಳ – ದಶವಾಯುಗಳ, ಕೂಡಿ – ಬೆರೆದು, ವಿಶ್ವತೋಮುಖದಲ್ಲಿ– ಮನೋಮಾರ್ಗದಲ್ಲಿ, ನಡೆವುತಿರ್ಪನು – ಚರಿಸುತಿರ್ಪನು, ನೋಡಾ–ಕಂಡಾ, ಒಂದು ಪಥವ – ಒಂದು ಸತ್ಪಥಮಾರ್ಗವನು, ತಾನೆಂದು– ಆವಾವಕಾಲಕ್ಕು, ಅರಿಯದು – ತಿಳಿಯದು, ನೋಡಾ–ಕಂಡಾ, ತಾ ಬಂದಂದಿನಿಂದ – ತಾ ಹುಟ್ಟಿ ಬಂದಂದಿನಿಂದ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

(ಕೃಪೆ: ತೋಂಟದಾರ್ಯ ವಚನ ವ್ಯಾಖ್ಯೆ- ಸಂಪಾದಕರು– ಡಾ|| ಸಾ.ಶಿ. ಮರುಳಯ್ಯ, ಪ್ರಕಾಶಕರು, ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ(ರಿ.) ಎಡೆಯೂರು- ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ)

ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ರಾಮಕೃಷ್ಣಪರಮಹಂಸರ ಸ್ಮರಿಸುವೆ
ಸ್ವಾಮಿ ವಿವೇಕರ ಸ್ಮರಿಸುವೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬುದ್ಧ ಭಗವಾನನಾದೆ ವರ್ಧಮಾನನಾದೆ
ಯೇಸುಕ್ರಿಸ್ತನಾಗಿ ಬೆಳಗಿದೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಅಲ್ಲಾನು ನೀನಾದೆ ಎಲ್ಲರಿಗೆ ಬೇಕಾದೆ
ಎಲ್ಲರೊಳು ನಗುನಗುತ ನೀ ಬೆರೆದೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಗುರುನಾನಕನೂ ಆದೆ ನಾರಾಯಣಗುರುವಾದೆ
ಸರ್ವಧರ್ಮಗಳ ಬೆಳಕಾದೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

'ಜಗದಗಲ ಮುಗಿಲಗಲ ಮಿಗೆಯಗಲ ನಿನ್ನ ಚರಿತ
ಬಸವಪಥಗಾಮಿಯ ಶುಭರೂಪ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ನೀನಿರುವ ಕ್ಷೇತ್ರವು ಅವಿಮುಕ್ತಕ್ಷೇತ್ರವು
ನೀನಿರುವ ದೇಶವು ಪಾವನ ಪುಣ್ಯವು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಕರ್ತಕಳುಹಿದನೆಂದು ಮರ್ತ್ಯಕ್ಕೆ ಬಂದಿರುವೆ
ಮರ್ತ್ಯದ ಮಣಿಹವ ನಡೆಸಿರುವೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಕಾಯಕ ದಾಸೋಹಗಳೆ ಕಣ್ಣಾಗಿಹವು
ಪರಮಪೂಜ್ಯ ಪೂಜೆಯೆನಿಸಿಹವು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಗುರುವೆಂದರೆ ? ಗುರುವು ಹೇಗಿರಬೇಕು?
ಗುರು ನಿಮ್ಮ ನೋಡಿದರೆ ತಿಳಿವುದು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಮಕ್ಕಳಾಟವ ಕಂಡು ಮನದೊಳಗೆ ಸುಖಿಸುವೆ
ಮಕ್ಕಳಿಗಾಗಿ ಶ್ರಮಿಸುವೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

– ಹೆಚ್.ವಿ. ವೀರಭದ್ರಯ್ಯ

ಸಿದ್ಧಗಂಗಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ನೀಡಿದ ನುಡಿ ಸಂದೇಶ

ಕಳೆದ ಎಂಟು ದಶಕಗಳ ಅವಧಿಯಲ್ಲಿ ಶ್ರೀ ಕ್ಷೇತ್ರದ ಸೇವೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ನನ್ನ ಪೂಜ್ಯ ಗುರುಗಳಾದ ಉದ್ದಾನ ಸ್ವಾಮಿಗಳನ್ನು ಮನತುಂಬಿ ನೆನೆಯುತ್ತೇವೆ. ಅವರ ಕಾಲದಲ್ಲಿಯೇ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ೧೯೧೭ರಲ್ಲಿ ಸನಿವಾಸ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ, ಅದಕ್ಕೆ ಎಲ್ಲಾ ಜಾತಿ ಮತ ಪಂಥದ ವಿದ್ಯಾರ್ಥಿಗಳಿಗೆ ಅವಕಾಶ ಕೊಟ್ಟು ಶ್ರೀಮಠದ ಜಾತ್ಯತೀತ ನೀತಿಗೆ ಭದ್ರ ತಳಹದಿಯನ್ನು ಹಾಕಿದರು. ಅದರ ಫಲ : ಮಠದಲ್ಲಿ ಅಭ್ಯಾಸ ಮಾಡುತ್ತಿರುವ ೮ ಸಾವಿರ ವಿದ್ಯಾರ್ಥಿಗಳ ಪೈಕಿ ೩ ಸಾವಿರಕ್ಕೂ ಕಡಿಮೆ ವಿದ್ಯಾರ್ಥಿಗಳು ಮಾತ್ರ ವೀರಶೈವ-ಲಿಂಗಾಯಿತರು. ಹಾಗಾಗಿ ಶ್ರೀಮಠದ ಜಾತ್ಯತೀತ ನೀತಿ ಶ್ರೀಮಠದ ಜಾತ್ಯತೀತ ನೀತಿ ಶ್ರೀಮಠದ ಬೆಳವಣಿಗೆಯ ಶಕ್ತಿಮೂಲ.

ಶತಮಾನಗಳ ಕಾಲ ಪರಕೀಯರ ಆಡಳಿತದಲ್ಲಿದ್ದ ನಮ್ಮ ದೇಶ ೧೯೪೭ ರಲ್ಲಿ ಸ್ವಾತಂತ್ರ್ಯವನ್ನು ಪಡೆದ ಪ್ರಪಂಚದಲ್ಲಿ ಅತಿದೊಡ್ಡ ಪ್ರಜಾಪ್ರಭುತ್ವವಾಗಿ ರೂಪುಗೊಂಡು ೭೦ ವರ್ಷಗಳಾಗಿವೆ. ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ. ಚುನಾವಣೆಯಲ್ಲಿ ಗೆದ್ದ ಪಾರ್ಟಿಯವರು ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ವಿಷಯಗಳು. ಚುನಾವಣೆ : ಆಸೆ, ಆಮಿಷಗಳಿಗೆ ಒಳಗಾಗದೆ, ಒಳ್ಳೆಯವರನ್ನು ಚುನಾಯಿಸುವುದು ಎಲ್ಲರ ಕರ್ತವ್ಯ. ಚುನಾವಣೆ ನಂತರ ಸರ್ಕಾರಗಳು ರಚನೆಗೊಂಡು ಆಡಳಿತ ಯಂತ್ರಗಳು ಚಾಲನೆಗೊಳ್ಳುತ್ತವೆ.

ಆಡಳಿತ ಯಂತ್ರಗಳನ್ನು ನಡೆಸುವ ಅಧಿಕಾರಿ ವರ್ಗ ಸೃಷ್ಟಿಯಾಗುತ್ತದೆ. ದೇಶದ ಸುಮಾರು ೧೩೩ ಕೋಟಿ (ಅದರಲ್ಲಿ ಸುಮಾರು ೬೫% ಹಳ್ಳಿಗರು. ಬಹುತೇಕ ಕೃಷಿಕರು) ಅವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಬೇಕಾದರೆ ಈ ಅಧಿಕಾರಿ ವರ್ಗ ಲಂಚ ರಹಿತವಾಗಬೇಕು. ಈ ಸ್ವಚ್ಛತೆ ಮೇಲಿನಿಂದ ಪ್ರಾರಂಭವಾದರೆ ಮಾತ್ರ ಸಾಧ್ಯವಾದೀತು. ಏಕೆಂದರೆ :

यद्यदाचरतिश्रेष्ठः तत्तदेवेतरोजनः।
सयत्प्रमाणंकुरुते लोकस्तदनुवर्तते।।

ಬಸವಣ್ಣನವರ ಕಾಯಕ-ದಾಸೋಹ ಅರ್ಥಶಾಸ್ತ್ರದ ಮಾದರಿ ಅನುಕೂಲವಾಗಬಹುದು.

ಕಾಯಕ : ಪ್ರತಿಯೊಬ್ಬರೂ ಉದ್ಯೋಗಿಗಳಾಗುವುದರಿಂದ ಸಂಪತ್ತು ಉತ್ಪತ್ತಿಯಾಗಬೇಕು. ಅದರ ಒಂದು ಭಾಗ ಸ್ವಂತಕ್ಕೆ, ಉಳಿದದ್ದು ದಾಸೋಹದ (ಸಮಾಜದ ಒಳಿತಿಗಾಗಿ) ಉಪಯೋಗಕ್ಕೆ. ಇದರಿಂದ ಸಂಪತ್ತು ಒಂದೇ ಕಡೆ ಶೇಖರವಾಗುವುದಕ್ಕೆ ತಡೆಬೀಳಬಹುದು.

ಜನಸಂಖ್ಯೆಯ ಹೆಚ್ಚಳ ಹಾಗೂ ಪರಿಸರ ಮಾಲಿನ್ಯದಿಂದ ಉಂಟಾಗುತ್ತಿರುವ ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಕೂಡ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ಶ್ರೀಮಠದ ಭಕ್ತರಾದ ಶ್ರೀ ಜಿ.ಎಸ್. ಬಸವರಾಜುರವರ ಮುಂದಾಳತ್ವದಲ್ಲಿ ಪ್ರಾರಂಭವಾದ ಸಿದ್ಧಗಂಗಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಯೋಜನೆಯು ಪೂರ್ಣಗೊಂಡು ಈ ದಿನ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಾಜುಭಾಯ್ ರೂಡಾಭಾಯ್ ವಾಲಾ ಇವರಿಂದ ಉದ್ಘಾಟನೆಯಾಗುತ್ತಿರುವುದು ಅತೀವ ಸಂತೋಷವನ್ನು ಉಂಟುಮಾಡುತ್ತಿದೆ.

ಈ ಸುಸಜ್ಜಿತವಾದ ಆಸ್ಪತ್ರೆಯು ಸೇವೆಯು ಶ್ರೀಸಾಮಾನ್ಯರಿಗೂ ನಿಲುಕುವಂತಾಗಲು ಆಸ್ಪತ್ರೆಯ ಆಡಳಿತ ವರ್ಗ, ವೈದ್ಯರು ಹಾಗೂ ಸಿಬ್ಬಂದಿ ವರ್ಗ ಶ್ರಮ ವಹಿಸುವರೆಂದು ಆಶಿಸುತ್ತೇವೆ. ಇದಕ್ಕೆ ಪೂರಕವಾಗಿ ಇಡೀ ತುಮಕೂರು ನಗರದ ಸ್ವಚ್ಛತೆ ಬಗ್ಗೆ ಜಿಲ್ಲಾಡಳಿತ, ಮಹಾನಗರ ಪಾಲಿಕೆ ಹಾಗೂ ನಾಗರಿಕರು ಸಹಕಾರ ನೀಡುವುದು ಅತ್ಯವಶ್ಯಕವಾಗಿದೆ. ಎಲ್ಲರಿಗೂ ಶುಭವಾಗಲಿ.

शिवं भूयात्।

ಕರ್ನಾಟಕದ ರಾಜ್ಯಪಾಲರಾದ ಗೌರವಾನ್ವಿತಾ ಶ್ರೀ ವಜೂಭಾಯ್ ರೂಢಾಭಾಯ್ ವಾಲಾರವರಿಂದ ಉದ್ಘಾಟನಾ ಭಾಷಣ

ಸಿದ್ಧಗಂಗಾ ಆಸ್ಪತ್ರೆ ಮತ್ತು ಸಂಶೋಧನಾ ವಿಭಾಗದ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಆರಾಧ್ಯ ಹಾಗೂ ಪದ್ಮಭೂಷಣ, ಕರ್ನಾಟಕರತ್ನ ಶ್ರೀ ಶ್ರೀ ಮಹಾಸ್ವಾಮೀಜಿ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ, ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಗೌರವಾನ್ವಿತ ಶ್ರೀ ಬಿ.ಎಸ್. ಯಡಿಯೂರಪ್ಪನವರೇ, ಕರ್ನಾಟಕದ ಸಚಿವರಾದ ಗೌರವಾನ್ವಿತ ಶ್ರೀ ಟಿ.ಬಿ. ಜಯಚಂದ್ರರವರೇ, ಕರ್ನಾಟಕದ ಸಚಿವರಾದ ಗೌರವಾನ್ವಿತ ಶ್ರೀ ಎಂ.ಬಿ. ಪಾಟೀಲ್‌ರವರೇ, ಮಾಜಿ ಸಂಸದರಾದ ಗೌರವಾನ್ವಿತ ಶ್ರೀ ಬಸವರಾಜ್‌ರವರೇ ಹಾಗೂ ವೇದಿಕೆಯ ಮೇಲಿರುವ ಇತರೇ ಮಂತ್ರಿಗಳೇ, ಮೇಯರ್‌ರವರೇ, ಜಿಲ್ಲಾ ಪಂಚಾಯತ್ ಅಧ್ಯಕ್ಷರೇ, ಮಹನೀಯರೇ ಮತ್ತು ಮಹಿಳೆಯರೇ ಹಾಗೂ ವೇದಿಕೆ ಮುಂದಿರುವ ಅನ್ಯ ಧರ್ಮ ಸಂಸ್ಥಾನದ ಧರ್ಮೀಯರೇ ಮತ್ತು ಎಲ್ಲಾ ಧರ್ಮಗಳ ಗುರುಗಳೇ ನಿಮಗೆಲ್ಲರಿಗೂ ನಾನು ಮೊದಲು ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಗೆಳೆಯರೇ ಈ ದಿನ ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯವನ್ನು ಜನರಿಗೆ ಒದಗಿಸುವುದು ಸರ್ಕಾರದ ಕೆಲಸ ಮತ್ತು ಧರ್ಮಗುರುಗಳ ಕೆಲಸ. ಕೇವಲ ಉಪದೇಶ ಕೊಡುವುದು ಮತ್ತು ಮಾನವನ ಜೀವನ ಪದ್ಧತಿ ಹೇಗಿರಬೇಕು ಎಂಬ ಜ್ಞಾನ ನೀಡುವುದು ಧರ್ಮಗುರುಗಳ ಕೆಲಸ. ಆದರೆ ನಾನು ಗೌರವಪೂರಕವಾಗಿ ಹೇಳಬಲ್ಲೆ ಅದೇನೆಂದರೆ ದಕ್ಷಿಣ ಭಾರತದಲ್ಲಿ ನಮ್ಮ ಧರ್ಮಗಳು ಕೇವಲ ಧರ್ಮ ಉಪದೇಶ ಮಾಡುವುದರ ಜೊತೆಗೆ ಕೆಲಸವನ್ನು ಮಾಡುತ್ತಾರೆ. ಅವರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿ ಕುಳಿತಿರುವ ಎಲ್ಲ ಧರ್ಮ ಗುರುಗಳು ಮಂದಿರದಲ್ಲಿಯೂ ಪೂಜೆ ಮತ್ತು ಪಠಣಗಳನ್ನು ಮಾಡುತ್ತಾರೆ ಹಾಗೂ ಉಪದೇಶವನ್ನು ಕೊಡುತ್ತಾರೆ. ಅದರ ಜೊತೆಗೆ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ನೀಡುವುದರ ಮೂಲಕ ಅಮೂಲ್ಯ ಸೇವೆ ಸಲ್ಲಿಸುತ್ತಿದ್ದಾರೆ.

ಸಂಸ್ಕೃತದಲ್ಲಿ ಹೇಳಿರುವಂತೆ 'ಓಂ ಸರ್ವೇ ಭವಂತ್ ಸುಖಿನಃ, ಸರ್ವೇಸಂತು ನಿರಾಮಯಃ, ಸರ್ವೇ ಭದ್ರಾಣಿ ಪಶ್ಯಂತು, ನಾಕಃಶ್ಚಿತ್ ದುಃಖಭಾಗ್ಭವೇತ್' ಇದರ ಅರ್ಥ ಸರ್ವರೂ ಸುಖಿಗಳಾಗಿರಲಿ, ಸರ್ವರೂ ಆರೋಗ್ಯವಾಗಿರಲಿ ಯಾರಿಗೂ ದುಃಖ ಬಾರದಿರಲಿ ಈ ರೀತಿಯ ಆಶೀರ್ವಾದ ನಮ್ಮ ಧರ್ಮ ಗುರುಗಳು ನೀಡುತ್ತಿದ್ದಾರೆ. ನಾನು ಇಲ್ಲಿ ಕುಳಿತಿರುವ ಎಲ್ಲ ಜನರಿಗೂ ಹೇಳುತ್ತೇನೆ. ಧರ್ಮ ಎಂದರೆ ದೀಪ ಬೆಳಗುವುದು, ತಟ್ಟೆಯನ್ನು ಹಿಡಿದು ದೇವರ ಮುಂದೆ ಆರತಿ ಮಾಡುವುದು. ಸಂಸ್ಕೃತದ ಶ್ಲೋಕ ಹೇಳುವುದು ಕೇವಲ ಇಷ್ಟೇ ಧರ್ಮವಲ್ಲ. ಧರ್ಮವೇ ಕರ್ಮ work is worship. ನೀವು ಕೆಲಸ ಮಾಡಿ, ಇದರಿಂದ ಕೆಲಸ ಮಾಡುವ ಪ್ರೇರಣೆ ನಿಮಗುಂಟಾಗುತ್ತದೆ. ಅದೇ ರೀತಿ ನಮ್ಮ

ಧರ್ಮಗುರುಗಳು ಉಪದೇಶದ ಜೊತೆಗೆ ಒಳ್ಳೆಯ ಕೆಲಸ ಮಾಡಿ ಸಂಸ್ಕಾರವನ್ನು ಬಿತ್ತುತ್ತಿದ್ದಾರೆ.

ಭಾರತದಲ್ಲಿ ನಾವು ಶ್ರೀಮಂತರನ್ನು ಪೂಜಿಸುವುದಿಲ್ಲ, ಬಲಿಷ್ಠರನ್ನು ಪೂಜಿಸುವುದಿಲ್ಲ. ಆದರೆ ನಾವು ಗುಣವಂತರನ್ನು ಪೂಜಿಸುತ್ತೇವೆ. ನೋಡಿ ಇಲ್ಲಿರುವ ಮಹಾ ಸಂತರಾದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಕೋಟ್ಯಾಧಿಪತಿಯೇ? ಧನವಂತರೇ? ಅಥವಾ ಬಂದೂಕ, ಖಡ್ಗವನ್ನು ಹಿಡಿದು ಹೋರಾಟ ಮಾಡುವ ಬಲಿಷ್ಠರೇ !! ಅಲ್ಲ. ಆದರೆ ಅವರು ಗುಣವಂತರು. ಒಬ್ಬ ಗುಣವಂತನಿದ್ದರೆ ಸಾವಿರಾರು ಧನಿಕರು ತಮ್ಮ ಶಿರವನ್ನು ಆ ಗುಣವಂತನ ಕಾಲಿಗೆ ಬಾಗಿಸುವರು. ನಾನು ಇಲ್ಲಿ ಕುಳಿತಿರುವ ಕರ್ನಾಟಕದ ಜನರಿಗೆ ಹೇಳುವುದೇನೆಂದರೆ ಜೀವನದಲ್ಲಿ ಪ್ರೌಢತೆಯಿಂದ ಬದುಕಿ, ಸ್ವಾಮಿ ವಿವೇಕಾನಂದರು ಹೇಳಿದ್ದಾರೆ 'Strength is life and weakness is death' ಬಲವಂತರಾಗಿ, ಶೌರ್ಯರಾಗಿ ಮುಂದೆ ಸಾಗಿ ಆದರೆ ಇವುಗಳನ್ನು ಬೇರೆಯವರಿಗೆ ಹಾಳು ಮಾಡಲು ಬಳಸಬೇಡಿ. ಆದರೆ ಇವುಗಳು ಒಳ್ಳೆಯ ಕಾರ್ಯ ಮಾಡಲು ಇರಬೇಕು. ಇಲ್ಲಿ ಕುಳಿತಿರುವ ಎಲ್ಲಾ ಧರ್ಮಗುರುಗಳು ಉಪದೇಶ ಮಾಡುತ್ತಾರೆ. ಅದೇನೆಂದರೆ ಬಡವರ 'ಸೇವೆ ಮಾಡಿ' ಎಂದು. ಬಡವರೆಂದರೆ ಕೇವಲ ಆರ್ಥಿಕವಾಗಿ ದುರ್ಬಲರಲ್ಲ. ಜ್ಞಾನ ಇಲ್ಲದ ಅನಕ್ಷರಸ್ಥರನ್ನು, ಅನ್ನ, ಮನೆ ಇಲ್ಲದ ಬಡವರಿಗೆ ಎಲ್ಲ ರೀತಿಯ ಸೇವೆ ಮಾಡಿ ಎಂದಿದ್ದಾರೆ. ಇಲ್ಲಿ ಕುಳಿತಿರುವವರಿಗೆ ನಾನು ಹೇಳುವುದೇನೆಂದರೆ ನೀವೆಲ್ಲ ಯುವಕರು, ಮನಸ್ಸು ಮಾಡಿದರೆ ನಮ್ಮ ಭರತಖಂಡವನ್ನು ಯುವ ಭಾರತವನ್ನಾಗಿ ರೂಪಿಸುವ ಶಕ್ತಿ ನಿಮ್ಮಲ್ಲಿದೆ. ನಮ್ಮ ದೇಶದಲ್ಲಿ ಬಡತನ, ಅಜ್ಞಾನ, ಅನಾರೋಗ್ಯ ಇವುಗಳ ನಿವಾರಣೆ ಕೇವಲ ಯುವಕರ ಏಕತೆಯಿಂದ ದೃಢ ಮನಸ್ಸಿನಿಂದ ಸಂಕಲ್ಪ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಯುವಕರು ಎಂದರೆ ನನ್ನ ದೃಷ್ಟಿಯಲ್ಲಿ ಸದಾ ಚಟುವಟಿಕೆಯಿಂದ ಇರುವ ವ್ಯಕ್ತಿ. ನಿಮಗೆ ಮೂವತ್ತು ವರ್ಷ ವಯಸ್ಸಾಗಿದೆ ಮತ್ತು ಮನೆಯಲ್ಲಿ ಟಿ.ವಿ. ನೋಡುತ್ತಾ ಸುಮ್ಮನೆ ಕಾಲಹರಣ ಮಾಡುತ್ತಾ ಚಟುವಟಿಕೆ ಹಾಗೂ ಗುರಿ ಇಲ್ಲದಿದ್ದರೆ ನೀವು ಯುವಕರಾಗಿರಲಾರಿರಿ. ಯುವಕನೆಂದರೆ ಸದಾ ಚೈತನ್ಯ ಉಳ್ಳವನು. ಯಾರು ಕಾರ್ಯಶೀಲರೋ ಅವರು ಯುವಕರು. ಅವರೆಂದರೆ ಇಲ್ಲಿ ಕುಳಿತಿರುವ ೧೧೦ ವರ್ಷದ ಪೂಜ್ಯರಾದ ಡಾ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ೨೫೦ .ಹಾಸಿಗೆಯ ಆಸ್ಪತ್ರೆಯ ನಿರ್ಮಾತೃ ಆಗಿದ್ದಾರೆ. ಇವರು ಕರ್ಮಶೀಲರಾಗಿದ್ದಾರೆ.

ನಾನು ನಿಮ್ಮೆಲ್ಲರಿಗೂ ತಿಳಿಸುವುದೇನೆಂದರೆ ಜಗತ್ತಿನಲ್ಲಿ ಉತ್ತಮವಾಗಿ ಬದುಕುವ ರೀತಿ ಕೇವಲ ಭಾರತೀಯ ಸಂಸ್ಕೃತಿಯದಾಗಿದೆ. ಹಾಗೂ ಈ ಜ್ಞಾನವನ್ನು ಕೊಡುವವರು ನಮ್ಮ ಮಧ್ಯೆ ಇರುವ ಸಂತರುಗಳಾಗಿದ್ದಾರೆ. ಅವರೇ ಹೇಳುವಂತೆ ಸತ್ಯ ಹೇಳುವುದು, ಕರ್ತವ್ಯ ನಿರ್ವಹಿಸುವುದು ಬಹಳ ಮುಖ್ಯ. ನೀನು ಕೇವಲ ಕರ್ಮ ಮಾಡು ಅದರ ಫಲವನ್ನು ಅಪೇಕ್ಷಿಸಬೇಡ. ಗೆಳೆಯರೇ ನಾವುಗಳು ಕೆಲಸ ಮಾಡಬೇಕು. ಅದು ಹೇಗಿರಬೇಕೆಂದರೆ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಸಾಧುಸಂತರು ಸಜ್ಜನರು ಗುಣಶೀಲರ ರಕ್ಷಣೆ ಮಾಡಬೇಕು ಮತ್ತು ದುಷ್ಟರನ್ನು ನಾಶಪಡಿಸಬೇಕು. ಇದನ್ನು ಮಾಡುವ ಮೊದಲು ನಾವು ನಿಷ್ಠರಾಗಿರಬೇಕು. ಜೊತೆಗೆ ಸಾಧುಸಂತರ, ಸಜ್ಜನರ ಉಪದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಲ್ಲಿ ಕುಳಿತಿರುವ ದೇವರು ಎಲ್ಲರಿಗೂ ಅವಶ್ಯಕತೆಗಿಂತ ಹೆಚ್ಚು ನೀಡಿದ್ದಾರೆ. ಆದರೆ ನೀವು ಧನವಂತರಲ್ಲ. ಏಕೆಂದರೆ ಧನವಂತರೆಂದರೆ ಸಮಾಜದ ಕೆಲಸಕ್ಕಾಗಿ ಹೆಚ್ಚು ದಾನ ನೀಡುತ್ತಾರೆ. ರಾತ್ರಿ ಮಲಗುವಾಗ ಯೋಚನೆ ಮಾಡಿ ಸಮಾಜ ನಮಗೆಲ್ಲಾ ಏನೆಲ್ಲಾ ಕೊಟ್ಟಿದೆ ಆದರೆ ನಾವು ಸಮಾಜಕ್ಕೆ ಏನು ಕೊಟ್ಟಿದ್ದೇವೆ. ಸರ್ಕಾರವು ತೆರಿಗೆಯಿಂದ ನಡೆಯುತ್ತದೆ. ಎಷ್ಟು ತೆರಿಗೆ ಬರುತ್ತದೆಯೋ ಅದರಂತೆ ಸರ್ಕಾರವು ಆರೋಗ್ಯ, ಕೃಷಿ, ಶಿಕ್ಷಣ ಎಲ್ಲಾ ಕ್ಷೇತ್ರದಲ್ಲೂ ಜನರಿಗಾಗಿ ಸೇವೆ ಸಲ್ಲಿಸುತ್ತದೆ. ನಾನು ನಿಮಗೆಲ್ಲಾ ಕೇಳುತ್ತಿದ್ದೇನೆ. ಇದರಲ್ಲಿ ನಿಮ್ಮ ಯೋಗ್ಯವಾದ ದಾನ ಯಾವುದು, ಆದರೆ ನಾನು ಹೇಳುತ್ತಿದ್ದೇನೆ. ದೊಡ್ಡ ಯೋಗದಾನ ಇರುವುದು ಧರ್ಮಗುರುಗಳಲ್ಲಿ. ಈ ರೀತಿಯ ಸೇವೆಗಾಗಿ ನಾವು ಅವರಿಗೆ ಹಣ ನೀಡಬೇಕು. ಗೆಳೆಯರೇ ನೀವುಗಳು ಕೂಡ ಒಂದೊಂದು ಬಡ ಕುಟುಂಬವನ್ನು ದತ್ತು ತೆಗೆದುಕೊಂಡಲ್ಲಿ ನೀವೂ ಕೂಡ ಸಮಾಜದ ಸೇವೆಯಲ್ಲಿ ಕೈಜೋಡಿಸ ಬಹುದಾಗಿದೆ. ಈ ಕಾರ್ಯ ನಿಮ್ಮಿಂದಾಗದಿದ್ದಲ್ಲಿ ಸೇವೆ ಮಾಡುವ ಕ್ಷೇತ್ರಕ್ಕೆ ದಾನ ಮಾಡಿ, ನಾನು ಸ್ವಾಮೀಜಿಯ ಇಚ್ಛಾಶಕ್ತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇನೆ. ಎಲ್ಲಾ ಧರ್ಮಗಳಿಗಿಂತ ಮಾನವೀಯತೆ ದೊಡ್ಡದ್ದಾಗಿದೆ ಎಂಬ ಮಾತುಗಳ ಮೂಲಕ ಈ ಸಂಸ್ಥೆಗೆ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ.

ಭಾರತ್ ಮಾತಾಕಿ ಜೈ, ಧನ್ಯವಾದಗಳು

ಕನ್ನಡ ಅನುವಾದ : ಸೋಮಸುಂದರ

(ತುಮಕೂರಿನಲ್ಲಿ ಸೆಪ್ಟೆಂಬರ್ ೧೦, ೨೦೧೭ ರಂದು ಏರ್ಪಡಿಸಿದ್ದ ಸಿದ್ಧಗಂಗಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯಪಾಲರು ಮಾಡಿದ ಭಾಷಣ)

ಬಯಕೆಯ ಬಳ್ಳಿ

– ಶ್ರೀ ಸಿದ್ಧೇಶ್ವರ ಸ್ವಾಮಿಗಳು *

ನಮ್ಮೊಳಗೆ ಮನಸ್ಸಿದೆ. ಹೊರಗೆ ಜಗತ್ತಿನಲ್ಲಿ ವಸ್ತುಗಳಿವೆ. ನಮ್ಮ ಮನಸ್ಸು ಹಾಗೂ ಜಗತ್ತಿನ ವಸ್ತುಗಳ ಮಧ್ಯದಲ್ಲಿ ಇಂದ್ರಿಯಗಳಿವೆ. ಮನಸ್ಸು ಕಣ್ಣಿನ ಮೂಲಕ ರೂಪವನ್ನು ನೋಡುತ್ತದೆ. ಕಿವಿಯ ಮೂಲಕ ಶಬ್ದವನ್ನು ಕೇಳುತ್ತದೆ. ಹೀಗೆ ಇಂದ್ರಿಯಗಳಿಂದ ಮನಸ್ಸು ಹಾಗೂ ಹೊರ ಜಗತ್ತಿನ ವಸ್ತುಗಳ ಸನ್ನಿಕರ್ಷ ಅಥವಾ ಸಂಯೋಗವಾಗುತ್ತದೆ. ಅದೇ ವಿಷಯಸಂಗ.

ವಸ್ತುವಿನ ಸಂಗವು ಹಿತಕರವಾಗಿದ್ದರೆ ಮನದಲ್ಲಿ ಸುಖದ ತೆರೆಗಳು ಏಳುತ್ತವೆ. ನಂತರ ಆ ವಸ್ತುವಿನ ಮೇಲೆ ಪ್ರೇಮವುಂಟಾಗುತ್ತದೆ. ಅದೇ 'ರಸಭಾವ'. ನೋಡಿರದ, ಮುಟ್ಟಿರದ, ಕೇಳಿರದ ಅಥವಾ ಪರಿಭಾವಿಸದ ವಸ್ತುವಿನ ಮೇಲೆ ನಮಗೆಂದೂ ಪ್ರೇಮವುಂಟಾಗದು. ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಷಯ ವಸ್ತುವಿನ ಸಂಗವುಂಟಾದರೆ ಮಾತ್ರ ಪ್ರೇಮರಸ ನಿರ್ಮಾಣವಾಗುತ್ತದೆ.

'ಸಂಗಾತ್ ಸಂಜಾಯತೇ ಕಾಮಃ.........' ಗೀತಾ ೨ (೬೨). ಈ ರಸದ ಸ್ವಭಾವವೇ ವಿಚಿತ್ರ. ಅದರಿಂದ ಸುಖಕ್ಕೆ ಕಾರಣವಾದ ವಸ್ತುವು ಸದಾ ಹತ್ತಿರದಲ್ಲಿಯೇ ಇರಬೇಕೆನಿಸುತ್ತದೆ. ವಿಷಯ ವಸ್ತುವು ಒಂದಿಷ್ಟು ಅಗಲಿದರೂ ಸಾಕು, ಮನದಲ್ಲಿ ಒಂದು ಬಗೆಯ ಕೊರತೆ, ಅಸಂತೋಷ ಉಂಟಾಗುತ್ತದೆ. ಈ ಕೊರತೆಯನ್ನು ಕಳೆಯುವುದಕ್ಕಾಗಿ ಆ ವಸ್ತುವು ಮತ್ತೆ ಮತ್ತೆ ಬೇಕೆಂಬ 'ಬಯಕೆ' ಉಂಟಾಗುತ್ತದೆ.

ಮೊದಲು ವಿಷಯ ವಸ್ತುವಿನ ಸಂಗ. ಅದರಿಂದ ವಸ್ತುವಿನ ಮೇಲೆ ಪ್ರೇಮವುಂಟಾಗಿ ಸುಖಾನುಭವ. ನಂತರ ಆ ವಸ್ತುವಿನ ಅಗಲುವಿಕೆಯಿಂದ ಉಂಟಾದ ಕೊರತೆಯನ್ನು ನೀಗುವುದಕ್ಕಾಗಿ ಬಯಕೆ. ಅದರಿಂದ ಮತ್ತೆ ವಿಷಯಗಳ ಸಂಗ, ಸುಖ–ಬಯಕೆ. ಹೀಗೆಯೇ ಈ 'ವಿಷಯವರ್ತುಲ' ನಿರಂತರ ಮುಂದುವರಿಯುತ್ತದೆ. ಅದೇ ಬಂಧನ !

ನಶ್ಯವು ಒಂದು ಒಣಗಿದ ಎಲೆಯ ಪುಡಿ. ಅದರಲ್ಲಿ ಯಾವ ಪೌಷ್ಟಿಕಾಂಶಗಳಿಲ್ಲ. ಸಾತ್ವಿಕಗುಣಗಳಿಲ್ಲ. ಸ್ನೇಹಿತರು ಅದರ ವೈಭವವನ್ನು ವರ್ಣಿಸುತ್ತಾರೆ. ಗುಣಗಾನ ಮಾಡುತ್ತಾರೆ. ಆಗ ವ್ಯಕ್ತಿಯು ನಶ್ಯದ ಸಂಗ ಮಾಡುತ್ತಾರೆ. ಪ್ರಾರಂಭದಲ್ಲಿ ದೇಹ ಪ್ರತಿಭಟಿಸುತ್ತದೆ. ಬೇಡವೆನ್ನುತ್ತದೆ. ಆದರೂ ಮಿತ್ರರ ಒತ್ತಾಯಕ್ಕೆ ಮಣಿದು ನಶ್ಯದ ಪುಡಿಯನ್ನು ಉಪಯೋಗಿಸುತ್ತಾನೆ. ಒಂದು ಬಗೆಯ ಸುಖದ ಭಾಸವಾಗುತ್ತದೆ. ಮತ್ತೆ ಮತ್ತೆ ಅದೇ ಬೇಕೆಂಬ ಬಯಕೆಯಾಗುತ್ತದೆ. ಈ ಬಯಕೆಯ ಬೀಜವೆ ತುದಿಮೊದಲಿಲ್ಲದ ಬಳ್ಳಿಯಾಗಿ ಬೆಳೆದು ಚಟವಾಗಿಬಿಡುತ್ತದೆ.

ಆದ್ದರಿಂದ ಬಯಕೆಯ ವಸ್ತು ಯಾವಾಗಲೂ ಒಳ್ಳೆಯದೇ ಇರಬೇಕು, ಸುಂದರವಾಗಿಯೇ ಇರಬೇಕೆಂದೇನಿಲ್ಲ. ಭೀಮನ ಆರ್ಯಸೌಂದರ್ಯವೆಲ್ಲಿ ? ಹಿಡಿಂಬೆಯ ಭೀಕರ ರೂಪವೆಲ್ಲಿ ? ಈರ್ವರೂ ಭೇಟಿಯಾದರೂ, ಪರಸ್ಪರ ನೋಡಿದರು, ಆಕರ್ಷಣೆಗೆ ಒಳಗಾದರು. ಸಂಗವಾಯಿತು. ಸಂತತಿಯೂ ಆಯಿತು. ಪ್ರೇಮಕ್ಕೆ ಕಣ್ಣಿಲ್ಲ ! ಅಥವಾ ಪ್ರೇಮವು ವಸ್ತುವಿನ ದೋಷವನ್ನು ಪರಿಗಣಿಸುವುದಿಲ್ಲ.

ಸಾಕ್ರೆಟಿಸ್ ಅಥೆನ್ಸ್ ಪಟ್ಟಣದ ಮಹಾನ್ ಸಂತ. ಗ್ರೀಸ ದೇಶವೇ ಆತನನ್ನು ಮಹಾತ್ಮನೆಂದು ಗೌರವಿಸಿತ್ತು. ಅವನೊಬ್ಬ ಬಡಿಗ. ಸಾದಾಜೀವನ. ಆತನ ಮತಿಯಲ್ಲಿ ಸರಸ್ವತಿ ಅವತರಿಸಿದ್ದಳು. ಅವನ ನುಡಿಯಲ್ಲಿ ಜೇನು ಮಡುಗಟ್ಟಿತ್ತು. ಅಥೆನ್ಸ್ ನಗರದ ನಿವಾಸಿಯ ಜೀವನದ ಯಾವುದೇ ಸಮಸ್ಯೆಯಿರಲಿ, ಅದನ್ನು ಪರಿಹರಿಸುವ ಏಕೈಕ ಸ್ಥಳವಾಗಿತ್ತು ಸಾಕ್ರೆಟಿಸನ ಕುಟೀರ.

ಒಂದು ದಿನ ೨೫ ವರ್ಷದ ಯುವಕ ಸಾಕ್ರೆಟಿಸ್‌ನ ಬಳಿಗೆ ಬಂದ. ಅವನಿಗೆ ವಂದಿಸಿ ಕುಳಿತ. ಯುವಕನ ಮುಖದಲ್ಲಿ ಖಿನ್ನತೆಯಿತ್ತು. ಸಾಕ್ರೆಟಿಸ್ ಕೇಳಿದ, "ಬಂದ ಕಾರಣ ?" "ನನ್ನದೊಂದು ದೊಡ್ಡ ಸಮಸ್ಯೆ !" ಎಂದ ಯುವಕ. "ಏನದು ?" ಎಂದ ಸಾಕ್ರೆಟಿಸ್.

"ನನ್ನ ಮದುವೆಯಾಗಿ ಒಂದೂವರೆ ವರ್ಷವಾಯಿತು. ನನ್ನ ಹೆಂಡತಿ ಅತ್ಯಂತ ಕುರೂಪಿ. ಅವಳನ್ನು ನೋಡಿದರೆ ನನಗೆ ಹೋಗಬೇಕೆನಿಸುವುದಿಲ್ಲ. ಅವಳ ಕೈಯಿಂದ ಉಣ್ಣಲು

* ಜ್ಞಾನಯೋಗಾಶ್ರಮ, ಬಿಜಾಪುರ ಜಿಲ್ಲೆ.

ತಿನ್ನಲು ಬೇಸರ. ಇಂಥ ಹೆಂಡತಿಯನ್ನು ಕಟ್ಟಿಕೊಂಡು ನಾನಿನ್ನೂ ೫೦–೬೦ ವರ್ಷ ಹೇಗೆ ಬದುಕಲಿ ? ಇದಕ್ಕೆ ನೀವೇನಾದರೂ ಪರಿಹಾರ ಕೊಡುವುದಾದರೆ ನಾನು ಬದುಕುತ್ತೇನೆ. ಇಲ್ಲದಿರೆ ನನಗೀ ಜೀವನವೇ ಬೇಡವಾಗಿದೆ" ಎಂದ ಯುವಕ.

"ಇದಾವ ಮಹಾಸಮಸ್ಯೆ" ಎಂದು ಸಾಕ್ರೆಟಿಸ್ ನಕ್ಕು ನುಡಿದ. ಯುವಕನಿಗೆ ಹೋದ ಜೀವ ಬಂದಾಯಿತು. ಸಾಕ್ರೆಟಿಸ್ ಕೇಳಿದ, "ಮದುವೆಗೆ ಮುಂಚೆ ನಿನ್ನ ಹೆಂಡತಿಯನ್ನು ನೀನು ನೋಡಿದ್ದೆಯಾ ?" "ನೋಡುವುದೇನು ಬಂತು, ನಮ್ಮ ತಾಯಿ ತಂದೆ ಬೇಡವೆಂದರೂ ನಾನೇ ಒಪ್ಪಿ ಒಲಿದು ಛಲದಿಂದ ಇವಳನ್ನು ಮದುವೆ ಮಾಡಿಕೊಂಡೆ" ಎಂದನು ಯುವಕ.

"ಹಾಗಾದರೆ ಮದುವೆಗೆ ಮುಂಚೆ ಇದೇ ಹೆಂಡತಿ ನಿನಗೆ ಸುರಸುಂದರಿಯಾಗಿ ಕಂಡಳು. ಅಂತೆಯೇ ಯಾರೂ ಬೇಡವೆಂದರೂ ನೀನು ಛಲದಿಂದ ಮದುವೆಯಾದೆ. ಅಂದು ನಿನ್ನ ಕಣ್ಣಲ್ಲಿ ಪ್ರೇಮವಿತ್ತು. ಅವಳು ಸುಂದರಿಯಾಗಿ ಕಂಡಳು. ಇಂದು ಆ ಪ್ರೇಮದ ಮಂಜು ಕರಗಿ ಹೋಗಿ ನಿನ್ನ ಚಿತ್ತ ಚಂಚಲವಾಗಿದೆ. ಕಾರಣ ಅವಳು ಕುರೂಪಿಯಾಗಿ ಕಾಣಿಸುತ್ತಿದ್ದಾಳೆ. ಮತ್ತೆ ನೀನು ಆ ಪ್ರೇಮದ ಕಣ್ಣಿನಿಂದ ನೋಡು. ಅವಳೇ ನಿನಗೆ ವಿಶ್ವಸುಂದರಿಯಾಗಿ ಕಾಣುತ್ತಾಳೆ !" ಎಂದನು ಸಾಕ್ರೆಟಿಸ್. ಸಂತರ ಮಾತಿನಂತೆ ನಡೆದು ಯುವಕನು ಸುಖಿಯಾದನು.

ಜಗತ್ತಿನಲ್ಲಿ ಯಾವ ವಸ್ತುವೂ ತನ್ನಷ್ಟಕ್ಕೆ ತಾನು ಕುರೂಪವಲ್ಲ. ಸುರೂಪವು ಅಲ್ಲ. ನಮ್ಮ ಪ್ರೇಮಭಾವವನ್ನು ಅದು ಅವಲಂಬಿಸಿದೆ. ಮನುಷ್ಯನು ಬಯಸುವ ವಸ್ತುವು ಯಾವುದೇ ಇರಲಿ, ಪ್ರೇಮವು ಅದನ್ನು ಸುಂದರಗೊಳಿಸುತ್ತದೆ.

ಸಂಸಾರಿಗೆ–ಸನ್ಯಾಸಿಗೆ, ಬಡವ–ಬಲ್ಲಿದರಿಗೆ, ಬಯಕೆ ಸಾಮಾನ್ಯವಾಗಿ ಇದ್ದದ್ದೇ.ನಮ್ಮ ಬಯಕೆಯ ವಸ್ತುಗಳು ಭಿನ್ನ ಭಿನ್ನವಾಗಿರಬಹುದು. ಬಯಕೆ ಮಾತ್ರ ಒಂದೇ. ಸಂಸಾರಿಗೆ ಹೊಲಮನೆಯ ಬಯಕೆ, ಸನ್ಯಾಸಿಗೆ ಮಠಮಂದಿರದ ಬಯಕೆ. ಬಡವನಿಗೆ ಹಿಟ್ಟುಬಟ್ಟೆಯ ಬಯಕೆ, ಬಲ್ಲಿದನಿಗೆ ಘನತೆ ಗೌರವದ ಬಯಕೆ. ಬಯಕೆಯಿಲ್ಲದವರಾರು ಈ ಭುವಿಯಲ್ಲಿ?

ಬಯಕೆ ಇರಬಾರದೆಂದಲ್ಲ. ಆ ಬಯಕೆಯೆ ಒಂದು ಬಂಧನವಾಗಬಾರದು. ದುಃಖಕ್ಕೆ ಕಾರಣವಾಗ ಬಾರದಷ್ಟೆ. ಬಯಸಿದ ವಸ್ತುವಿಗಾಗಿ ಮನುಷ್ಯ ಹಪಹಪಿಸುತ್ತಾನೆ. ಅದರ ಹಿಂದೆ ಧಾವಿಸುತ್ತಾನೆ. ಕೊನೆಗೆ ಅಮೂಲ್ಯವಾದ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ಇಂಥ ಬಯಕೆಯಿಂದೇನು ಪ್ರಯೋಜನ?

ಮಾನವನ ಬಯಕೆಗಳಿಗೆ ಕೊನೆಯಾದರೂ ಎಲ್ಲಿದೆ ? ಅನ್ನಪಾನ, ವಸ್ತ್ರ, ಒಡವೆ, ಸಿರಿಸಂಪದ, ಸತಿಸುತರು, ಮನೆಮಠ, ಕೀರ್ತಿವಾರ್ತೆ......! ಹೀಗೆಯೇ ಈ 'ಬಯಕೆಯ ಬಳ್ಳಿ' ಜಗದಗಲ ಮುಗಿಲಗಲ ಹಬ್ಬಿ ಹರವಿದೆ. ಈ ಬಯಕೆಯ ಬಲೆಯೊಳಗೆ ಆಶೆಯ ಪಾಶದಲ್ಲಿ ಇರುವವರೆಗೆ ಮನುಷ್ಯನಿಗೆ ದುಃಖ ತಪ್ಪಿದ್ದಲ್ಲ. ಅಂತೆಯೇ ಬುದ್ಧನು, ಮಾನವನ ಸಮಸ್ತ ದುಃಖದ ಮೂಲ ಆಶೆ–ಅತ್ಯಾಶೆ ಎಂದನು.

ಒಬ್ಬನು ಸಿರಿವಂತ ಮಿತ್ರನ ಮನೆಗೆ ಹೋದ. ಅವರ ಮನೆಯಲ್ಲಿ ಟಿ.ವಿ., ಟೇಪ್ರೆಕಾರ್ಡರ್ ಮೊದಲಾದ ಐಷಾರಾಮದ ವಸ್ತುಗಳ ನೋಡಿದ. ತಾನೂ ತರಬೇಕೆಂದು ಬಯಸಿದ, ತಂದ. ಇನ್ನೊಂದು ದಿನ ಈತ ಮೈಸೂರಿಗೆ ಹೋದ. ಮೈಸೂರಿನಲ್ಲಿರಬೇಕೆಂದು ಬಯಸಿದ. ಹಳ್ಳಿಯ ಹೊಲ–ಮನೆ ಮಾರಿ ಮೈಸೂರಿಗೆ ಹೋದ. ಅಲ್ಲಿಂದ ಬೆಂಗಳೂರಿಗೆ ಬಂದ. ಆಗಲೂ ಸಮಾಧಾನವಾಗಲಿಲ್ಲ. 'ವಿದೇಶದಲ್ಲಿದ್ದರೆ.......?' ಎಂದುಕೊಂಡ. ಹೀಗಾಗಿ ಇಡೀ ಜೀವನ ಬಯಸುವುದರಲ್ಲೇ ಕಳೆಯಿತು. ಅನುಭವಿಸುವ ಕ್ಷಣವೆಲ್ಲಿ ಉಳಿಯಿತು ?

ಒಂದು ಘಟನೆ. ಫ್ರಾನ್ಸ್ ದೇಶದಲ್ಲಿ ನಡೆದದ್ದು. ಆತ ಆಗರ್ಭ ಸಿರಿವಂತ. ಬೇಸಿಗೆಯ ಸಮಯದಲ್ಲಿ ಉಪಯೋಗಕ್ಕೆ ಬರುವಂಥ ಒಂದು ಭವ್ಯ ವಿಶ್ರಾಂತಿ ಧಾಮವನ್ನು ಕಟ್ಟಿಸಬೇಕೆಂದು ಬಯಸಿದ. ಪ್ರಶಸ್ತವಾದ ಬೆಟ್ಟದ ಸ್ಥಳವನ್ನು ಆಯ್ಕೆ ಮಾಡಿದ. ತಜ್ಞರಿಂದ ಸುಂದರವಾದ ನೀಲಿನಕ್ಷೆಯನ್ನು ತಯಾರಿಸಿದ. ದೇಶ ವಿದೇಶಗಳಿಂದ ಅದಕ್ಕೆ ಬೇಕಾಗುವ ಸರಕುಗಳನ್ನು ತರಿಸಿದ. ನೂರಾರು ಕೆಲಸಗಾರರನ್ನು ಹಿಡಿದು ೨೫ ವರ್ಷಗಳವರೆಗೆ ಮನೆಯ ಕಟ್ಟಿ ಮುಗಿಸಿದ. ಈಗ ಆತನಿಗೆ ೬೧ ವರ್ಷ ವಯಸ್ಸು.

ನಯನ ಮನೋಹರವಾದ ಅರಮನೆಯು ಸಿದ್ಧವಾಗಿದೆ. ಉದ್ಘಾಟನೆಯ ನಿಮಿತ್ತ ದೊಡ್ಡ ಸಮಾರಂಭ ಏರ್ಪಡಿಸಿದ. ಸಾವಿರಾರು ಜನ ಪ್ರತಿಷ್ಠಿತರನ್ನು ಆಮಂತ್ರಿಸಿದ. ಅರಮನೆಯನ್ನು ನೋಡಿದವರೆಲ್ಲ ಈ ಧನಿಕನನ್ನು ಮನಸಾರೆ ಕೊಂಡಾಡಿದರು.

ಉದ್ಘಾಟನೆಯ ಸಮಯ, ಮೊದಲು ಧರ್ಮಗುರುಗಳು ಬಾಗಿಲು ತೆಗೆದರು. ಕೈಯಲ್ಲಿ ಧರ್ಮಗ್ರಂಥ ಹಿಡಿದು ಒಳಗೆ ಪ್ರವೇಶಿಸಿದರು. ನಂತರ ಗಣ್ಯರು ಅವರನ್ನು ಹಿಂಬಾಲಿಸಿದರು.

ಆ ಬಳಿಕ ಧನಿಕ ಮಾಲೀಕ ಬಂದ. ಒಂದು ಕಾಲು ಮನೆಯೊಳಗೆ ಹಾಕಿದ. ಇನ್ನೊಂದು ಕಾಲು ಎತ್ತಿ ಒಳಗಿಡಬೇಕಾಗಿತ್ತು. ಕಣ್ಣಿಗೆ ಕತ್ತಲೆ ಕವಿದು ಮಾಲೀಕ ಕುಸಿದು ಬಿದ್ದ! ಮತ್ತೆ ಮೇಲೆ ಏಳಲಿಲ್ಲ. ಭವ್ಯ ಮನೆಯೊಳಗೆ ಹೋಗಲಿಲ್ಲ!

ಮನುಷ್ಯನು ಬಯಕೆಯ ಅಷ್ಟಪದಿಯ ಹಿಡಿತಕ್ಕೆ ಸಿಕ್ಕು ಆಯುಷ್ಯವನ್ನು ವ್ಯರ್ಥವಾಗಿ ಕಳೆಯುತ್ತಾನೆ. ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಾನೆ.

ಎಷ್ಟೋ ಜನ ನೌಕರಿ ಮಾಡುವವರು ಆಯುಷ್ಯದುದ್ದಕ್ಕೂ ದುಡಿಯುತ್ತಾರೆ. ಜೀವ ವಿಮೆಗೆಂದೋ ಮತ್ತಿತರ ಕಾರಣಗಳಿಗೆಂದೋ ಸಂಬಳವನ್ನು ತೆಗೆದಿಡುತ್ತಾರೆ. ನಿವೃತ್ತರಾಗುವಾಗ ಸುಮಾರು ೬೦ ವರ್ಷ ವಯಸ್ಸು. ಆನಂತರ ಉಳಿಸಿದ ಸಂಬಳದಿಂದ ಮನೆಮಾರು ಕಟ್ಟಲು ಬಯಸುತ್ತಾರೆ. ಬಯಕೆ ಪೂರೈಸುವುದರಲ್ಲಿ ಆಯುಷ್ಯವೇ ಮುಗಿದಿರುತ್ತದೆ.

ಬೆಳಗಿನಿಂದ ಸಂಜೆಯವರೆಗೆ ಅಡುಗೆಯ ಮಾಡಿ ದಣಿದು, ಉಣಲಿಕ್ಕಾಗದೆ ಉಪವಾಸ ಮಲಗಿದವನಂತೆ ಈ ಜೀವನ. ಅಂತೆಯೇ ಅಲ್ಲಮಪ್ರಭುದೇವರು ಹೇಳಿದರು, 'ಅಟ್ಟಡಲುಂಟು, ಅಟ್ಟುಣ್ಣಲಿಲ್ಲ ನೋಡಾ ಗುಹೇಶ್ವರ!'

ಈ ಬಯಕೆಗೆ ಕಾರಣವಾದ ವಿಷಯ ವಸ್ತುಗಳ 'ಸಂಗ'ದ ಮಹಿಮೆ ವಿಚಿತ್ರವಾದುದು. ಹೋಟೆಲ್ ತಿಂಡಿಯ ಸಂಗ ಮಾಡಿದವರಿಗೆ ಮನೆಯ ಊಟ ಹಿಡಿಸದು. ಅಲ್ಕೋಹಾಲ್ ಸಂಗ ಮಾಡಿದವರಿಗೆ ಹಸುವಿಗೆ ಹಾಲು ಸೇರದು. ಹೊಗೆಬತ್ತಿಯ ಸಂಗ ಮಾಡಿದವರಿಗೆ ಗಂಧದ ಬತ್ತಿ ಆಗದು.

ಮನುಷ್ಯನು ಹೊಸ ಹೊಸ ವಿಷಯಗಳ ಸಂಗ ಮಾಡುತ್ತಾನೆ. ಹೊಸ ಹೊಸ ಬಯಕೆಗಳು ಹುಟ್ಟುತ್ತಾ ಹೋಗುತ್ತವೆ. ಈ ಜಗತ್ತಿನಲ್ಲಿ ಇರುವ ವಿಷಯಗಳಿಗೂ ಕೊನೆಯಿಲ್ಲ. ವಿಷಯಗಳ ಸಂಗದಿಂದಾಗುವ ಬಯಕೆಗಳಿಗೂ ಕೊನೆಯಿಲ್ಲ. ಹೀಗೆಯೇ ಈ 'ಬಯಕೆಯ-ಬಳ್ಳಿ'ಯು ಬದುಕಿನುದ್ದಕ್ಕೂ ಹಬ್ಬಿ ಜೀವನನ್ನು ಸಂಸಾರದಲ್ಲಿ ಕಟ್ಟಿ ಕೆಡಹುತ್ತದೆ.

ಸಾಧಕನು ಈ 'ಬಯಕೆಯ-ಬಳ್ಳಿ'ಯನ್ನು ಬೇರು ಸಹಿತ ಕಿತ್ತೆಸೆಯಬೇಕು. ಆಗ ಅವನು ಈ ಸಂಸಾರದ ಬಂಧನದಿಂದ ಮುಕ್ತನಾಗುತ್ತಾನೆ. ಅನಾರೆಂಬುದನ್ನು ಅರಿಯುತ್ತಾನೆ.

ಅಭಿನಂದನೆ



ಪ್ರೊ. ಚಂದ್ರಶೇಖರ ಪಾಟೀಲ್

ಮೈಸೂರಿನಲ್ಲಿ ನಡೆಯಲಿರುವ ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಪ್ರೊ. ಚಂದ್ರಶೇಖರ ಪಾಟೀಲ್ ಅವರು ಆಯ್ಕೆಯಾಗಿರುವುದಕ್ಕೆ **'ಸಿದ್ಧಗಂಗಾ'** ಅಭಿನಂದಿಸುತ್ತದೆ.

'ಚಂಪಾ' ಎಂದೇ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ಪ್ರೊ. ಚಂದ್ರಶೇಖರ ಪಾಟೀಲ್ ಅವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಹಲವಾರು ಕನ್ನಡ ಪರ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವ ಚಂಪಾ ಅವರು ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಗೋಕಾಕ್ ಚಳುವಳಿಗೆ ಪ್ರೇರಣೆ ನೀಡಿದ ಪ್ರಮುಖರಲ್ಲಿ ಒಬ್ಬರು. ೨೦೦೪ ರಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಕೆಲವು ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಿದರು. ಅಂತರಂಗ, ನಾಟಕಕೂಟ, ಪ್ಯಾಳ ಮುಂತಾದ ಸಂಸ್ಥೆಗಳ ಮೂಲಕ ರಂಗ ಚಳುವಳಿಯಲ್ಲಿ ಸಕ್ರಿಯವಾಗಿದ್ದಾರೆ. ಕಳೆದ ಐವತ್ತು ವರ್ಷಗಳಿಂದ ಸಂಕ್ರಮಣ ಸಾಹಿತ್ಯ ಪತ್ರಿಕೆಯನ್ನು ನಿರಂತರವಾಗಿ ಪ್ರಕಟಿಸುತ್ತಾ ಬಂದಿರುವ ಚಂಪಾ ಅವರು ಹತ್ತಕ್ಕೂ ಹೆಚ್ಚು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಹಲವಾರು ಕವನ ಸಂಕಲನ ಹಾಗೂ ನಾಟಕಗಳನ್ನು ಪ್ರಕಟಿಸಿದ್ದಾರೆ.

ಶ್ರೀಮಠ ಹಾಗೂ ಪರಮಪೂಜ್ಯ ಶ್ರೀ ಶ್ರೀಗಳವರ ಬಗ್ಗೆ ಅಪಾರ ಭಕ್ತಿ ಗೌರವನ್ನಿಟ್ಟುಕೊಂಡಿದ್ದ ಚಂಪಾ ಅವರು ಶ್ರೀಮಠದಲ್ಲಿ ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಈ ಶುಭ ಸಂದರ್ಭದಲ್ಲಿ **'ಸಿದ್ಧಗಂಗಾ'** ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಶ್ರೀ ಸಿದ್ಧಗಂಗಾ ಕ್ಷೇತ್ರ: ಪರಿಸರ ಮತ್ತು ಈಚಿನ ಶೋಧಗಳು

- ಡಾ. ಎಂ.ಜಿ. ನಾಗರಾಜ್ *

(ಕಳೆದ ಸಂಚಿಕೆಯಿಂದ)

ಶ್ರೀ ಗೋಸಲಸಿದ್ಧೇಶ್ವರ ಬೆಳಗಿದ ಕ್ಷೇತ್ರಗಳು

ಸಿಂಗ್ರಿಹಳ್ಳಿಯಲ್ಲಿ ಗೋಸಲಾರ್ಯಯತಿ

ಪರಿಸರ ಪಾವನ ಪಂಚಲಿಂಗೇಶ್ವರ - ಮಳೆದಾನಿ ಕೊಂಗಮಲ್ಲೇಶ್ವರ

ಈ ಹಿಂದೆ ಗಮನಿಸಿದಂತೆ ಸೊಗಲಕ್ಷೇತ್ರ ಮುನಿವಳ್ಳಿಯಲ್ಲಿ ಪಂಚೈದು ಲಿಂಗಗಳಿರುವುದು; ಅದೇ ಸೊಗಲಕ್ಷೇತ್ರ ಮುನಿವಳ್ಳಿಯಲ್ಲಿ ಗೋಸಲದೇವರ ಗುರು ಚನ್ನವೀರಸ್ವಾಮಿಗಳ (ತೋರು!) ಗದ್ದುಗೆ, ರುದ್ರಮುನಿಗಳ ಗದ್ದುಗೆ ಹಾಗೂ ಪ್ರತ್ಯೇಕ ದಿಶಾ ಶಿವಲಿಂಗಗಳ ಕೋಷ್ಠ ಗುಡಿಗಳಿರುವುದು; ಅಲ್ಲಿ ಪಂಚಲಿಂಗಶಿರಗಳು (ಬಾಣಭಾಗ!) ಸಾಲಾಗಿ ಇರುವುದು; ಬೇರೆಡೆ ಏಕಲಿಂಗ ಶರೀರದಲ್ಲಿ ಐದು ಮುಖಗಳ ಸಾಂಕೇತಿಕ ಶಿವರೂಪವಿರುವುದು; ಐಹೊಳೆ ವಾಣಿಜ್ಯ ವಂಶಸ್ಥರೆನ್ನಲಾದ ಕಂಟಲಿ ವ್ಯಾಪಾರದ ವೀರಬಣಂಜುಗಳು ಹರದನಹಳ್ಳಿಯಲ್ಲಿ ಅಡುಗೆ ಮಾಡುವ ಸಂದರ್ಭದಲ್ಲಿ ಲಿಂಗದ ಗುಂಡನ್ನು(ಶಿರ) ಅರಿಯದೆ ಬಳಸಿ ಮಾಡಿದ ಅಪಚಾರಕ್ಕೆ ಆಘಾತಗೊಂಡು ವಿಸ್ಮೃತಿ ಹೊಂದಿ ಎಚ್ಚರಗೊಂಡು ಭಕ್ತಿಯಿಂದ ಕ್ಷಮೆ ಬೇಡುತ್ತ ಶಿವನನ್ನು ಪ್ರಾರ್ಥಿಸಿದರಂತೆ. ಆಗ ಅಡಕೆಕಾಯಿ, ಅಳಲೆಕಾಯಿ ಆಗಿದ್ದುದು, ಶಿವಕೃಪೆಯಿಂದ ಅಡಕೆಯಂತೆ ಮೊದಲಿನ ಸ್ಥಿತಿಗೆ ಬಂದುವಂತೆ. ಆಗ ನಿಷ್ಠಾಭಕ್ತಿಯಿಂದ ಲಿಂಗಪ್ರತಿಷ್ಠೆ ಮಾಡಿ, (ಅಮೃತೇಶ್ವರ-ದಿವ್ಯಲಿಂಗ ಅಣಿಲೇಶ್ವರ) ಎಂದು ಪೂಜಿಸಿದ ಐತಿಹ್ಯ; ಇವೆಲ್ಲ ವಿಶಿಷ್ಟ ಮಹತ್ವದ್ದಾಗಿದೆ. ಅಂತಾಗಿ ಸಿಂಗ್ರೀಹಳ್ಳಿಯ ಪಂಚೈದು ಲಿಂಗಸ್ಥಾನಗಳು, ಸೋಗಲವಿರಲಿ, ಹರದನಹಳ್ಳಿಯಾಗಿರಲಿ ಅವುಗಳಲ್ಲಿಯು ಐತಿಹ್ಯಗಳಿಗೆ ಪೂರಕವಾಗಿ ವಿಶಿಷ್ಟ ಸಂವಾದಿಯಾಗಿ ಒಲೆಯ ಸ್ವರೂಪ ಸ್ಥಾನದಲ್ಲಿ ಸ್ಥಳೀಯ ಐತಿಹ್ಯಕ್ಕನುಗುಣವಾಗಿ ಪ್ರತಿಷ್ಠೆಗೊಂಡಿರುವುದು ವಿಶೇಷ. ಇವು ಶ್ರೀ ಗೋಸಲಾರ್ಯರ ಸಂಚಾರಿ ಕ್ಷೇತ್ರವಾಗಿ ಬೆಳಗಿದ ನೆಲೆಯಾಗಿ ಪೂರಕ ಪರಿಸರವನ್ನು ಹೊಂದಿರುವುದೂ ಗಮನಾರ್ಹವಾಗಿದೆ. ಇಂಥ ಸಿಂಗ್ರೀಹಳ್ಳಿಯಲ್ಲಿ ವಿಶಿಷ್ಟ ಸಾಂಸ್ಕೃತಿಕ ವ್ಯಕ್ತಿತ್ವದ ಶ್ರೀ ಗೋಸಲಾರ್ಯರು ಪಂಚಲಿಂಗಗಳ ಸ್ಥಾಪನೆ ಹಾಗೂ (ಮಾರಾರಿ!) ಮಠ ಸ್ಥಾಪನೆಗೆ ಕಾರಣರಾದರೆನಿಸುತ್ತದೆ. ಈ ನಂತರ ಸಂದರ್ಭದಲ್ಲಿ ಶಿವಗಂಗಾ ಕ್ಷೇತ್ರದಲ್ಲಿ ಸಂಚರಿಸಿ, ಶ್ರೀ ರುದ್ರಮುನಿಕ್ಷೇತ್ರವೆಂದು ದರ್ಶನ ಮಾಡಿ ಸಿದ್ಧಗಂಗೆಯತ್ತ ಧಾವಿಸಿರಬೇಕು. ಸಿದ್ಧಗಂಗೆಯಲ್ಲಿ ತಮಿಳು ಶಿಷ್ಯನ ದಾಹ ಅಡಗಿಸಲು ಜಲಾವತರಣವನ್ನು ಶೋಧಿಸಿ ತಣಿಸಿದರು. 'ಸಿದ್ಧಗಂಗಾಕ್ಷೇತ್ರ'ವೆನಿಸಲು ಕಾರಣರಾದರು. ಜಲಾವತರಣ ನೆಲೆಯ ಶೋಧ ಸಿದ್ಧಿಯ ಕಾರಣವೂ ಸೇರಿ ಗೋಸಲದೇವರು ಸೋಗಲಕ್ಷೇತ್ರದ-ಹರದನಹಳ್ಳಿಯು ಗೋಸಲಾರ್ಯರು, ಸಿದ್ಧಗಂಗೆಯಲ್ಲಿ 'ಗೋಸಲ ಸಿದ್ದೇಶ್ವರ'ರೆನಿಸಿದರು. ಅದಕ್ಕೆ ಪೂರಕವಾಗಿ ಇಲ್ಲಿಯ ಅವರ ಅಸ್ತಿತ್ವದ ಬಗ್ಗೆ ಅಪ್ರಕಟಿತ ಶಾಸನಗಳು ಇಳಕಲ್ ರಾಮೇಶ್ವರ ಬೆಟ್ಟದ ಗವಿಯ ಬಾಗಿಲುವಾಡದಲ್ಲಿ ಸಿದ್ಧಗಂಗಾ ಕುಂಡಿಕೆ ಹಾಗೂ ಗೋಸಲ ಸಿದ್ಧೇಶ್ವರ ಪ್ರವೇಶದ್ವಾರದ ಮಧ್ಯದ ಮೇಲಿನ ಬಂಡೆಯಲ್ಲಿ **ಗೋಸಲ ಸಿದ್ದೇಶ್ವರ** ಎಂಬ ನಾಮಾಭಿದಾನವು ಕೆತ್ತನೆಗೊಂಡಿರುವುದು ಹೊಸದಾಗಿ ನನ್ನ ಶೋಧದಲ್ಲಿ ಕಂಡುಬಂದಿದೆ. (ಹೆಚ್ಚಿನ ವಿವರಗಳನ್ನು ಈ ಹೊಸ ಶಾಸನ ಸಹಿತವಾಗಿ ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು).



ಇನ್ನು ಗವಿಪಂಚಲಿಂಗೇಶ್ವರ ಸುಮಾರು ಅರ್ಧ ಫರ್ಲಾಂಗ್ ದೂರದ ಕೆಳಗಣ ಭಾಗದ ಗದ್ದೆಯಲ್ಲಿ ಕಂಬದ ಮೇಲಿನ ಬಸವನ ವಿಗ್ರಹವು ನೆಲದ ಮೇಲೆ ಉರುಳಿ ಬಿದ್ದಿದೆ.

* ನಂ. ೨೨೧, 'ಅನರ್ಘ್ಯ, ಶ್ರೀ ಜ.ಚ.ನಿ. ಕೃಪೆ' ೬ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦೦೧೦



೧) ಗವಿಪಂಚಲಿಂಗೇಶ್ವರ ದೇಗುಲದಲ್ಲಿ ಪಂಚಲಿಂಗಗಳು. ಇಂದಿನ ಸ್ವರೂಪ ಹಾಗೂ ಹಿಂಬದಿ ನಾಗಶಿಲ್ಪ. ೨) ೨೦೧೬ರ ನಂತರದ ಗರ್ಭಗೃಹ ಜೀರ್ಣೋದ್ಧಾರದ ಚಿತ್ರ

ಸಿಂಗ್ರೀಹಳ್ಳಿ ಪಂಚಲಿಂಗೇಶ್ವರ (ಕೊಂಗಮಲ್ಲೇಶ್ವರ) ಬಂಡೆಗವಿ ಗವಿದೇಗುಲದ ಹಾದಿಯ ಪ್ರವೇಶದ್ವಾರ.

ಗದ್ದೆಯಲ್ಲಿ ಮಲಗಿರುವ ಕಂಬದ ಬಸವ

ಈ ಪ್ರವೇಶ ಮಹಾದ್ವಾರದ ಉದ್ಘಾಟನೆಯನ್ನು ಪರಮಪೂಜ್ಯ ತ್ರಿವಿಧ ದಾಸೋಹಿ 'ಕರ್ನಾಟಕರತ್ನ, ಪದ್ಮಭೂಷಣ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ೨೩-೫-೨೦೦೫ರಂದು ನೆರವೇರಿಸಿದರು. ದೇಗುಲ ದಾರಿಯ ಪ್ರವೇಶದಲ್ಲಿ ದೊಡ್ಡ ಪ್ರವೇಶದ್ವಾರವನ್ನು ಸುಂದರವಾಗಿ ನೆತ್ತಿಯ ಮೇಲೆ ಶಿವನ ಆಸೀನಮೂರ್ತಿಯನ್ನಿಟ್ಟು ಹೊಸದಾಗಿ ನಿರ್ಮಿಸಲಾಗಿದೆ. ಕಂಬದ ಬಸವನಿಗೆ, ಪಂಚಲಿಂಗೇಶ್ವರನ ವೀರಶೈವ-ಲಿಂಗಾಯತ ಒಕ್ಕಲಿನವರು ಹರಳೂರಿನಿಂದ ಬಂದು ವಾರ್ಷಿಕ ಪೂಜೆ ಸಲ್ಲಿಸುತ್ತಾರೆ. ಇದರಿಂದ ಮೊದಲಿಗೆ ಈ ಬಂಡೆಗವಿದೇಗುಲದ ಬಳಿ ಗೋಸಲ ಪರಂಪರೆಯ ಮಠವಿದ್ದು, ಈ ದೇಗುಲವು ಮಠದೇಗುಲವಾಗಿತ್ತು ಎಂದು ತಿಳಿಯುತ್ತದೆ. ಇದಕ್ಕೆ ಪೋಷಕವಾಗಿ ಗವಿದೇಗುಲದ ಹಿಂಬದಿಗೆ ಅಡ್ಡಬೆಟ್ಟದ ಬುಡದಲ್ಲಿ ಶಿಥಿಲ ಮಠವೊಂದಿದ್ದು ಅದರಲ್ಲಿ ಮೂರು ಗದ್ದುಗೆಗಳಿವೆ. ಅದನ್ನು 'ಮಾರಾರಿ'ಮಠವೆನ್ನುತ್ತಾರೆ. ಈ ದೇಗುಲದಲ್ಲಿ ಸಾಕಷ್ಟು ಕಾಲ ಅರ್ಚಕರಿಲ್ಲದೆ ಪೂಜೆ ನಿಂತುಹೋಗಿತ್ತು. ಸದ್ಯದ ಅರ್ಚಕ ಶ್ರೀ ಮಲ್ಲೇಶಯ್ಯ ಗೌರಿಬಿದನೂರಿನಿಂದ ತಮ್ಮ ತಾತನ ಕಾಲದಿಂದ ಪೂಜೆಗೆ ಬಂದು ನಿಲ್ಲಲಾಯಿತು ಎಂದಿದ್ದಾರೆ.

ದೇವಾಚರಣೆಗಳು: ಪ್ರತಿ ಸೋಮವಾರ, ಶುಕ್ರವಾರ, ಭಾನುವಾರ ಹಾಗೂ ಮದುವೆ ಸಂದರ್ಭಗಳಲ್ಲಿ ದೇವರಿಗೆ ರುದ್ರಾಭಿಷೇಕ ನಡೆಯುತ್ತದೆ; ಪೂಜಾಚರಣೆಗಳು ಹಾಗೂ ದಾಸೋಹ ವ್ಯವಸ್ಥೆಯನ್ನು ಭಕ್ತಾದಿಗಳೇ ನಿರ್ವಹಿಸುತ್ತಾರೆ; ಸಂಕ್ರಾಂತಿಯಂದು ರುದ್ರಾಭಿಷೇಕ ಉಂಟು ಮತ್ತು ಪೊಂಗಲು ತಯಾರಿಸಿ ವಿತರಣಾ ವ್ಯವಸ್ಥೆಯನ್ನು ಭಕ್ತರೇ ನೋಡಿಕೊಳ್ಳುತ್ತಾರೆ. ಈ ಸಂದರ್ಭದ ವ್ಯವಸ್ಥೆಗಳಿಗೆ ೧೫ ಜನರ ಸಮಿತಿ ಸದಸ್ಯರ ಟ್ರಸ್ಟ್ ಇದೆ. ಟ್ರಸ್ಟ್‌ನ ಅಧ್ಯಕ್ಷರಾಗಿ ಶ್ರೀ ಎಸ್. ಹೊನ್ನಗಂಗಪ್ಪ, ಕಾರ್ಯದರ್ಶಿ ನೆಲಮಂಗಲದ ಶ್ರೀ ಎಚ್. ರಾಜಣ್ಣ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಪಂಚಲಿಂಗೇಶ್ವರರಿಗೆ ಶಿವರಾತ್ರಿ, ಯುಗಾದಿ, ಶ್ರಾವಣ ಸೋಮವಾರಗಳಲ್ಲಿ ವಿಶೇಷ ಪೂಜಾದಿಗಳಿರುತ್ತವೆ. ಮಾರ್ನೋಮಿಯಲ್ಲಿ ಬನ್ನಿಮುಡಿ ವಿತರಿಸುವುದಿದೆ. ಕಾರ್ತೀಕ ೪ನೇ ಮಂಗಳವಾರ, (ಕೊನೇ ಮಂಗಳವಾರ) ೧೦೦೧ ದೀಪೋತ್ಸವ ನಡೆಯುತ್ತದೆ.

ಕಾರ್ತೀಕದಲ್ಲಿ ಇಲ್ಲಿ 'ನಾಗರು' ಮಾಡುವ ಪದ್ಧತಿ ಇದೆ. ಇದಕ್ಕೆ ಸಂಕೇತವಾಗಿ ಗವಿಯ ಪಂಚಲಿಂಗೇಶ್ವರನ ಹಿಂಬದಿ ಬಂಡೆ ಭಿತ್ತಿಯಲ್ಲಿ ಸಾಲಾಗಿ ನಾಗಹೆಡೆಯ ನಾಗರಗಲ್ಲುಗಳ ಸಾಲುಶ್ರೇಣಿ ಇದೆ. ಇಂದು ಜೀರ್ಣೋದ್ಧಾರವಾಗುತ್ತಿರುವ ನವೀನ ದೇಗುಲದ ಕಟ್ಟಡ ಬಾಗಿಲುವಾಡದಲ್ಲಿ, ಭಿತ್ತಿಗಳಲ್ಲಿ ಸುಂದರ ದೈವಶಿಲ್ಪಗಳನ್ನು ಕೆತ್ತಿಸಿ ಚೆಲುವಿನ ನೋಟವನ್ನು ರೂಪಿಸಲಾಗಿದೆ. ಇಲ್ಲಿನ ಪ್ರಕೃತಿ

ಅಡ್ಡಬೆಟ್ಟದ ಬುಡದಲ್ಲಿ 'ಮಾರಾರಿಮಠ' ಮತ್ತು ಗದ್ದುಗೆ

ದೇಗುಲದ ಗರ್ಭಗೃಹದ ಮುಂದೆ ಟ್ರಸ್ಟ್‌ನ ಕಾರ್ಯದರ್ಶಿಗಳು, ಸದಸ್ಯರು ಹಾಗೂ ದೇವದರ್ಶನಾರ್ಥಿಗಳು.



ಜೀರ್ಣೋದ್ಧಾರ ಗೊಳ್ಳುತ್ತಿರುವ ಗವಿದೇಗುಲದ ಮುಖಮಂಟಪ



ಪಂಚಲಿಂಗೇಶ್ವರ ದೇಗುಲ ಪರಿಸರದ ನೈಸರ್ಗಿಕ ಚೆಲುವಿನ ನೋಟ

ಸೌಂದರ್ಯದ ಮಧ್ಯೆ ದೈವಿಕ ನೆಲೆಯ ಸುಂದರನೋಟ ತುಂಬ ಚೆಲುವಾಗಿ ಕಾಣಿಸುತ್ತದೆ.

ಈ ನಿಸರ್ಗ ದೇಗುಲದ ದೇವತಾಪೂಜೆಗಾಗಿ ಬೆಂಗಳೂರು, ಮೈಸೂರು, ಹರಳೂರು, ಸೋಲೂರು, ಮಾಗಡಿ, ರಾಮನಗರ, ಗಣಪತಿಹಳ್ಳಿ, ದೊಡ್ಡ ಆಲದಮರ, ಚೀಲೂರು ಮುಂತಾದ ಊರುಗಳಿಂದ ಒಕ್ಕಲಿನವರು ಬರುತ್ತಾರೆ. ಏಳು ಬಂಡಿ ಮನೆತನಗಳವರಾಗಿ, ಮಾಕನಹಳ್ಳಿ, ತುಮಕೂರು, ಅಲುಪನಹಳ್ಳಿ, ಚೀಲೂರು (ಬೇಲೂರು), ಮಲಪನಹಳ್ಳಿ, ಎಣ್ಣೆಗೆರೆ, ಹರಳೂರು - ಇಲ್ಲಿಂದ ಪೂಜೆಗೆ ಬರುತ್ತಾರೆ.

ಸಿಂಗ್ರಿಹಳ್ಳಿಯಲ್ಲಿ ಊರೊಳಗೆ ಆಂಜನೇಯ ಹಾಗೂ ತಿಮ್ಮಪ್ಪನ ದೇಗುಲಗಳಿವೆ. ಮಳೆ ಬರದಿದ್ದಾಗ ಈ ಹಳ್ಳಿಯ ಜನ ಬಂದು ಪಂಚಲಿಂಗೇಶ್ವರನಿಗೆ ಆರತಿ ಮಾಡುತ್ತಾರೆ. ಆಗ ಮಳೆ ಬರುತ್ತದಂತೆ. ರೂಢಿಗತ ನಂಬಿಕೆಯಂತೆ ಅದು



ಜೀರ್ಣೋದ್ಧಾರ ದೇಗುಲದ ಭಿತ್ತಿಯಲ್ಲಿ ಸ್ಕಂದ, ಗಣೇಶ ಶಿಲ್ಪಗಳು

ಜೀರ್ಣೋದ್ಧಾರ ದೇಗುಲ ಶಿಲ್ಪಗಳಲ್ಲಿ ಶ್ರೀ ಲಕ್ಷ್ಮೀ ಸರಸ್ವತಿ ಹಾಗೂ ನಾಗಕನ್ಯಾ ಶಿಲ್ಪಗಳು

ಜೀರ್ಣೋದ್ಧಾರಗೊಳ್ಳುತ್ತಿರುವ ಗವಿ ಪಂಚಲಿಂಗೇಶ್ವರ ದೇಗುಲದ ಮುಖಮಂಟಪ



ಶ್ರೀ ಸಿದ್ಧಗಂಗಾ ಗಿರಿಯ ಸಿದ್ಧಗಂಗಾ ಕುಂಡಿಕೆ ಪ್ರವೇಶದ್ವಾರ ಮತ್ತು ಶ್ರೀ ಗೋಸಲ ಸಿದ್ಧೇಶ್ವರರ ಗವಿ ಪ್ರವೇಶದ್ವಾರದ ನಡುವಣ ಹೊರ ಮೇಲ್ಬಂಡೆಯ ಮೇಲೆ ಪತ್ತೆಯಾದ ಹೊಸ ಶಾಸನ.

ಡಾ. ಎಂ.ಜಿ. ನಾಗರಾಜ್ ಅವರು ಪತ್ತೆಮಾಡಿ ಕಣ್ಣೋದಿನಲ್ಲಿ ಶಾಸನದ ಪಾಠವನ್ನು ಹೀಗೆ ನೀಡಿದ್ದಾರೆ. '[ಗೋ]ಸಲಾ ಸಿದ್ಧೇಶ್ವರಯರ ಸುಗದ್ದಿಗೆ'

(ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು).

ಸಂಘಟಿಸಿದ್ದೂ ಉಂಟು. ಈ ಪರಿಸರವು ಸುತ್ತ ಬೆಟ್ಟಗುಡ್ಡಗಳಿಂದ ಕೂಡಿ ಜಲಾನಯನ ಪ್ರದೇಶದಲ್ಲಿರುವುದನ್ನು ಇಲ್ಲಿ ಗಮನಿಸಬೇಕು. ಈ ಸುಂದರ ನೈಸರ್ಗಿಕ ದೈವಿಕ ತಾಣದಲ್ಲಿ ಆಧ್ಯಾತ್ಮಿಕ ಭಾವನೆಗಳು ಪುಟಿಯುತ್ತವೆ. ನೆಮ್ಮದಿ, ಶಾಂತಿ, ಧನ್ಯತಾಭಾವಗಳು ತುಂಬಿ ಬರುತ್ತವೆ.

ಕಾರ್ತೀಕದಲ್ಲಿ ಜಾತ್ರೋತ್ಸವ ಮಾಡುವ, ಹಾಗೂ 'ಕೊಂಡ' ಆಚರಿಸುವ ಯೋಜನೆ, ಉದ್ಯಾನವನ, ಪಾರ್ಕಿಂಗ್ ವ್ಯವಸ್ಥೆ ಮಾಡುವ ಯೋಜನೆ ಸದ್ಯದ ದೇಗುಲ ಜೀರ್ಣೋದ್ಧಾರದ ನಂತರ ಟ್ರಸ್ಟಿನ ಯೋಜನೆಯಲ್ಲಿದೆ.

(ಸೋಗಲ, ಮುನಿವಳ್ಳಿ, ಮುರಗೋಡ ವಲಯದ ಕ್ಷೇತ್ರಕಾರ್ಯಕ್ಕೆ ನೆರವಾದ ಭಾಷಾವಿಜ್ಞಾನಿ ಡಾ. ಸಂಗಮೇಶ ಸವದತ್ತಿಮಠ, ಚನ್ನಪಟ್ಟಣ ತಾ., ಸೋಗಾಲ, ಕುಡಿನೀರು ಕಟ್ಟೆಮಠ ಸಂದರ್ಭಕ್ಕೆ ನೆರವಾದ ಶ್ರೀ ಎಸ್. ಕುಮಾರಸ್ವಾಮಿ (ಸಿ) ಎಂಜಿನಿಯರ್, ಸೋಗಾಲ, ಸಿಂಗ್ರಿಹಳ್ಳಿ, ಪಂಚಲಿಂಗೇಶ್ವರ ಗವಿದೇಗುಲ ಸಂಬಂಧದ ಕ್ಷೇತ್ರಕಾರ್ಯಕ್ಕೆ ನೆರವಾದ ಶ್ರೀ ಎಂ. ರೇಣುಕಾರಾಧ್ಯ, ಶ್ರೀ ಕೆ.ಎಚ್. ಶಿವರುದ್ರಯ್ಯ, ಶ್ರೀ ಎಚ್.ಎಸ್. ಸಿದ್ಧಗಂಗಪ್ಪ, ನೆಲಮಂಗಲದ ಶ್ರೀ ಎಚ್. ರಾಜಣ್ಣ ಅವರಿಗೂ ಹಾಗೂ ಟ್ರಸ್ಟ್ ಸದಸ್ಯರಿಗೆ ಕೃತಜ್ಞತೆಗಳು).

(ಮುಂದುವರೆಯುತ್ತದೆ)

ಹಿರಿಯ ವಿದ್ವಾಂಸರಾದ ಪ್ರೊ. ಟಿ.ಆರ್. ಮಹಾದೇವಯ್ಯ

ಹಿರಿಯ ವಿದ್ವಾಂಸರಾದ ಪ್ರೊ. ಟಿ.ಆರ್. ಮಹಾದೇವಯ್ಯನವರು ವಿಧಿವಶರಾದರೆಂದು ತಿಳಿಸಲು 'ಸಿದ್ಧಗಂಗಾ' ವಿಷಾದಿಸುತ್ತದೆ.

ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಶ್ರೀ ಟಿ.ಆರ್. ಮಹಾದೇವಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ವಿಭಾಗದಲ್ಲಿ ಉಪ ಸಂಪಾದಕರಾಗಿ, ರಾಜ್ಯಭಾಷಾ ವಿಧಾಯೀ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾದ ಬಸವ ಸಮಿತಿಯಲ್ಲಿ ಸಂಶೋಧನೆ ಮತ್ತು ಪ್ರಕಟಣಾ ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಜೀವನ ಚರಿತ್ರೆ, ವಿಮರ್ಶೆ, ಚಿಂತನ ಸಾಹಿತ್ಯ, ಸಂಪಾದನೆ ಪ್ರಕಾರಗಳಿಗೆ ಸಂಬಂಧಿಸಿದಂತೆ ೫೦ ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದರು. ಇವರು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆಗಾಗಿ 'ಕಾವ್ಯಾನಂದ ಪುರಸ್ಕಾರ', 'ಸಾಹಿತ್ಯಶ್ರೀ', 'ಕಿಟ್ಟೆಲ್ ಪ್ರಶಸ್ತಿ', 'ಕೆಂಪೇಗೌಡ ಪ್ರಶಸ್ತಿ', 'ಶಿವಕುಮಾರಶ್ರೀ', ಗುಬ್ಬಿ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯೂ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀ ಸಿದ್ಧಗಂಗಾ ಮಠ ಹಾಗೂ ಪರಮಪೂಜ್ಯ ಡಾ. ಶ್ರೀ ಶ್ರೀಗಳವರ ಬಗ್ಗೆ ಅನನ್ಯ ಭಕ್ತಿ, ಗೌರವವನ್ನಿಟ್ಟುಕೊಂಡಿದ್ದ ಶ್ರೀ ಮಹಾದೇವಯ್ಯನವರು 'ಸಿದ್ಧಗಂಗಾಶ್ರೀ', 'ದಾಸೋಹ ಸಿರಿ' ಬೃಹತ್ ಸಂಪುಟಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದನ್ನು ಈ ಸಂದರ್ಭದಲ್ಲಿ ಸಿದ್ಧಗಂಗಾ ಕೃತಜ್ಞತೆಯಿಂದ ಸ್ಮರಿಸುತ್ತದೆ. ಶ್ರೀ ಸಿದ್ಧಗಂಗಾ ಗುರುಪರಂಪರೆ ಅವರ ಆತ್ಮಕ್ಕೆ ಶಾಂತಿಯನ್ನು ಹಾಗೂ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು 'ಸಿದ್ಧಗಂಗಾ' ಪ್ರಾರ್ಥಿಸುತ್ತದೆ.

ಪ್ರೊ. ಜಿ. ಪರಮೇಶ್ವರಪ್ಪ

ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಕಾಲೇಜು ಪ್ರಗತಿ ಪಥದಲ್ಲಿ ಮುನ್ನಡೆಯಲು ಸೇವೆ ಸಲ್ಲಿಸಿದ್ದ ಶ್ರೀ ಜಿ. ಪರಮೇಶ್ವರಪ್ಪನವರು ನಿಧನರಾದರೆಂದು ತಿಳಿಸಲು ಸಿದ್ಧಗಂಗಾ ವಿಷಾದಿಸುತ್ತದೆ.

ಶ್ರೀಯುತರು ಮೂಲತಃ ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಗೋವಿನಕೋರಿ ಗ್ರಾಮದವರಾಗಿದ್ದು, ೧೯೮೬ ರಿಂದ ೧೯೯೧ ರವರೆಗೆ ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಅಹರ್ನಿಶಿ ಸೇವೆ ಸಲ್ಲಿಸಿದ್ದರು. ಶ್ರೀಮಠ ಹಾಗೂ ಪರಮಪೂಜ್ಯ ಶ್ರೀ ಶ್ರೀಗಳವರ ಬಗ್ಗೆ ಅಪಾರವಾದ ಗೌರವ, ಭಕ್ತಿಯನ್ನಿಟ್ಟುಕೊಂಡಿದ್ದರು. ಪರಮಪೂಜ್ಯರು ಶ್ರೀ ಪರಮೇಶ್ವರಪ್ಪನವರ ಪ್ರಾಮಾಣಿಕ ದುಡಿಮೆ, ಕರ್ತೃತ್ವ ಶಕ್ತಿಯನ್ನು ಮನಗಂಡು ಶ್ರೀ ಸಿದ್ಧಗಂಗಾ ಮಠದ ಆಡಳಿತ ಮಂಡಳಿಯ ನಿರ್ದೇಶಕರಾಗಿ ನೇಮಿಸಿದ್ದು, ೧೯೯೧ ರಿಂದ ಜೀವನದ ಕೊನೆಯುಸಿರಿರುವರಿಗೂ ಪ್ರಾಮಾಣಿಕ ಸೇವೆ ಸಲ್ಲಿಸಿದ್ದರು. ಶ್ರೀಯುತರ ನಿಧನಕ್ಕೆ ಸಿದ್ಧಗಂಗಾ ವಿಷಾದಿಸುತ್ತಾ, ಶ್ರೀ ಸಿದ್ಧಗಂಗಾ ಗುರುಪರಂಪರೆ ಅವರ ಆತ್ಮಕ್ಕೆ ಶಾಂತಿಯನ್ನು ಹಾಗೂ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಅನುಗ್ರಹಿಸಲೆಂದು 'ಸಿದ್ಧಗಂಗಾ' ಪ್ರಾರ್ಥಿಸುತ್ತದೆ.

ನಿಜಗುಣ ಶಿವಯೋಗಿ

– ಮಲೆಯೂರು ಗುರುಸ್ವಾಮಿ *

(ಕಳೆದ ಸಂಚಿಕೆಯಿಂದ)

ಅನುಭವ ಸಾರ

ಎಂಟು ಸಂಧಿಗಳು, ನಲವತ್ತಾರು ಸೂತ್ರಗಳು ಮತ್ತು ಐನೂರ ಮೂವತ್ತೈದು ತ್ರಿವಿಧಿಗಳನ್ನು ಒಳಗೊಂಡ ಈ ಕೃತಿ ದಶೋಪನಿಷತ್ತುಗಳನ್ನು ತನ್ನೊಡಲಲ್ಲಿ ಒಳಗೊಂಡಿರುವಂತದು.

'ಸಕಲ ವೇದಾಂತ ಸಾರವನೆ ತಿಳಿವಂತೆ ಸಾಧಕರಿಗೇ ಪ್ರಕರಣದೊಳೊಲಿದೊರೆವೆನು' (ಸಂಧಿ ೩) ಎಂದು ಕೃತಿಯ ಮೂಲಧಾತುವನ್ನು ಅವನೇ ತಿಳಿಸಿದ್ದಾನೆ. ಭರತಖಂಡದ ಅನುಭಾವಿಕ ಆಚಾರ ವಿಚಾರಗಳಿಗೆಲ್ಲಾ ಶೃತಿಗಳೇ ಪ್ರಮಾಣ; ಅದರಲ್ಲೂ ಉಪನಿಷತ್ತುಗಳಂತೂ ಜ್ಞಾನದಾಗರಗಳು. ಆದರೆ ಅವುಗಳ ಗೂಢಾರ್ಥಗಳು ಸಾಮಾನ್ಯರಿಗೆ ದಕ್ಕುವುದಿಲ್ಲ. ಆದ್ದರಿಂದಲೇ ಅದನ್ನು ಸರಳ ತ್ರಿಪದಿಗಳಲ್ಲಿ ಕನ್ನಡಿಸಿ ನಿಜಗುಣರು ಮುಮುಕ್ಷು ಮಾರ್ಗಿಗಳಿಗೆ ಮಹದುಪಕಾರ ಮಾಡಿದ್ದಾರೆ.

ಇಡೀ ಕೃತಿ ಗುರು-ಶಿಷ್ಯರ ಸಂವಾದ ರೂಪದಲ್ಲಿದೆ (ಎಷ್ಟಾದರೂ ಉಪನಿಷತ್ ಅಲ್ಲವೇ?).

ಶಿಷ್ಯನ ಪ್ರಶ್ನೆ –

ಗುರುವೇ ಬಿನ್ನಪವನಧರಿಸು ಪಲವಂದದಿಂ
ದಿರುತಿರ್ಪ ಜಗಮಿದೆನ್ನೆಲ್ಲಿ ಪುಟ್ಟಿ ಬಂ
ದುರವಾಗಿ ತೋರುತಿಹುದೆಂತು ॥
ಕೆಲರಿದಂ ಪುಸಿಯೆಂದು ಕೆಲರಿದಂದಿಟವೆಂದು
ಕೆಲರಿದಂ ಮೊದಲೊಳಿಹುದರಿದೊಡಿಲ್ಲೆಂದು
ಕೆಲರಿದಂ ನುಡಿಯಲರಿದೆಂದು ॥
ಬೇರೆ ಬೇರನುಮಾನ ಬೇರೆ ಬೇರೆ ತರ್ಕಂ
ಬೇರೆ ಬೇರಾವ ಶಾಸ್ತ್ರ ಯುಕ್ತಿಗಳಿಂದೆ
ಸಾರಿ ಸಂಪಾದಿಸುವರಿಲ್ಲ ॥
ಏನೆಂದು ತಿಳಿವೆ ನಾನೇನೆಂದು ನಂಬಿ ಸಂ
ಧಾನಮಂ ಮಾಳ್ಪೆನಿದನೆ ಸತ್ಯಾರ್ಥ ನಿಧಿ
ನೀನೆ ಗುರುವರ್ಯ ಕರುಣಿಪುದು ॥

ಶಿಷ್ಯನ ಇಂತಹ ಪ್ರಶ್ನೆಗಳಿಗೆ ಗುರು ಶಿವ, ಜೀವ, ಜಗತ್ತು ಇವುಗಳ ಸ್ವರೂಪ, ಅಂತರ್ ಸಂಬಂಧಗಳ ಬಗ್ಗೆ ಗುರು ವಿಸ್ತೃತವಾಗಿ ವಿವರಿಸುವುದೇ 'ಅನುಭವಸಾರ'. ಹೆಸರೇ ಸೂಚಿಸುವಂತೆ ಇದು ನಿಜಗುಣರ ಗ್ರಂಥ ಪಾಂಡಿತ್ಯದಿಂದ ವಿಶ್ಲೇಷಣೆಗಳಲ್ಲ; ಸ್ವಾನುಭವದ ಮಾತಿನ ಜ್ಯೋತಿರ್ಲಿಂಗಗಳು. ಹಾಗೆಯೇ ಅವರ ವಿವರಗಳೂ ಅಷ್ಟೇ, ಅರ್ಥೈಸಿಕೊಳ್ಳಲು ಸುಲಿದ ಬಾಳೆಯ ಹಣ್ಣಿನಂತೆ ಇರುವಂತಹು. ಮೊದಲನೆ ಸಂಧಿಯಲ್ಲಿ ಶಿಷ್ಯನ ಸಮಸ್ಯೆಗೆ ಪರಿಹಾರ, ಎರಡನೆಯ ಸಂಧಿಯಲ್ಲಿ ಜೀವ-ಶಿವರ ಸಂಬಂಧ, ಮೂರರಲ್ಲಿ ಏಕಾತ್ಮವಾದ, ನಾಲ್ಕರಲ್ಲಿ ಅನಾತ್ಮತ್ವ ನಿರಾಕರಣ, ಐದನೆಯ ಸಂಧಿಯಲ್ಲಿ ಚಿದಚಿದ್ವಿವೇಕ, ಆರರಲ್ಲಿ ಬಂಧ-ಮೋಕ್ಷ ವಿಚಾರ, ಏಳರಲ್ಲಿ ಮುಕ್ತಿಗೆ ಸಾಧನ ಜ್ಞಾನವೇ ಹೊರತು, ಕರ್ಮವಲ್ಲ ಹಾಗೂ ಜ್ಞಾನಿಯ ಲಕ್ಷಣಗಳು, ಎಂಟನೆಯ ಸಂಧಿಯಲ್ಲಿ ಗುರುವಿನ ಎಚ್ಚರಿಕೆಯ ಮಾತುಗಳನ್ನೂ ಹೇಳಲಾಗಿದೆ.

"ಅದ್ವೈತ ದರ್ಶನವನ್ನೇ ಆಧಾರವಾಗಿಟ್ಟುಕೊಂಡು ಗೀತೆಗಳನ್ನು ರಚಿಸಿರುವುದರಿಂದ ಈ ಕೃತಿಯಲ್ಲಿ ಉಪನಿಷತ್ತಿನ ಶಂಕರ ಭಾಷ್ಯವನ್ನು ಹೆಚ್ಚು ಅವಲಂಬಿಸಿರುವುದು ಕಂಡುಬರುತ್ತದೆ. ಇಲ್ಲಿಯ ಉದಾಹರಣೆಗಳು ಜನಸಾಮಾನ್ಯರ ನಿತ್ಯಜೀವನದ ಘಟನೆಗಳೇ ಆಗಿರುವುದರಿಂದ ಅದ್ವೈತ ತತ್ತ್ವದ ಹಿರಿಮೆಯನ್ನು ಉಪನಿಷತ್ತುಗಳ ಮೇಲಿರುವ ಅದ್ವೈತದ ಮತ ವ್ಯಾಖ್ಯಾನವನ್ನೂ ಸುಲಭವಾಗಿ ಅರಿಯಲು ಈ ಕೃತಿ ಸಹಾಯವಾಗುತ್ತದೆ". (ಹೆಚ್. ಗಂಗಾಧರನ್. *ನಿಜಗುಣ ಶಿವಯೋಗಿ ೧೯೮೪, ಪು ೬೪-೬೫).*

"ಪ್ರಶ್ನೋತ್ತರ ರೂಪವಾದ ಈ ಅನುಭವಸಾರವು ಇವತ್ತಿಗೂ ನಾವು ದಿವ್ಯ ಕುತೂಹಲದಿಂದ ಕೇಳಬಹುದಾದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಟ್ಟು ಉದ್ಧರಿಸುವ ಸಲುವಾಗಿಯೇ ಅವತರಿಸಿದ ನಿಜಗುಣರ ಶಬ್ದ (ಬ್ರಹ್ಮ) ಶರೀರವೇ ಆಗಿದೆ" (ಡಾ॥ ಎಲ್. ಬಸವರಾಜು : **ನಿಜಗುಣ ಶಿವಯೋಗಿಯ ತತ್ತ್ವದರ್ಶನ** ಪು. xix).

ಇವು ಕೇವಲ ಪ್ರಶಂಸೆಯ ಮಾತುಗಳಲ್ಲ ಎನ್ನುವುದು ಕೃತಿಯ ಅಂತರಂಗಕ್ಕೆ ಇಳಿದಾಗ ವೇದ್ಯವಾಗುವ ನಿಚ್ಚಳ ಸಂಗತಿಯಾಗಿದೆ.

ಕೈವಲ್ಯ ಪದ್ಧತಿ

ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳುವಂತೆ 'ಕೈವಲ್ಯ' ಎಂಬ ಮಾತಿನಿಂದಲೇ ಒಂದು ಕೃತಿಯನ್ನು ಕರೆದಿರುವವರಲ್ಲಿ ನಿಜಗುಣರೇ ಮೊದಲಿಗರು. *(ಕೈವಲ್ಯ ಕೌಸ್ತುಭ :* ಸಂ. ಚಂದ್ರಶೇಖರಯ್ಯ : ಪು. ೩೧*)*. ಇದೊಂದು ಅನುಭಾವ

* ೬೩೫, ಮಹಾಮನೆ, ಆಶ್ರಮ ರಸ್ತೆ, ಹಿನಕಲ್, ಮೈಸೂರು-೫೭೦೦೧೭

ಗೀತೆಗಳ ಸಂಕಲನ. ಶಿವಕಾರುಣ್ಯಸ್ಥಲ, ಜೀವನಸಂಬೋಧನೆ ಸ್ಥಲ, ನೀತಿ ಕ್ರಿಯಾಚಾರ ಸ್ಥಲ, ಯೋಗ ಪ್ರತಿಪಾದನ ಸ್ಥಲ ಮತ್ತು ಜ್ಞಾನ ಪ್ರತಿಪಾದನ ಸ್ಥೂಲ ಹೀಗೆ ಐದು ಸ್ಥಲಗಳಲ್ಲಿ ೧೭೪ ಹಾಡುಗಳನ್ನು (೨೮, ೨೨, ೩೯ ೫೯) ಒಳಗೊಂಡ ಗೀತೆಗಳ ಗುಚ್ಛ ಇದು.

ಇದರಲ್ಲಿ ವೇದಾ ವೇದಾಂತ, ಸ್ಮೃತಿ, ಪುರಾಣ, ಇತಿಹಾಸಗಳ ಎಲ್ಲ ಅಂಶಗಳೂ ದರ್ಶನ ದೀಪ್ತವಾಗಿ ಮರುಸೃಷ್ಟಿಗೊಂಡಿವೆ. ಸ್ವರವಚನ ಸಾಹಿತ್ಯದ ಎರಡನೆ ಘಟ್ಟದ ಮಹತ್ವದ ಗೀತರಚನಕಾರರಾಗಿ ನಿಜಗುಣರು ವಿಜೃಂಭಿಸುತ್ತಾರೆ. ಇವರ ಗೀತೆಗಳ ಅಂಕಿತ **'ಶಂಭುಲಿಂಗ'** ಎಂದು. ಕೃತಿಯ ಒಂದು ಕಡೆ ಅವರೇ ಹೇಳಿಕೊಂಡಿದ್ದಾರೆ.... "ಆಬಾಲವೃದ್ಧರಿಗೆ ಆಯಾಸವಿನಿತಿಲ್ಲದಂತೆ ಸಮ್ಯಜ್ಞಾನಿಗಳೊಂಡಂಬಡುವಂತೆ ಸಕಲ ವೇದ ವೇದಾಂತಾಗಮ ಸ್ಮೃತಿ ಪುರಾಣೇತಿಹಾಸ ಸೂತ್ರಾದಿಶಾಸ್ತ್ರ ಸಮ್ಮತದಿಂದ ಪುರಾತನ ಗೀತಾನುಗುಣ್ಯವೆನಿಸಿ ಕೈವಲ್ಯ ಪದ್ಧತಿಯೆಂಬ ಪೆಸರನಿಟ್ಟು ಮೃದು ಮಧುರ ಲಕ್ಷಣ ಸಮೇತವಾದ ಪಂಚಸ್ಥಲ ಪರಿವಿಡಿದು ಜೋಡುಗಣನೆಯುಳ್ಳ ಸ್ವರವಚನ ಸಂಗ್ರಹಮಂ ಪೇಳ್ವೆ". ಈ ಮಾತುಗಳು ಇಡೀ ಕೃತಿಯ ಕೀಲಿಕೈಯಂತಿವೆ. ಇಲ್ಲಿ ಬಳಸಿರುವ 'ಸ್ಥಲ' ಎನ್ನುವ ಪರಿಭಾಷೆಯೂ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಹೊಸದೇ ಆಗಿದೆ. ಇದು ವೀರಶೈವ ಕವಿಗಳ ವಿಶೇಷತೆಯೂ ಆಗಿದೆ. (ಚಾಮರಸನು ತನ್ನ ಪ್ರಭುಲಿಂಗ ಲೀಲೆಯಲ್ಲಿಯೂ ಹೀಗೆಯೇ ಬಳಸುತ್ತಾನೆ).

ಮೊದಲನೆಯದಾದ **'ಶಿವಕಾರುಣ್ಯ'** ಸ್ಥಲದಲ್ಲಿ ಒಟ್ಟು ೨೮ ಹಾಡುಗಳಿವೆ. ಇದರಲ್ಲಿ ಬರುವ **"ಶ್ರೀ ಗುರು ವಚನೋಪದೇಶವನಾಲಿಸಿದಾಗಗಳಹುದು ನರರಿಗೆ ಮುಕುತಿ"** ಎನ್ನುವ ಸಾಲುಗಳೇ ಗುರುವಿನ ಮಹತ್ವವನ್ನು ಎತ್ತಿ ಹಿಡಿಯುತ್ತಾ, ಮೋಕ್ಷ ಮಾರ್ಗಕ್ಕೆ ಗುರುವಿನ ಅನಿವಾರ್ಯತೆ ಎಷ್ಟಿದೆ ಎನ್ನುವುದನ್ನು ತಿಳಿಸಿಕೊಡುತ್ತದೆ. ದುರಿತ ಕರ್ಮವನೊಲ್ಲದಿರು, ಪುಣ್ಯವನೆ ಮಾಡು, ಕರುಣವಿರಲಿ ಜೀವರೊಳು, ನೀತಿವಿದನಾಗು, ಪೊರೆ ಪೊರ್ದಿದರನೆ, ನಿಂದಿಸಿ ನುಡಿಯದಿರಾರನು, ಮನಸಿಗೆ ಬಂದಂತೆ ನಡೆಯದಿರು. ಇಹದಲ್ಲಿ ಕುಂದುವಡೆಯದಿರು, ಕಾಮಾದಿಗಳ ಜಯಿಸು, ಭವವಾಲೆಗಲಸು, ಪುಸಿಯದಿರು, ಎಡರು ಬಂದು ಕವಿಯಲಂಜದಿರು, ಸಂಪದದೊಳು ತವೆ ಮದವಳಿಯದಿರು, ತತ್ತ್ವ ಸಂತತಿಯನು ವಿವರಿಸಿ ನೋಡು, ಬಳಸಿದರದ್ವೈತವನು ಬಾಹ್ಯದಲಿ, ನಿನ್ನೊಳಗೆಕೋ ಭಾವನೆಯೊಡಗೂಡು, ತಿಳಿದು ಸಮಯನಿಷ್ಠೆಗಳಲಿ, ವೇದ ವಿಧಭಕ್ತಿಗಳನಗಲದಿರು, ಆರು ನಾನೆಂದು ವಿಚಾರಿಸು, ವಿಷಮ ಸಂಸಾರವಿದನು ಕನಸೆಂದರಿ, ನಾನೆಂದು ವಿಚಾರಿಸು... ಮರಮರ್ದನ ಶಂಭುಲಿಂಗವನೊಲಿಸಿ ಗಂಭೀರ ಸುಖಿದೊಳಿರು' –ಈ ಗೀತೆಯ ಈ ಒಂದೊಂದು ಹೇಳಿಕೆಯೂ ಉಪನಿಷತ್ತಿನ ಸೂತ್ರರೂಪದ ಮಾತುಗಳಂತೆ ಕಂಡುಬರುತ್ತಿದ್ದು ಬದುಕಿಗೆ ಮಾರ್ಗದರ್ಶಕ ಸೂತ್ರಗಳಂತೆ ಕಂಡುಬರುತ್ತವೆ.

ಈ ಸ್ಥಲದ ಮತ್ತೊಂದು ಪ್ರಸಿದ್ಧ ಗೀತೆ.

"ಕೋಗಿಲೆ, ಚೆಲ್ವ ಕೋಗಿಲೆ ಮುದ್ದು
ಕೋಗಿಲೆ ಜಾಣ ಕೋಗಿಲೆ
ಹಿಂದೆ ತಪದೊಳೀಶನೊಂದಿರುತಿರೆ ಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದೊಳು ಬಾಲೇಂದು ಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ."

ಇಲ್ಲಿ ಮನಸ್ಸನ್ನು ಕೋಗಿಲೆಗೆ ಹೋಲಿಸಲಾಗಿದೆ. ಇದು ಸಾಧನೆಯ ಮಾರ್ಗದಲ್ಲಿ ನಡೆಯುವಂತಹವನು ತನ್ನ ಆತ್ಮಕ್ಕೆ ತಾನೇ ಹೇಳಿಕೊಳ್ಳುವ ಮಾತಾಗಿದೆ. ಇವು ಮೇಲು ನೋಟಕ್ಕೆ ತನಗೆ ತಾನೇ ಹೇಳಿಕೊಳ್ಳುವ ಮಾತುಗಳೆಂದೆ ಕಂಡು ಬಂದರೂ, ಲೋಕದ ಮನುಜರಿಗೆ ನೀಡಿದ ಸಂದೇಶಗಳೂ ಆಗಿವೆ.

ನೀತಿ ಕ್ರಿಯಾಚಾರ ಸ್ಥಲದಲ್ಲಿ, ನೈತಿಕತೆಯೇ ಎಲ್ಲ ಸಾಧನೆಗಳ ಬುನಾದಿ ಮತ್ತು ಗುರಿ ಎನ್ನುವುದನ್ನು ವಿವರಿಸಲಾಗಿದೆ. ಧರ್ಮದ ಅನಿವಾರ್ಯತೆ ಇರುವುದು ಆಚಾರದಲ್ಲಿ ನೈತಿಕತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ. ನೀತಿಯನ್ನು ಕಾಯ್ದುಕೊಳ್ಳಲು ಮೋಕ್ಷಗಾಮಿನಿಯಾಗಲು ಮನುಷ್ಯ ಸಂಸಾರವನ್ನು ತ್ಯಜಿಸಿ, ಸನ್ಯಾಸವನ್ನು ಸ್ವೀಕರಿಸುವ ಅವಶ್ಯಕತೆ ಇಲ್ಲ. ಇಹದಲ್ಲಿ ಇದ್ದೂ ಅದನ್ನು ಸಾಧಿಸುವ ಬಗೆಯನ್ನು ಅವರು ಒಂದು ಸುಂದರ ಉಪಮಾನದ ಮೂಲಕ ಹೀಗೆ ಹೇಳುತ್ತಾರೆ.

ತರುಣಿಯ ಮೊಲೆಯೊಂದನುಣುತಲಣುಗನು ತನ್ನ
ಕರದೊಳುಳಿದ ಕುಚಾಗ್ರವ ನೋವುವಂತೆ
ನರಜನ್ಮವಿಡಿದಿಹ ಭೋಗಾನುಭವದೊಳು
ಪರಲೋಕಗತಿಯ ಸಾಧನದೊಳೊಂದಿಹನು.

'ಯೋಗ ಪ್ರತಿಪಾದನ ಸ್ಥಲ'ದಲ್ಲಿ ಯೋಗದ ಬಗೆಗಳು, ಭಕ್ತಿಯ ಸ್ವರೂಪ, ವ್ರತದ ರೀತಿ ನೀತಿ, ಯೋಗ ಸಾಧಕರಲ್ಲಿರುವ ಬಗೆಗಳು ಮುಂತಾದುವನ್ನು ವಿವರಿಸುತ್ತಾರೆ.

'ಜೀವ ಸಂಬೋಧನ ಸ್ಥಲ'ದಲ್ಲಿ ಆತ್ಮನಿವೇದನೆಯ ಒಬ್ಬ ಗೀತೆಗಳಿವೆ. ಭೋಗದ ಅನಿತ್ಯತೆ, ಧನವನ್ನು ಶರಣರಿಗೆ ಸವೆಸುವ ಬಗೆ, ಸ್ತ್ರೀ ಮೋಹದಿಂದ ಕೆಡದಿರುವುದು, ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

'ಜ್ಞಾನ ಪ್ರತಿಪಾದನ ಸ್ಥಲ'ದಲ್ಲಿ 'ನಂಬುಜ್ಞಾನವನೆ ಕರ್ಮವೆಂಬ ಜಾಲಗೊಳುಸಿಲ್ಕಿ, ಹಂಬಲಿಸದಿರು ಮುಕ್ತಿಯಂ ಬಯಸಿ ಮನುಜ' ಎಂದು ಹೇಳುವ ಮೂಲಕ ಜ್ಞಾನಮಾರ್ಗದ

ಮಹತ್ತನ್ನು ಹೇಳುತ್ತಾರೆ. ಈ ಭಾಗದಲ್ಲಿ ಬರುವ *'ಜ್ಯೋತಿ ಬೆಳಗುತಿದೆ, ವಿಮಲ ಪರಂಜ್ಯೋತಿ ಬೆಳಗುತಿದೆ'* ಗೀತೆಯಂತೂ ಇಡೀ ಕೃತಿಗೆ ಕಲಶಪ್ರಾಯವಾಗಿದೆ. ಶರಣನ ಅನುಭಾವದ ತುರೀಯ ಸ್ಥಿತಿಯನ್ನು ಇದು ತುಂಬಾ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಗೀತೆಯಾಗಿದೆ.

ಪರಮಾನುಭವ ಬೋಧೆ

ಇದು ಯಾಜ್ಞವಲ್ಕ್ಯ-ಮೈತ್ರೇಯಿ ದಂಪತಿಗಳ ನಡುವೆ ನಡೆದ ಆಧ್ಯಾತ್ಮಿಕ ಚರ್ಚೆಯಾಗಿದೆ. ಇದರಲ್ಲಿ ೬ ಸಂಧಿಗಳು, ೧೨೨ ಸೂತ್ರಗಳು, ೮೮೫ ಸಾಂಗತ್ಯ ಪದ್ಯಗಳು ಕಂಡುಬರುತ್ತವೆ. *'ಯೋ ವೈಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ'* ಎಂದು ಛಾಂದೋಗ್ಯ ಉಪನಿಷತ್ತಿನ ಮಾತು. ಅಂತೆಯೇ ಇಂತಹ ಪರಮ ಸುಖವನ್ನು ಮುಮುಕ್ಷುಗಳು ಹೇಗೆ ಹೊಂದಬೇಕು ಎನ್ನುವುದು ಇದರಲ್ಲಿ ಸವಿಸ್ತಾರವಾಗಿ ಹೇಳಲಾಗಿದೆ.

ಈ ಕೃತಿಯ ಅಂತ್ಯದಲ್ಲಿ ನಿಜಗುಣರು ಇದು ವೇದ ವೇದಾಂತದೊಳು ಗೌಪ್ಯವಾದ ಅರ್ಥ ಪುರಾಣ ಸ್ಮೃತಿಗಳ ಸಾರ, ಪರಮಾರ್ಥದ ತಿರುಳು ಎಂದಿರುವರು. *'ವೀರಶೈವಕ್ಕೇ ವಿಶಿಷ್ಟವಾದೊಂದು ಅದ್ವೈತವನ್ನು ಉಪನಿಷತ್ತುಗಳಿಂದ, ಆಗಮಗಳಿಂದ, ವಾಸಿಷ್ಠಾದಿ ಮುನಿಮಾರ್ಗದಿಂದ ನಮಗಾಗಿ ಕನ್ನಡದಲ್ಲಿ ಸಿದ್ಧಾಂತ ಮಾಡಿಕೊಟ್ಟಿರುವುದನ್ನು ನಾವು ಕಣ್ಣಬಿಟ್ಟು ಕಾಣಬೇಕಾಗಿದೆ'* ಎಂದು ಡಾ॥ ಎಲ್. ಬಸವರಾಜುರವರು ಹೇಳಿದ್ದಾರೆ.

'ಸಾವಿರಾರು ವರ್ಷಗಳಿಂದ ಹರಿದುಬಂದ ಅದ್ವೈತದ ವಿಚಾರಧಾರೆ ನಿಜಗುಣರಲ್ಲಿ ತುಸು ಭಿನ್ನತೆಯನ್ನು ಪಡೆದು ವಿಶಿಷ್ಟಪೂರ್ಣವಾಗಿದೆ. ದೇಸಿನುಡಿ, ಭಾಷೆಯ ಪ್ರಾದೇಶಿಕ ರೂಪ, ಉಪಮಾನ-ರೂಪಕ-ಶ್ಲೇಷೆ-ದೃಷ್ಟಾಂತಗಳ ತತ್ತ್ವಕ್ಕೆ ಕಾವ್ಯದ ಬಣ್ಣ ಲೇಪಿಸಿ ಚಿತ್ತಾಕರ್ಷಕವಾಗುವಂತೆ ಜನರ ಮನಸ್ಸಿಗೆ ಆಧ್ಯಾತ್ಮ ನಾಟುವಂತೆ ಕಾಂತಾಸಂಹಿತದ ಧಾಟಿಯಲ್ಲಿ ಪ್ರತಿ ಪದ್ಯದಲ್ಲೂ ಪತ್ನಿಯನ್ನು ಪತಿಯು ಬಗೆ ಬಗೆಯ ವಿಶೇಷಣಗಳಿಂದ ಸಂಬೋಧಿಸುತ್ತಾ ಹೇಳುವ ಧಾಟಿ ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ". (ಷಣ್ಮುಖಯ್ಯ ಅಕ್ಕೂರಮಠ : *ಕೈವಲ್ಯ ಕೌಸ್ತುಭ ಪು : ೩೬೯,* ಸಂ. : ಚಂದ್ರಶೇಖರಯ್ಯ).

ಭಗವದ್ಗೀತೆಯು ಪ್ರತಿಪಾದಿಸುವ ವರ್ಣವ್ಯವಸ್ಥೆಯನ್ನು ನಿಜಗುಣರೂ ಇಲ್ಲಿ ಪ್ರತಿಪಾದಿಸುತ್ತಾ ಅವುಗಳ ಗುಣಧರ್ಮಗಳನ್ನು ವಿವರಿಸುತ್ತಾರೆ. ಮನಸ್ಸನ್ನು ಬಿಗಿ ಹಿಡಿಯುವುದು, ಇಂದ್ರಿಯಗಳನ್ನು ಬಿಗಿಹಿಡಿಯುವುದು; ತಪಸ್ಸು, ಶುಚಿತ್ವ, ಸೈರಣೆ, ಸರಳತೆ, ವೇದದ ಅರ್ಥವನ್ನು ತಿಳಿಯುವುದು, ಅದನ್ನು ಅನುಭವಿಸುವುದು - ಇವು ಬ್ರಾಹ್ಮಣರ ಹುಟ್ಟುಗುಣಕ್ಕೆ ತಕ್ಕ ಕೆಲಸಗಳು. ಬಲಶಾಲಿಗಳ ಮುಂದೆ ಎದೆಗೆಡದಿರುವುದು, ಹಗೆಗೆ ಸೋಲದ ಕೆಚ್ಚು, ಯುದ್ಧದಲ್ಲಿ ಕಾಲಿಗೆ ಬುದ್ಧಿ ಹೇಳದಿರುವುದು ಇತ್ಯಾದಿ ಕ್ಷತ್ರಿಯನ ಕೆಲಸಗಳು; ವ್ಯವಸಾಯ, ಪಶುಪಾಲನೆ, ವ್ಯಾಪಾರ ಇವು ಹುಟ್ಟುಗುಣಕ್ಕೆ ತಕ್ಕಂತ ವೈಶ್ಯರ ಕೆಲಸಗಳು. ಸೇವೆಯು ಶೂದ್ರನ ಹುಟ್ಟುಗುಣಕ್ಕೆ ತಕ್ಕ ಕೆಲಸ.

ಉಪನಿಷತ್ತುಗಳ ಆತ್ಮದರ್ಶನವನ್ನು ಸಂಗ್ರಹಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕನ್ನಡದ ಸಾಂಗತ್ಯ ಪದ್ಯಗಳಲ್ಲಿ ಹೇಳಿರುವರು. ಇದು ಆತ್ಮತತ್ತ್ವದ ಒಂದು ಸ್ವತಂತ್ರ ಕೃತಿಯಾಗಿದೆ. ಇಲ್ಲಿ ಯಥಾವತ್ ಸ್ವೀಕರಣೆ, ಅನುಕರಣೆಗಳಿಲ್ಲ. ಉಪನಿಷತ್ತಿನ ಮೂಲಧಾತುವನ್ನು ತಮ್ಮ ಉಜ್ವಲ ಪ್ರತಿಭೆಯ ಮೂಸೆಯಲ್ಲಿ ಕರಗಿಸಿ, ಕನ್ನಡದ ಸಾಂಗತ್ಯದಲ್ಲಿ ಎರಕ ಹೊಯ್ದು ಸುಂದರವಾದ 'ಆತ್ಮದರ್ಶನವೆಂಬ ಒಡವೆಯನ್ನು ರಚಿಸಿದ್ದಾರೆ. ಇದೊಂದು ಸ್ವತಂತ್ರಕೃತಿ; ಕನ್ನಡದ ಉಪನಿಷತ್ತು" (ಡಾ॥ ಜಿ.ಆರ್. ತಿಪ್ಪೇಸ್ವಾಮಿ : *ಕನ್ನಡ ಸಾಹಿತ್ಯ ಚರಿತ್ರೆ; ಮೈ.ವಿ.ವಿ. ಸಂ. ೫, ಭಾಗ-೨; ಪು ೬೮೪).*

ಪರಮಾರ್ಥಗೀತೆ

ಹನ್ನೊಂದು ಗತಿಗಳಿರುವ ಈ ಕೃತಿಯಲ್ಲಿ ಗುರು ಶಿಷ್ಯರ ಸಂವಾದ ರೂಪದಲ್ಲಿ ಮುಕ್ತಿಮಾರ್ಗದ ವಿಶ್ಲೇಷಣೆ ಇದೆ. ಒಂದೊಂದು ಗತಿಯಲ್ಲೂ ಎಂಟೆಂಟು ಪಾದಗಳ ಹನ್ನೊಂದು ರಗಳೆಗಳಿವೆ. ಪ್ರತಿ ಗತಿಯೂ ಒಂದು ಕಂದ ಪದ್ಯದಿಂದ ಪ್ರಾರಂಭವಾಗುತ್ತದೆ. **'ಯೋಗವಾಸಿಷ್ಠ'** ಗ್ರಂಥದಲ್ಲಿ ಗುರುವು ಶಿಷ್ಯನಿಗೆ ಮುಕ್ತಿಮಾರ್ಗವನ್ನು ಹೇಳಿರುವುದನ್ನು ತಾನು **'ಶಂಭುಲಿಂಗನ ಒಲವಿನಿಂದ'** ಕನ್ನಡದಲ್ಲಿ ಹೇಳುತ್ತಿರುವುದಾಗಿ ನಿಜಗುಣರೇ ಹೇಳಿಕೊಂಡಿದ್ದಾರೆ.

ಮೊದಲ ಆರು ಗತಿಗಳಲ್ಲಿ **'ಸಾಧ್ಯ'**ವನ್ನು ಮುಂದಿನ ನಾಲ್ಕು ಗತಿಗಳಲ್ಲಿ **'ಸಾಧನ'**ವನ್ನೂ, ನಂತರದ ಹನ್ನೊಂದನೇ ಗತಿಯಲ್ಲಿ **'ಜೀವನ್ಮುಕ್ತನ ಚಾರಿತ್ರ್ಯವು'** ಹೇಳಲ್ಪಟ್ಟಿದೆ. ಸಾಧ್ಯ ಭಾಗದಲ್ಲಿ ತಾನು ಆರು? ತನ್ನ ನಿಜಸ್ವರೂಪ ಯಾವುದು? ಈ ಸೃಷ್ಟಿ ಹೇಗಾಯಿತು? ಮುಂತಾದ ಶಿಷ್ಯನ (ರಾಮಚಂದ್ರ) ಪ್ರಶ್ನೆಗೆ ಗುರುವಿನ (ವಸಿಷ್ಠ) ಉತ್ತರಗಳಿವೆ. 'ಸಾಧನ' ಭಾಗದಲ್ಲಿ ಜನನ-ಮರಣ ಚಕ್ರವು ನಿಲ್ಲುವುದಕ್ಕೆ ಏನನ್ನು ಸಿದ್ಧಿಸಿಕೊಳ್ಳಬೇಕು ಎನ್ನುವುದನ್ನು ವಸಿಷ್ಠರು ವಿವರಿಸುವರು. ಇದರಲ್ಲಿ ಸಚ್ಚಿದಾನಂದ ಬ್ರಹ್ಮವೊಂದೇ ಸತ್ಯವಾದುದು; ಜಗತ್ತು ಮಾಯಾ ಸೃಷ್ಟಿಯಾಗಿದೆ. ಗುರು ಮತ್ತು ಶಾಸ್ತ್ರಗಳ ಮುಖಾಂತರ ತನ್ನ ನಿಜ ಸ್ವರೂಪವನ್ನು ತಿಳಿಯುವುದೇ ಮುಕ್ತಿ; ಈ ಮುಕ್ತಿಗೆ ಬ್ರಹ್ಮಜ್ಞಾನವೇ ನಿಜವಾದ ಸಾಧನ - ಮುಂತಾದ ಅಂಶಗಳನ್ನು ವಿವರಿಸಲಾಗಿದೆ.

ಆತ್ಮದ ಸ್ವರೂಪವನ್ನು ಅರಿತು ಮುಕ್ತಿ ಮಾರ್ಗದಲ್ಲಿ ಕ್ರಮಿಸಲು ಈ ಕೃತಿ ಒಂದು ಕೈಪಿಡಿಯಂತಿದೆ.

ವಿವೇಕ ಚಿಂತಾಮಣಿ

ಹತ್ತು ಪರಿಚ್ಛೇದಗಳನ್ನು ಒಳಗೊಂಡ ಈ ಕೃತಿಯು ವಿಶ್ವಕೋಶ ಎಂದೇ ಪರಿಗಣಿತವಾಗಿದೆ. ಆದ್ದರಿಂದಲೇ ಇದರಲ್ಲಿ

ಕಲ್ಪಿತ ವಿಷಯಗಳಿಗೆ ಎಡೆಯಿಲ್ಲ. ಪರಮ ಪ್ರಮಾಣವೆನಿಸಿದ ಆಗಮ, ಆಮ್ನಾಯ ಸಮ್ಮತದಿಂದ ಉಭಯ ಮೂಲವಾದ ಸ್ಮೃತಿ ಪುರಾಣ ಇತಿಹಾಸ ಪುರಾತನ ಉಕ್ತಿಗಳಿಗನುಸಾರವಾಗಿ, ಅನುಭಾವಿಗಳು ಒಪ್ಪಿ ಅಹುದೆನ್ನುವಂತೆ ವಿವರಿಸಲಾಗಿದೆ. ಹಾಗೆಯೇ ತರ್ಕ ಸಮ್ಮತವಾಗಿದೆ. ಇದು ಮೂಲತಃ ಆಗಮಿಕ ಮೂಲವಾದ ಶಿವ ಸಿದ್ಧಾಂತಪರವಾದ ಗ್ರಂಥ. ಇದು ಉಪನಿಷತ್ತು, ಆಗಮ, ಪುರಾಣಗಳ ಆಧಾರದ ಮೇಲೆ ಸಂಸ್ಥಾಪಿಸಿರುವ ವೀರಶೈವ ಸಿದ್ಧಾಂತ ಗ್ರಂಥ. ಇಡೀ ಕೃತಿಯಲ್ಲಿ ನಿಜಗುಣರ ಬಹುಶ್ರುತ ಪಾಂಡಿತ್ಯ ಪ್ರತಿ ಪುಟದಲ್ಲಿಯೂ ಅಧಿಪತ್ಯವನ್ನು ಸ್ಥಾಪಿಸಿರುವುದು ಗೋಚರವಾಗುತ್ತದೆ. ಒಂದು ಕಡೆ ಆರು ಸಾವಿರ ಗ್ರಂಥಗಳಿಂದ ಆಯ್ದ ೭೬೩ ವಿಷಯಗಳನ್ನು ಹತ್ತು ಪ್ರಕರಣಗಳಲ್ಲಿ ವರ್ಣಿಸಲಾಗಿದೆ ಎನ್ನುವ ಮಾತು ಬರುತ್ತದೆ. ಆದರೆ ಇದು ಉತ್ಪ್ರೇಕ್ಷೆ ಎನಿಸುವುದಿಲ್ಲ. ಇದು ಎಷ್ಟು ಜನಪ್ರಿಯವಾದ ಗ್ರಂಥವೆಂದರೆ ಇದರ ಪ್ರಥಮ ಪರಿಚ್ಛೇದ ತಮಿಳು, ಮರಾಠಿ, ಸಂಸ್ಕೃತ ಭಾಷೆಗಳಿಗೂ ಅನುವಾದ ಗೊಂಡಿರುವುದರಿಂದ ಈ ಕೃತಿಯನ್ನು ಪದ್ಯರೂಪದಲ್ಲಿಯೂ ಬರೆದಿರಬೇಕೆನ್ನಿಸುತ್ತದೆ. ಆದರೆ ನಮಗೆ ಸಿಕ್ಕಿರುವ ಕೃತಿ ಬೆಳುಗನ್ನಡದ ಜನಪ್ರಿಯ ಗದ್ಯಕೃತಿ.

ಪ್ರಥಮ ಪರಿಚ್ಛೇದದಲ್ಲಿ ಸಕಲಶಾಸ್ತ್ರಗಳ ನಿರ್ಣಯವನ್ನು ವರ್ಣಿಸಲಾಗಿದೆ. ವೈದಿಕ ಅವೈದಿಕ ದರ್ಶನಗಳ ವಿವರಗಳಿವೆ. ದ್ವಿತೀಯ ಪರಿಚ್ಛೇದದಲ್ಲಿ ಶಿವಸಿದ್ಧಾಂತ ಪದ್ಧತಿ ಭಕ್ತಿ, ಕರ್ಮಕ್ಷಯ, ನಿರ್ಮಲ ಮತಿ, ವಿಚಾರ, ಧರ್ಮ ಸಂಕ್ಷಯ, ಸಂಯಕ್ ಜ್ಞಾನವೆಂಬ ಆರು ಫಲಗಳನ್ನು ವೀರಶೈವ ಷಟ್ಸ್ಥಲಗಳ ಸಮನ್ವಯದ ವಿವರಗಳಿದೆ. ಅಷ್ಟಾಂಗಯೋಗದ ವಿಸ್ತೃತ ವಿವರಗಳಿವೆ. ತೃತೀಯ ಪರಿಚ್ಛೇದಲ್ಲಿ ಸಮಸ್ತ ಬ್ರಹ್ಮಾಂಡದ ಹದಿನಾಲ್ಕು ವರ್ಣನೆ ಮಾಡಲಾಗಿದೆ. ನಾಲ್ಕನೆಯ ಪರಿಚ್ಛೆದದಲ್ಲಿ ಧಾರುಣಿಯ ವೈಚಿತ್ರ, ಭರತಖಂಡದ ವರ್ಣನೆ, ಮಾನವರ ಸಂಗೀತ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಕೆಲವು ಶಾಸ್ತ್ರೀಯ ವಿಚಾರಗಳು ಕಂಡುಬರುತ್ತವೆ. ಐದನೆಯ ಪರಿಚ್ಛೇದದಲ್ಲಿ ಸಮುದ್ರ, ಪರ್ವತ, ದೀಪಗಳ ವರ್ಣನೆಯಿದೆ. ಆರನೆಯ ಪರಿಚ್ಛೇದದಲ್ಲಿ ಊರ್ಧ್ವಲೋಕದ ವಿಷಯವಿದೆ. ಏಳರಲ್ಲಿ ಪಂಚಭೂತಗಳಿಂದ ಹಿಡಿದು ಮಾಯಾ ತತ್ತ್ವದವರೆಗಿನ ರುದ್ರಪ್ರಪಂಚದ ವರ್ಣನೆಯಿದೆ. ಎಂಟನೆಯ ಪರಿಚ್ಛೇದದಲ್ಲಿ ವಿದ್ಯಾದಿ ತತ್ತ್ವಗಳ ವರ್ಣನೆಯಿದೆ. ಒಂಬತ್ತರಲ್ಲಿ ಜೀವಿಗಳು ಕರ್ಮಫಲವನ್ನು ಅನುಭವಿಸುವ ರೀತಿ, ನಿಷ್ಕಾಮ ಕರ್ಮದ ಮಹತ್ವ, ಶಿವೈಕ್ಯ ಸ್ಥಿತಿಯ ವರ್ಣನೆಗಳು ಕಂಡುಬರುತ್ತವೆ. ಹತ್ತನೆಯ ಪರಿಚ್ಛೇದದಲ್ಲಿ ಜ್ಯೋತಿಷ್ಯ,ಕಾಲ ಕ್ರಮ, ಯುಗಧರ್ಮ, ಸಂಸಾರದ ಕ್ರಮಗಳ ನಿರೂಪನೆ ಇದೆ.

ವೇದಾಂತ, ಧರ್ಮಶಾಸ್ತ್ರ, ಆಗಮಗಳು ಭರತನ ನಾಟ್ಯಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ, ಮಮ್ಮಟನ ಕಾವ್ಯಪ್ರಕಾಶ, ಪಿಂಗಲನ ಛಂದಶಾಸ್ತ್ರ, ಧನಂಜಯನ ದಶರೂಪಕ, ಕಾಮಂದಕನ ನೀತಿಸಾರ, ಶಾರ್ಙ್ಗದೇವನ ಸಂಗೀತ ರತ್ನಾಕರ, ವರುಹ ಮಹಿಶನ ಬೃಹತ್ ಸಂಹಿತೆ'.

ಲಕ್ಕಣ್ಣ ದಂಡೇಶನ *ಶಿವತತ್ತ್ವ ಚಿಂತಾಮಣಿ,* ಸಿದ್ಧಲಿಂಗ ಯತಿಗಳ *ಷಟ್ಸ್ಥಲಜ್ಞಾನ ಸಾರಾಮೃತ,* - ಹೀಗೆ ಇವೆಲ್ಲವುಗಳ ಸಾರ ವಿವೇಕ ಚಿಂತಾಮಣಿಯಲ್ಲಿ ಅಡಕವಾಗಿದೆ. ಒಂದೇ ಕಡೆಯಲ್ಲಿ ಆಧ್ಯಾತ್ಮಿಕ, ಸಾಹಿತ್ಯಕ, ಭೌಗೋಲಿಕ, ಸಾಂಸ್ಕೃತಿಕ, ಧಾರ್ಮಿಕ, ನೈತಿಕ - ಈ ಎಲ್ಲ ವಿಚಾರಗಳನ್ನು ನಾವು ಪಡೆದುಕೊಳ್ಳಬಹುದಾದ ಕನ್ನಡದ ಏಕೈಕ ಕೃತಿ ನಿಜಗುಣರ **'ವಿವೇಕ ಚಿಂತಾಮಣಿ'**ಯಾಗಿದೆ.

ಪಾರಮಾರ್ಥ ಪ್ರಕಾಶಿಕೆ

ಚೆನ್ನಸದಾಶಿವಯೋಗಿಯು ಸಂಸ್ಕೃತದಲ್ಲಿ ರಚಿಸಿರುವ **'ಶಿವಯೋಗ ಪ್ರದೀಪಕೆ'**ಯ ಕನ್ನಡ ರೂಪ ಇದು. ಐದು ಪರಿಚ್ಛೇದಗಳನ್ನು ಒಳಗೊಂಡ ಇದು, ಒಂದು ಗದ್ಯ ಕೃತಿ. (ಈ ಕೃತಿ ನಿಜಗುಣ ಶಿವಯೋಗಿಗಳದ್ದು, ಅಲ್ಲ ಎಂದು ಹಿರಿಯ ವಿದ್ವಾಂಸರಾದ ಡಾ॥ ಎಲ್. ಬಸವರಾಜುರವರು *ತಮ್ಮ 'ನಿಜಗುಣ ಶಿವಯೋಗಿಯ ತತ್ತ್ವದರ್ಶನ'* ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ. *ಪೀಠಿಕೆ ಪು. xii-iv).* ಗುರುಶಿಷ್ಯರ ಸಂವಾದ ರೂಪದಲ್ಲಿ ಇರುವ ಈ ಕೃತಿ ಯೋಗಶಾಸ್ತ್ರಕ್ಕೆ ಸಂಬಂಧಪಟ್ಟುದಾಗಿದೆ.

ನಿಜಗುರು **'ಶಿವಯೋಗ ಪ್ರದೀಪಕೆ'**ಯ ಯೋಗಪಾದ ಪರಮ ರಹಸ್ಯಾರ್ಥಗಳನ್ನು ಗ್ರಹಿಸಿ ಅದರ ಸಮ್ಯಕ್ ಅನುಭಾವವನ್ನು **'ಪಾರಮಾರ್ಥ ಪ್ರಕಾಶಿಕೆ'**ಯಲ್ಲಿ ಸಂಸ್ಕೃತವರಿಯದ ಮುಮುಕ್ಷಗಳಿಗಾಗಿ ಅಂಗೈ ಮೇಲಣ ನೆಲ್ಲಿಕಾಯಿಯಂತೆ ಹೇಳಿರುವರು. ಶಿವಯೋಗವು ಸಗುಣ ನಿರ್ಗುಣ ಸಮನ್ವಯ ಯೋಗವೆಂದು ಹೇಳುವ ಮೂಲಕ ನಿಜಗುಣರು ಸಮನ್ವಯಾಚಾರ್ಯರಾಗಿ ಈ ಕೃತಿಯಲ್ಲಿ ಕಾಣಬರುವರು. ಪಾರಮಾರ್ಥ ಪ್ರಕಾಶಿಕೆಯು ಅನುವಾದ ಕೃತಿಯಾಗಿದ್ದರೂ ನಿಜಗುಣರ ಮಹಾನುಭಾವತ್ವ, ಮಹಾದಾರ್ಶನಿಕತ್ವದ ಫಲವಾಗಿ ಅದೊಂದು ಸ್ವತಂತ್ರ ಕೃತಿಯಂತೆ ನಿರೂಪಿತಗೊಂಡಿದೆ. *(ಡಾ॥ ಶಾಂತಾದೇವಿ ಸಣ್ಣೆಲ್ಲಪ್ಪ ಕೌವಲ್ಯ ಕೌಸ್ತುಭ :* ಸಂ. ಚಂದ್ರಶೇಖರಯ್ಯ ಪು : ೩೪೪).

ಸ್ವರೂಪಸಿದ್ಧಿ ಟೀಕೆ

ಪರಂಜ್ಯೋತಿಯು (೧೪೫೦) 'ಅನುಭವ ಮುಕುರ'ವೆನ್ನುವ ತ್ರಿಪದಿರೂಪದ ಕೃತಿಯ ಗದ್ಯರೂಪದ ಟೀಕೆ ಇದು. ಅದ್ವೈತ ಸಿದ್ಧಾಂತವನ್ನು ಇದರಲ್ಲಿ ವಿಸ್ತೃತವಾಗಿ ಪ್ರತಿಪಾದಿಸಿದ್ದಾರೆ. ಅನುಭವ ಮುಕುರವು ೧೬ ಸಂಧಿಗಳು, ೧೦೨ ಸೂತ್ರಗಳು, ೯೫ ತ್ರಿಪದಿಗಳು, ೯ ಕಂದ ಪದ್ಯಗಳು, ೩ ಗದ್ಯ ಭಾಗಗಳನ್ನು ಒಳಗೊಂಡ ಕೃತಿಯಾಗಿದೆ. ಹಾಗೆಯೇ ಇದರಲ್ಲಿ ಪೂರ್ವಕಾಂಡ, ಉತ್ತರಕಾಂಡ, ಮಹಾಕಾಂಡ

ಗಳೆಂದು ಮೂರು ಭಾಗಗಳಿವೆ. ಮೊದಲ ಎರಡು ಕಾಂಡಗಳು ಸ್ವಸ್ವರೂಪ ಸಿದ್ಧಗಳಿಸಲು ಸಾಧನ ಮತ್ತು ಅನುಭವಗಳನ್ನು ಮಾತ್ರ ವಿವರಿಸುತ್ತವೆ. ಸ್ವಸ್ವರೂಪ ಪರಿಜ್ಞಾನವಿರುವುದು ಮೂರನೆಯ ಕಾಂಡವಾದ ಅನುಭವ ಮುಕುರದಲ್ಲೇ. ಇದನ್ನೇ ಪರಂಜ್ಯೋತಿ ತನ್ನ ಕೃತಿಯ ಶೀರ್ಷಿಕೆಯಾಗಿ ಬಳಸಿದ್ದಾನೆ. ಮೊದಲನೆಯ ಎರಡು ಕಾಂಡಗಳು ದೇಗುಲದ ಹೊರಾವರಣವಿದ್ದಂತೆ. ಮೂರನೆಯ ಕಾಂಡ ಗರ್ಭಗುಡಿಯಿದ್ದಂತೆ. ಆದ್ದರಿಂದಲೇ ನಿಜಗುಣರು ತಮ್ಮ ಟೀಕೆಗೆ ಈ ಭಾಗವನ್ನು ಮಾತ್ರ ಬಳಸಿಕೊಂಡಿದ್ದಾರೆ.

ಪುರಾತನ ತ್ರಿವಿಧಿ

ಇದು ಕೇವಲ ೭೭ ಪದ್ಯಗಳನ್ನು ಒಳಗೊಂಡ ಒಂದು ಚಿಕ್ಕ ಕೃತಿ. ಇದರಲ್ಲಿ ೬೩ ಪುರಾತನರ ಬಗ್ಗೆ ಕೇವಲ ಸ್ಥೂಲ ಮಾಹಿತಿಯಷ್ಟೇ ಇದೆ. ಈ ಪುರಾತನ ಭಕ್ತರು ನಿಜಗುಣರಿಗೆ ಶಿವನ ಸಾಕ್ಷಾತ್ ರೂಪವಾಗಿ ಕಂಡಬರುತ್ತಾರೆ. ಶಿವನೊಬ್ಬನೇ ಈ ೬೩ ಪುರಾತನರ ಹೆಸರಿನಲ್ಲಿ ಗೋಚರಿಸುತ್ತಾನೆ ಎನ್ನುವುದು ಇವರ ನಂಬಿಕೆ. ಇವರು ಶಿವ ಪಾರ್ವತಿಗಿಂತಲೂ ಶ್ರೇಷ್ಠರು; ಆ ಕಾರಣಕ್ಕೆ ಇವರನ್ನು ನಿತ್ಯವೂ ಸ್ಮರಿಸುವುದರಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ ಎನ್ನುವುದು ಇವರ ನಿಲುವು. ಈ ಕೃತಿಯು ಕೇವಲ ಪುರಾತನರ ಮಾಹಿತಿಯ ಕೈಪಿಡಿಯೇ ಹೊರತು ಹೆಚ್ಚಿನದೇನನ್ನೂ ನಾವು ಇದರಲ್ಲೇ ಕಾಣುವಂತಿಲ್ಲ.

* * *

ನಿಜಗುಣರು ಶಾಸ್ತಕಾರರು, ಕವಿಗಳು, ಇವೆಲ್ಲಕ್ಕಿಂತ ಮೇಲಾಗಿ ಅನುಭಾವಿಗಳು. ಆದ್ದರಿಂದಲೇ ಇವರ ಕೃತಿಗಳಲ್ಲಿ ಶಾಸ್ತಕಾರನ ವ್ಯುತ್ಪತ್ತಿ ನಿಖರತೆ ಕಂಡು ಬಂದರೆ, ಸೃಜನಶೀಲ ಲೇಖಕರಾಗಿ ಎಲ್ಲದರಲ್ಲಿಯೂ ಆ ಸೃಜನಶೀಲ ಪ್ರತಿಭೆಯ ದಟ್ಟವಾದ ಸ್ಪರ್ಶ ಕಂಡುಬರುತ್ತದೆ. ಈ ಎರಡು ಸೌಧಗಳ ಬುನಾದಿ ಮಾತ್ರ ಅನುಭಾವವೇ ಆಗಿದೆ. ಅವರ ಶಾಸ್ತ್ರ ಗ್ರಂಥಗಳಲ್ಲಿ ಭಾರತೀಯ ತತ್ತ್ವಶಾಸ್ತ್ರದ ಸಾರವೆಲ್ಲಾ ಭಟ್ಟಿ ಇಳಿದಿದೆ; ಅದೂ ಸರಳ ಸುಂದರ 'ಬೆಳುಗನ್ನಡ'ದಲ್ಲಿ. ಇದು ಕನ್ನಡಿಗರ ಪುಣ್ಯವೇ ಸರಿ. ಅವರ ಪದ್ಯಶೈಲಿಯಲ್ಲಿ ಲಾಲಿತ್ಯ, ಮಾಧುರ್ಯ, ನಾದಪಂಕ್ತಿಯಿದ್ದರೆ, ಅವರ ಗದ್ಯದಲ್ಲಿ ಸಂಗ್ರಹ ಗುಣ, ಹಾಗೂ ನಿಖರತೆ ಎದ್ದುಕಾಣುತ್ತದೆ.

ಅವರ ಕೆಲವು ಸೂತ್ರಪ್ರಾಯವಾದ ಮಾತುಗಳು ಇಂತಿವೆ –

'ಗುರುವಚನದಿಂದಧಿಕ ಸುಧೆಯುಂಟೆ'
'ಕರಣ ವಿಜಯದಿಂದ ಕಲಿತನವುಂಟೆ'
'ಆರು ನಾನೆಂದು ವಿಚಾರಿಸು. ವಿಷಮ ಸಂಸಾರವಿದನು ಕನಸೆಂದರಿ'
'ಧರೆಗೆ ಯಾಚನೆಯಿಂದ ಲಘುತರ ತರಮುಂಟೆ'

ಇಂತಹ ಅಸಂಖ್ಯ ಮಾತುಗಳು ಅವರ ಕೃತಿಗಳಲ್ಲಿ ಕಂಡುಬರುತ್ತವೆ. ಅವರು ಪೂರ್ವಾಶ್ರಮದಲ್ಲಿ ಪಡೆದ ದಟ್ಟವಾದ ಲೌಕಿಕ ಅನುಭವ ಹಾಗೆಯೇ ಮುಂದಿನ ದಿನಮಾನಗಳಲ್ಲಿ ಅನುಸಂಧಾನ ಮಾಡಿದ ಆತ್ಮವಿದ್ಯೆ ಇವೆರಡರ ಮುಂದಿನ ಪರಿಪಾಕಗೊಂಡ ಅವರ 'ಚಿತ್ತ', ಸಾಮಾನ್ಯರಿಗೂ ಸಾಧಿಸಲು ಸಾಧ್ಯವಾಗುವ 'ಐಕ್ಯ' ಮಾರ್ಗವನ್ನು ನಿರ್ದೇಶಿಸಲು, ಅಷ್ಟೇ ಅಲ್ಲ ಕೈ ಹಿಡಿದು ನಡೆಸಲು ಸಮರ್ಥವಾಗಿದೆ. ಆ ಕಾರಣದಿಂದಲೇ ಅವರ ಮಾತುಗಳು ಪರಂಜ್ಯೋತಿ ಸ್ವರೂಪಗಳಾಗಿವೆ.

ಆಧಾರ ಸೂಚಿ

ನಿಜಗುಣರ ಸಮಗ್ರ ಕೃತಿಗಳು ಭಾಗ-೧, ಭಾಗ-೨, ಸಂ. : ಡಾ॥ ಎಸ್. ವಿದ್ಯಾಶಂಕರ್. ಪ್ರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು (೧೯೯೫), ಸಂಪುಟ – ೧

		ಪುಟಗಳು
೧.	ಪುರಾತನ ತ್ರಿವಿಧಿ೧-೯	
	೨. ಕೈವಲ್ಯ ಪದ್ಧತಿ	೧೩-೧೫೨
	೩. ಪರಮಾನುಭವ ಬೋಧೆ	೧೫೫-೩೩೦
	೪. ಪರಮಾರ್ಥಗೀತೆ	೩೩೩-೩೯೨
	೫. ಅನುಭವಸಾರ	೩೯೬-೪೬೯
ಸಂಪುಟ – ೨		
	೧. ವಿವೇಕ ಚಿಂತಾಮಣಿ	೧-೨೪೮
	೨. ಪಾರಮಾರ್ಥ ಪ್ರಕಾಶಿಕೆ	೨೫೧-೩೪೮
	೩. ಸ್ವರೂಪಸಿದ್ಧಿ ಟೀಕೆ	೩೫೬-೪೩೮

(ಕೃಪೆ: ಅನುಭಾವಪಥ)

ಶ್ರೀ ಸಿದ್ಧಗಂಗಾ ಮಠ

ಶ್ರೀ ಗುರು ಕೃಪಾಕಟಾಕ್ಷವು
ಸಿರಿವಂತರು, ಬಡವರು, ನೊಂದವರ, ಉ
ದ್ಧರಿಸುವ ಕರುಣಾಮಯಿಯಾದ
ಗಮನದಿ ವಿದ್ಯೆ, ಅನ್ನ, ಆಶ್ರಯದಿ
ಂದ ಅಜ್ಞಾನವ ತೊಳೆವ ಜ್ಞಾನಗಂ
ಗಾ ಸದಾ ನೆಲೆಸಿರುವ ದಿವ್ಯತಾಣ
ಮಹಿಮಾನ್ವಿತ ನಾಡಿನ ಭಕ್ತರ ಸನ್ನಿಧಾನ
ಠಕ್ಕುತನವಿಲ್ಲದ ಸತ್ಯಧರ್ಮ ಜ್ಯೋತಿ
ಶ್ರೀ ಸಿದ್ಧಗಂಗಾ ಮಠ

ನಾಗರಾಜಪ್ಪ ಅರ್ಕಾಚಾರ್
ನ್ಯಾಮತಿ

ಶರಣ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ಶ್ರೇಷ್ಠ ವಿದ್ವಾಂಸ ಡಾ. ಹೆಚ್. ತಿಪ್ಪೇರುದ್ರಸ್ವಾಮಿ

– ಎಚ್.ಎಸ್. ಸಿದ್ಧಗಂಗಪ್ಪ *

ಶಿವಮೊಗ್ಗ ಜಿಲ್ಲೆ ಶ್ರೇಷ್ಠ ಕವಿಗಳಿಗೆ, ವಿದ್ವಾಂಸರಿಗೆ ದಾರ್ಶನಿಕರಿಗೆ, ರಾಜಕೀಯ ಮುತ್ಸದ್ದಿಗಳಿಗೆ, ಸಮಾಜ ವಾದಿಗಳಿಗೆ, ಚಿಂತಕರಿಗೆ ಜನ್ಮ ನೀಡಿದ ಪುಣ್ಯಭೂಮಿ. ಅಂತಹ ಪುಣ್ಯಭೂಮಿಯಲ್ಲಿ ಜನಿಸಿ ಶರಣ ಸಾಹಿತ್ಯವೂ ಸೇರಿದಂತೆ ಅನೇಕ ಪ್ರಕಾರಗಳಲ್ಲಿ ಮೌಲಿಕ ಕೃತಿಗಳನ್ನು ನೀಡಿ ಘನತೆಯನ್ನು ತಂದುಕೊಟ್ಟವರು ಶ್ರೇಷ್ಠ ವಿದ್ವಾಂಸರಾದ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು ಎಂದು ಹೇಳುವಾಗ ಮನಸ್ಸು ಪುಳುಕಿತವಾಗುತ್ತದೆ.

ಸರಳತೆ, ಸಜ್ಜನಿಕೆ, ಮುಗ್ಧತೆಯಿಂದ ಕೂಡಿದ ಮಗುವಿನ ನಗು, ನಿಷ್ಕಲ್ಮಶವಾದ ಹೃದಯ ವೈಶ್ಯಾಲತೆ, ಎಲ್ಲರನ್ನು ಪ್ರೀತಿಸುವ, ಎಲ್ಲರಲ್ಲಿಯೂ ಒಳಿತನ್ನೇ ಕಾಣುವ ದಾರ್ಶನಿಕ ದೃಷ್ಟಿ, ವಿನಯವಂತಿಕೆ, ಅವರಲ್ಲಿದ್ದ ಅದ್ವಿತೀಯ ಪಾಂಡಿತ್ಯಕ್ಕೆ ಮೆರಗು ನೀಡುತ್ತಿದ್ದವು. ಅವರದು ತಲಸ್ಪರ್ಶಿ ಅಧ್ಯಯನ, ಸೂಕ್ಷ್ಮ ಸಂವೇದನಾಶೀಲತೆಯಿಂದ, ಇಂದಿನ ಯುವ ವಿದ್ವಾಂಸರಿಗೆ ಮಾರ್ಗದರ್ಶಕರಾಗಿದ್ದರು. ಯಾವುದೇ ವಿಷಯವನ್ನು ತೆಗೆದುಕೊಂಡು ಬರೆಯುವಾಗ ವೈಜ್ಞಾನಿಕ ವಿಶ್ಲೇಷಣೆ, ವಸ್ತುನಿಷ್ಠತೆ ಹಾಗೂ ನಿಖರತೆ ಇದ್ದುದರಿಂದ ಅವರ ಲೇಖನಿಯಿಂದ ಮೂಡಿಬಂದ ಲೇಖನಗಳು, ಕೃತಿಗಳು ಮೌಲ್ಯದಿಂದ ಕೂಡಿವೆ.

ಕಾದಂಬರಿ, ನಾಟಕ, ಸಣ್ಣಕಥೆ, ಕಾವ್ಯ ಮಕ್ಕಳ ಸಾಹಿತ್ಯ ಜೀವನಚರಿತ್ರೆ ಗ್ರಂಥ ಸಂಪಾದನೆ, ಸಂಪಾದಿತ ಉದ್ಗ್ರಂಥಗಳು, ಬಾನುಲಿ ಚಿಂತನ ಭಾಷಣ, ವಿಮರ್ಶೆ, ಇಂಗ್ಲೀಷ್ ಕೃತಿಗಳು, ಇಂಗ್ಲೀಷಿಗೆ ಅನುವಾದವಾಗಿರುವ ಕೃತಿಗಳೂ ಸೇರಿದಂತೆ ನೂರಕ್ಕೂ ಹೆಚ್ಚು ಕೃತಿಗಳನ್ನು ನೀಡಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

ನಾನು ಶಿವಮೊಗ್ಗದಲ್ಲಿ ಸರ್ಕಾರಿ ಸೇವೆಯಲ್ಲಿದ್ದ ಸಂದರ್ಭದಲ್ಲಿ ಡಾ. ತಿಪ್ಪೇರುದ್ರಸ್ವಾಮಿಯವರು ಬಿ.ಆರ್. ಪ್ರಾಜೆಕ್ಟ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿದ್ದರು. ಅನೇಕ ಸಂದರ್ಭಗಳಲ್ಲಿ ಅವರನ್ನು ಭೇಟಿ ಮಾಡುವ ಸುಯೋಗ ನನಗೆ ದೊರಕಿತ್ತು. ಅವರು ನಾಡು ಕಂಡ ಪ್ರಸಿದ್ಧ ವಿದ್ವಾಂಸರಾಗಿದ್ದರೂ ಅವರಲ್ಲಿ ಸರಳತೆ, ಸೌಜನ್ಯ ಮನೆ ಮಾಡಿಕೊಂಡಿರುವುದನ್ನು ಕಂಡು ವಿಸ್ಮಿತನಾಗಿದ್ದೆ. ಅಹಂ ಅನ್ನುವುದು ಅವರ ಹತ್ತಿರ ಸುಳಿಯಲು ಭಯಪಡುತ್ತಿತ್ತು. ತಮ್ಮ ಕೊನೆಯುಸಿರುವವರೆಗೂ ತಾವು ನಂಬಿದ ಮೌಲ್ಯಗಳನ್ನು, ಆದರ್ಶವನ್ನು ಜತನದಿಂದ ಕಾಪಾಡಿಕೊಂಡು ಬಂದ ಸಜ್ಜನರು. ನಾನು ಅವರನ್ನು ಭೇಟಿಯಾದಾಗಲೆಲ್ಲ ಪ್ರೀತಿಯಿಂದ, ಆತ್ಮೀಯತೆಯಿಂದ ಮಾತನಾಡುತ್ತಿದ್ದರು. ನಾವೊಮ್ಮೆ ಅವರನ್ನು ನೇರವಾಗಿ ಕೇಳಿದೆ. ಸಾರ್, ನೀವು ಇಷ್ಟು ದೊಡ್ಡ ವಿದ್ವಾಂಸರಾಗಿದ್ದರೂ, ಅಧಿಕಾರದಲ್ಲಿದ್ದರೂ, ಈ ಸರಳತೆ ನಿಮಗೆ ಹೇಗೆ ಸಾಧ್ಯವಾಯಿತು ಎಂದು. ಆಗ ಅವರು ನಸುನಕ್ಕು ಹೇಳಿದರು. 'ಸರಳತೆ ಹೃದಯದಿಂದ ಮೂಡಿಬರಬೇಕು ಮತ್ತು ಶ್ರದ್ಧೆ ಇಲ್ಲದೆ ಇದ್ದರೆ ಮಹತ್ವವನ್ನು ಸಾಧಿಸುವುದು ಮರೀಚಿಕೆಯಾಗುತ್ತದೆ'. ಅವರ ಮಾತನ್ನು

* ೧೬೧೭, ಮಾತೃಶ್ರೀ, ಸರ್ ಎಂ.ವಿ. ಮುಂದುವರೆದ ಬಡಾವಣೆ, ೮ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು, ಮುದ್ದಿನಪಾಳ್ಯ ಮುಖ್ಯರಸ್ತೆ, ಬೆಂಗಳೂರು-೯೧

ಕೇಳಿ ನನಗೆ ದೊಡ್ಡವರಲ್ಲಿ ದೊಡ್ಡತನವೇ ಕಾಣಿಸಿತು. 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಇಂಥವರನ್ನು ಕಂಡೇ ಸೃಷ್ಟಿಯಾಗಿರಬೇಕು ಎಂದುಕೊಂಡೆ. ಯಾರಾದರು ಸರಳತೆ, ಹೃದಯವಂತಿಕೆ, ನಿರಾಡಂಬರತೆ ಎಂದುರೇನು ಎಂದು ಪ್ರಶ್ನೆ ಮಾಡಿದರೆ ಡಾ. ಹೆಚ್. ತಿಪ್ಪೇರುದ್ರ ಸ್ವಾಮಿಯವರನ್ನು ಉದಾಹರಣೆಯಾಗಿ ಕೊಡಬಹುದು.

ಸೃಜನಶೀಲತೆಯಿದ್ದುದರಿಂದ ಅವರ ಬರಹಗಳಲ್ಲಿ ಸೂಕ್ಷ್ಮವಾದ ಒಳನೋಟಗಳನ್ನು ಕಾಣಲು ಸಾಧ್ಯವಾಯಿತು. ಬದುಕಿರುವವರೆಗೂ ಉನ್ನತ ಆದರ್ಶಗಳ ಮುಂಬೆಳಕಿನಲ್ಲಿ ಬದುಕಿದರು. ಅಂತರಂಗ ಬಹಿರಂಗಗಳೆರಡಲ್ಲೂ ಏಕತಾನತೆಯನ್ನು ಕಾಪಾಡಿಕೊಂಡು ಬಂದರು. ಸಂತೋಷವಾದಾಗ ಹಿಗ್ಗದೆ, ಕಷ್ಟ ಬಂದಾಗ ಕುಗ್ಗದೆ ಸ್ಥಿತಿಪ್ರಜ್ಞತ್ವವನ್ನು ಹೊಂದಿದ್ದರು. ಅವರ ಮನಸ್ಸು ಪೂರ್ವಾಗ್ರಹಪೀಡಿತವಲ್ಲದ ನಿಷ್ಕಳಂಕವಾದ ಮುಗ್ಧ ಮನಸ್ಸು. ಅವರ ಯಾವುದೇ ಧರ್ಮಕ್ಕೆ ಬದ್ಧರಾದವರಲ್ಲ, ಹಾಗೆಯೇ ಯಾವುದೇ ಧರ್ಮವನ್ನು ವಿರೋಧಿಸಿದವರೂ ಅಲ್ಲ. ಶರಣರು ಬದುಕಿ ತೋರಿಸಿದ ಮಾನವ ಧರ್ಮದ ತತ್ತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ಜನನ :

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ಫೆಬ್ರವರಿ ೩, ೧೯೨೮ ರಲ್ಲಿ ಜನಿಸಿದರು. ಹಡೆದಪುಣ್ಯ ಜೀವಿಗಳು ತಂದೆ ಚನ್ನಮಲ್ಲಯ್ಯ, ತಾಯಿ ಬಸಮ್ಮ. ಹುಟ್ಟಿದಾಗ ಇಟ್ಟ ಹೆಸರು ತೋಂಟರಾಧ್ಯ, ಆದರೆ ಮಗು ಸದಾ ಅಳುತ್ತಿದ್ದುದರಿಂದ ಮನೆದೇವರಾದ ತಿಪ್ಪೇರುದ್ರ ಮುನಿಸ್ವಾಮಿಗೆ ಮೊರೆ ಹೋದರು. ಮಗು ಅಳುವುದನ್ನು ನಿಲ್ಲಿಸಿತು. ಮುಂದೆ ಶಾಲೆಗೆ ಸೇರಿಸುವಾಗ ಹೆಚ್. ತಿಪ್ಪಯ್ಯ ಎಂದು ದಾಖಲಿಸಿದರು. ಹುಟ್ಟಿದ ಮೂರು ತಿಂಗಳಿಗೆ ಮಾತೃ ವಾತ್ಸಲ್ಯದಿಂದ ವಂಚಿತವಾದ ನತದೃಷ್ಟ ಮಗು. ಅಜ್ಜಿ ಚನ್ನಜ್ಜಿ, ಮುತ್ತಜ್ಜಿ, ಗೌರಜ್ಜಿಯವರ ಆರೈಕೆಯಲ್ಲಿ ಬೆಳೆಯಿತು. ತೊಟ್ಟಿಲಲ್ಲಿ ಮಗುವನ್ನು ಮಲಗಿಸುತ್ತಾ ಅಜ್ಜಿ, ಮುತ್ತಜ್ಜಿಯವರು ವಚನಗಳು, ತತ್ತ್ವಪದಗಳನ್ನು ಹಾಡುತ್ತಿದ್ದರು. ಶಿಶುವಾಗಿದ್ದಾಗಲೇ ದೊರೆತ ಆಧ್ಯಾತ್ಮಿಕ ಪರಿಸರ ಮುಂದೆ ಅವರು ಶರಣರನ್ನು ಕುರಿತು ಅಧ್ಯಯನ ಮಾಡಿ ಮೌಲಿಕ ಗ್ರಂಥಗಳನ್ನು ರಚಿಸಲು ಸಾಧ್ಯವಾಯಿತು.

ಶಿಕ್ಷಣ :

ಪ್ರಾಥಮಿಕ ಶಿಕ್ಷಣ ಹೊನ್ನಾಳಿಯಲ್ಲಿ ಪ್ರಾರಂಭವಾಗಿ, ಬಿಳಗಿ, ಜಡೆಗೆ, ಆನವಟ್ಟಿ, ಶಿರಾಳಕೊಪ್ಪದಲ್ಲಿ ನಡೆಯಿತು. ಪ್ರೌಢಶಿಕ್ಷಣ ಶಿವಮೊಗ್ಗದ ತೀರ್ಥಹಳ್ಳಿಯಲ್ಲಿ ನಡೆಯಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಪೋಷಕರು, ಬಂಧುಗಳು ಹೆಮ್ಮೆಪಡುವಂತೆ ಮಾಡಿದರು. ಪ್ರೌಢಶಿಕ್ಷಣ ಮುಗಿದ ಮೇಲೆ ವೈದ್ಯರಾಗಬೇಕೆಂಬ ಆಶಯದಿಂದ ಮನೆಯವರು ಎಲ್.ಎಂ.ಪಿ. ಓದಲು ಅರ್ಜಿಯನ್ನು ಹಾಕಿಸಿದರು. ಆದರೆ ತಿಪ್ಪೇರುದ್ರಸ್ವಾಮಿಯವರು ಎಂ.ಬಿ.ಬಿ.ಎಸ್. ಓದಿ ಡಾಕ್ಟರಾಗಬೇಕೆಂದು ಮನೆಯವರನ್ನು ಒಪ್ಪಿಸಿ ಶಿವಮೊಗ್ಗ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಸೇರಿದರು.

ಆ ವೇಳೆಗಾಗಲೆ, ಅವರು ಕನ್ನಡ ಪ್ರಸಿದ್ಧ ಕವಿಗಳ, ಲೇಖಕರ ಗ್ರಂಥಗಳನ್ನು ಓದಿ ಕನ್ನಡದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಕನ್ನಡ, ಬಿ.ಎನ್. ಶಾಮರಾಯರ ಇಂಗ್ಲೀಷ್‌ನ ಷೇಕ್ಸಪಿಯರ್ ಪಾಠಗಳು ಅವರ ಮೇಲೆ ಗಾಢವಾದ ಪ್ರಭಾವ ಬೀರಿ, ಎರಡನೇ ವರ್ಷಕ್ಕೆ ಬರುವ ವೇಳೆಗೆ ಸಾಹಿತ್ಯ ವಿದ್ಯಾರ್ಥಿಯಾಗಬೇಕೆಂದು ನಿರ್ಧರಿಸಿದ್ದರು. ಕುವೆಂಪು ಅವರ ಕೃತಿಗಳನ್ನು; ಫ.ಗು. ಹಳಕಟ್ಟಿಯವರ ವಚನ ಸಾಹಿತ್ಯಗಳನ್ನೆಲ್ಲ ಓದಿದರು. ಶರಣರ ಜೀವನ ಚರಿತ್ರೆಗಳನ್ನು, ವಚನಗಳನ್ನು ಓದಿ ಮನನ ಮಾಡಿಕೊಂಡಿದ್ದರು.

ಸಾಹಿತ್ಯ ವಿದ್ಯಾರ್ಥಿಯಾಗಬೇಕೆಂಬ ದೃಢ ನಿರ್ಧಾರದಿಂದ ಹಿಂದೆ ಸರಿಯದೆ, ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್‌ಗೆ ಸೇರಿದರು. ಕುವೆಂಪು, ಎನ್. ಅನಂತರಂಗಾಚಾರ್, ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಎಸ್.ವಿ. ಪರಮೇಶ್ವರ ಭಟ್ಟ, ದೇ. ಜವರೇಗೌಡ, ಉ.ಕಾ. ಸುಬ್ಬರಾಯಾಚಾರ್, ಕೆ.ವಿ. ರಾಘವಾಚಾರ್, ತ.ಸು. ಶಾಮರಾಯರು ಸೇರಿದಂತೆ ಅನೇಕ ದಿಗ್ಗಜರುಗಳು ಅವರ ಗುರುಗಳಾಗಿದ್ದರು. ಅವರು ಮಾಡುತ್ತಿದ್ದ ಪಾಠಗಳು ತಿಪ್ಪೇರುದ್ರಸ್ವಾಮಿಗಳವರಲ್ಲಿ ಸಾಹಿತ್ಯದ ಬಗ್ಗೆ ಆಳವಾಗಿ ಚಿಂತನೆ ಮಾಡಲು ಪ್ರೇರಣೆ, ಪ್ರಭಾವ ಬೀರಿದವು. ಬಿ.ಎ. ಆನರ್ಸ್‌ನಲ್ಲಿ ಪ್ರಥಮ ದರ್ಜೆ ಪ್ರಥಮ ರ್‍ಯಾಂಕ್‌ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿ ಎಂಬ ಕೀರ್ತಿಗೆ ಭಾಜನರಾದರು. ಚಿನ್ನದ ಪದಕದ ಜೊತೆಗೆ ಮೂರು ಬಹುಮಾನಗಳನ್ನು ತಮ್ಮ ಮಡಿಲಿಗೆ ಹಾಕಿಕೊಂಡರು.

ಆಗ ಬಿ.ಎ. ಆನರ್ಸ್ ಮುಗಿಸಿದವರಿಗೆ ಕಾಲೇಜು ಅಧ್ಯಾಪಕರ ಕೆಲಸ ಸಿಗುತ್ತಿದ್ದರೂ, ತಮ್ಮ ಗುರುಗಳ ಸಲಹೆಯಂತೆ ಎಂ.ಎ.ಗೆ ಸೇರಿದರು. ಇವರ ಜೊತೆಗೆ ಜಿ. ಗುಂಡಣ್ಣನವರು, ಜಿ.ಎಸ್. ಶಿವರುದ್ರಪ್ಪನವರು ಇವರ ಸಹ ಪಾಠಿಗಳಾಗಿದ್ದರು. ಎಂ.ಎ. ತರಗತಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಮತ್ತು ಎರಡು ಬಹುಮಾನಗಳನ್ನು ಪಡೆದರು. ಪ್ರಾಥಮಿಕ ಹಂತದಿಂದ ಎಂ.ಎ. ವರೆಗೂ ಮೊದಲ ಸ್ಥಾನವನ್ನು ಉಳಿಸಿಕೊಂಡು ಬಂದ ಪ್ರತಿಭಾವಂತ ತಿಪ್ಪೇರುದ್ರಸ್ವಾಮಿ ಅವರು. ಎಂ.ಎ. ಮುಗಿಯುವ ವೇಳೆಗೆ ತಮ್ಮ ಹೆಸರನ್ನು 'ಎಚ್. ತಿಪ್ಪಯ್ಯ' ಎಂಬ ಹೆಸರನ್ನು ಎಚ್. ತಿಪ್ಪೇರುದ್ರಸ್ವಾಮಿ ಎಂದು ಅಧಿಕೃತವಾಗಿ ಬದಲಾಯಿಸಿಕೊಂಡರು.

ವೃತ್ತಿ ಜೀವನ :

೧೯೫೨ ರಲ್ಲಿ ಹಾಸನದ ಸರ್ಕಾರಿ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ವೃತ್ತಿಯಲ್ಲಿ ಯಶಸ್ವಿಯಾಗ ಬೇಕಾದರೆ ತಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳಬೇಕೆಂದು ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡರು. ಅವರು ಅಧ್ಯಯನ ಪಠ್ಯಪುಸ್ತಕಗಳಿಗಷ್ಟೇ ಸೀಮಿತಗೊಳ್ಳದೆ ಕನ್ನಡದ ಪ್ರಮುಖ ಪ್ರಾಚೀನ ಅರ್ವಾಚೀನ ಕವಿಗಳೆಲ್ಲರವರೆಗೂ ವ್ಯಾಪಿಸಿತ್ತು. ಅದು ಕೇವಲ ಕನ್ನಡ ಸಾಹಿತ್ಯಕ್ಕಷ್ಟೇ ಮೀಸಲಾಗದೆ ಸಂಸ್ಕೃತ ಮತ್ತು ಪಾಶ್ಚಾತ್ಯ ಸಾಹಿತ್ಯವನ್ನು ಒಳಗೊಂಡಿತ್ತು. ಚಾರಸಿನಿಂದ ಹಿಡಿದು ಷೇಕ್ಸ್‌ಪಿಯರ್, ಶೆಲ್ಲಿ ಮ್ಯಾಥ್ಯೂ ಆರ್ನಾಲ್ಡ್, ಹಡ್ಸನ್, ಥಾಮಸ್ ಹಾರ್ಡಿ, ಚಾರ್ಲ್ಸ್ ಡಿಕಿನ್ಸ್, ಕನ್‌ಫ್ಯೂಷಿಯಸ್, ಟಾಲ್‌ಸ್ಟಾಯ್, ಮ್ಯಾಕಿಂಗಾರ್ತಿ ಮೊದಲಾದ ಪ್ರಮುಖರ ಸಾಹಿತ್ಯ ಹಾಗೂ ವಿಮರ್ಶಾತ್ಮಕ ಬರಹಗಳ ಅಧ್ಯಯನ ಅವರಲ್ಲಿ ತಪಸ್ಸಿನಂತೆ ನಡೆದಿತ್ತು.

ಪಿ.ಹೆಚ್‌ಡಿ ಪದವಿ :

ವಿದ್ವಾಂಸರಾದ ಪ್ರೊ. ಸ.ಸ. ಮಾಳವಾಡ ಅವರ ಮಾರ್ಗದರ್ಶನದಲ್ಲಿ **'ಶರಣರ ಅನುಭಾವ ಸಾಹಿತ್ಯ'** ಕುರಿತಂತೆ ಮಹಾಪ್ರಬಂಧವನ್ನು ರಚಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ೧೯೬೨ ರಲ್ಲಿ ಡಾಕ್ಟರೇಟ್ ಪದವಿಯನ್ನು ಮಾನ್ಯ ಮಾಡಿತು.

ಕುಟುಂಬ :

ವಿದ್ವಾನ್ ಎನ್. ಕರಿಬಸವಯ್ಯ ಮತ್ತು ಶ್ರೀಮತಿ ಪಾರ್ವತಮ್ಮ ದಂಪತಿಗಳ ಸುಪುತ್ರಿ ಎನ್.ಕೆ. ಗೌರಮ್ಮನವರನ್ನು ಬಾಳಸಂಗಾತಿಯನ್ನಾಗಿ ಕೈಹಿಡಿಯುವ ಮೂಲಕ ೧೯೫೫ ರಲ್ಲಿ ಗೃಹಸ್ಥಾಶ್ರಮ ಸ್ವೀಕರಿಸಿದರು. ಸುಂಸ್ಕೃತ ಕುಟುಂಬದಿಂದ ಬಂದುದರಿಂದ ಸರಳತೆ, ಸಜ್ಜನಿಕೆ, ವಿನಯವಂತಿಕೆ, ಅತಿಥಿ ಸತ್ಕಾರದಿಂದ, ಬಂಧುಗಳ ಮನಸ್ಸನ್ನು ಸೂರೆಗೊಂಡಿದ್ದರು. ಪತಿಗೆ ತಕ್ಕ ಸತಿಯಾಗಿ ಹಾಲು ಜೇನಿನಂತ ಸಂಸಾರ. ಡಾ. ತಿಪ್ಪೇರುದ್ರಸ್ವಾಮಿಯವರ ಸಾಧನೆಗೆ, ಯಶಸ್ಸಿಗೆ ಸ್ಫೂರ್ತಿಯಾಗಿದ್ದರು.ಇವರ ದಾಂಪತ್ಯದ ಪ್ರೀತಿಯ ಕುರುಹಾಗಿ ಕೀರ್ತಿಗೆ ಇಬ್ಬರು ಗಂಡು ಮಕ್ಕಳು, ಆರುತಿಗೆ ಇಬ್ಬರು ಹೆಣ್ಣು ಮಕ್ಕಳು.

ಸಾಹಿತ್ಯ ಕೃಷಿ :

ಈಗಾಗಲೇ ಪ್ರಸ್ತಾಪಿಸಿದಂತೆ ಡಾ. ತಿಪ್ಪೇರುದ್ರ ಸ್ವಾಮಿಯವರು ವಿವಿಧ ಪ್ರಕಾರಗಳಿಗೆ ಸೇರಿದಂತೆ ನೂರಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ನೀಡಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ಕೃತಿಗಳನ್ನು ರಚಿಸುವ ಮುನ್ನ ಅದಕ್ಕೆ ಪೂರಕವಾದ ಅಂಶಗಳನ್ನು ವಿಫುಲವಾದ ಅಧ್ಯಯನದ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಬರೆಯುತ್ತಿದ್ದರು. ಅವರು ಬರೆದ ಎಲ್ಲ ಕೃತಿಗಳೂ ಮಹತ್ವವಾದವುಗಳೇ. ಉದಾಹರಣೆಗಾಗಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು. ಪರಿಪೂರ್ಣದೆಡೆಗೆ (ಅಲ್ಲಮಪ್ರಭು), ಕದಳಿಯ ಕರ್ಪೂರ (ಅಕ್ಕಮಹಾದೇವಿ), ಜ್ಯೋತಿ ಬೆಳಗುತಿದೆ (ನಿಜಗುಣ ಶಿವಯೋಗಿ), ವಚನ ವಿರೂಪಾಕ್ಷ (ಹರಿಹರ–ರಾಘವಾಂಕ), ಕರ್ತಾರನ ಕಮ್ಮಟ (ಬಸವಣ್ಣ), ನೆರಳಾಚೆಯ ಬೆಳಗು (ಸಿದ್ಧರಾಮ), ಸತ್ಯಾಶ್ರಯ ಸಾಮ್ರಾಜ್ಯ (ಇಮ್ಮಡಿ ಪುಲಕೇಶಿ) ಮೊದಲಾದ ಕಾದಂಬರಿಗಳನ್ನು, ವಿಧಿವಂಚಿತ, ಮೋಳಿಗೆಯ ಮಾರಯ್ಯ, ನಿಜಗುಣ ಶಿವಯೋಗಿ, ನಾಟಕಗಳನ್ನು, ತಪೋರಂಗ, ತಿಪ್ಪೇರುದ್ರ ವಚನಗಳು, ಕಾವ್ಯವನ್ನು, ಶಿಸ್ತುಗಾರ ಶಿವಪ್ಪನಾಯಕ, ಕರ್ನಾಟಕ ಶರಣ ಕಥಾಮೃತ, ಅವಿರಳ ಜ್ಞಾನ ಚನ್ನಬಸವಣ್ಣ ಮೊದಲಾದ ಜೀವನ ಚರಿತ್ರೆಗಳನ್ನು, ಶರಣರ ಅನುಭಾವ ಸಾಹಿತ್ಯ, ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ, ವಚನಗಳಲ್ಲಿ ವೀರಶೈವ ಧರ್ಮ, ಬಸವೇಶ್ವರ, ವಚನದೀಪಿಕೆ ಮೊದಲಾದ ಉದ್ಗ್ರಂಥಗಳನ್ನು, ಭಾವಗೀತೆ, ಕನ್ನಡದಲ್ಲಿ ಅನುಭಾವ ಸಾಹಿತ್ಯ, ಕುವೆಂಪುರವರ ನಾಟಕಗಳು, ಅನುಭವ ಮಂಟಪ, ವಚನ ಚಳವಳಿ, ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ವೀರಶೈವ ಸಂಸ್ಕೃತಿ, ಮೊದಲಾದ ವಿಮರ್ಶಾ ಗ್ರಂಥಗಳನ್ನು ನೀಡಿದ್ದಾರೆ. ಇವರ ಅನೇಕ ಕೃತಿಗಳು ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕಗಳಾಗಿವೆ. ಬಹುತೇಕ ಕೃತಿಗಳು ಮರು ಮುದ್ರಣವಾಗಿರುವುದು ಅವರ ವಿದ್ವತ್ತಿಗೆ ಸಂದ ಮನ್ನಣೆಯಾಗಿದೆ.

ದಕ್ಷ ಆಡಳಿತಗಾರರಾಗಿ :

ಡಾ. ತಿಪ್ಪೇರುದ್ರಸ್ವಾಮಿ ಅವರು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಆಯಾ ಹುದ್ದೆಗಳಿಗೆ ಘನತೆ, ಮೌಲ್ಯಗಳನ್ನು

ತಂದುಕೊಟ್ಟರು. ದಕ್ಷತೆ, ಪ್ರಾಮಾಣಿಕತೆ, ಬದ್ಧತೆಗಳಿಂದ ಆಯಾ ಹುದ್ದೆಗಳ ವ್ಯಾಪ್ತಿಯಲ್ಲಿ ಬರುವ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದುಕೊಟ್ಟ ಕೀರ್ತಿಗೆ ಭಾಜನರಾದರು. ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಬಿ.ಆರ್. ಪ್ರಾಜೆಕ್ಟ್‌ನ ಸ್ನಾತಕೋತ್ತರ ಕೇಂದ್ರ, ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಗಾಂಧೀ ಭವನದ ನಿರ್ದೇಶಕರಾಗಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸ್ಥಾಪಕ ಅಧ್ಯಕ್ಷರಾಗಿ ಅನುಪಮ ಸೇವೆ ಸಲ್ಲಿಸಿದ ಹಿರಿಮೆ.

ಪ್ರಶಸ್ತಿಗಳು – ಗೌರವ :

ಡಾ. ತಿಪ್ಪೇರುದ್ರಸ್ವಾಮಿಯವರು ಎಂದೂ ಕೀರ್ತಿ, ಹೆಸರಿಗಾಗಿ ಹಂಬಲಿಸಿದವರಲ್ಲ. ನಿರಂತರವಾಗಿ ಸಾಹಿತ್ಯ ಕೃಷಿ ಕಾರ್ಯಗಳಲ್ಲಿ ತೊಡಗಿಸುವಲ್ಲಿ ಸಂತೋಷ, ನೆಮ್ಮದಿಯನ್ನು ಕಾಣುತ್ತಿದ್ದರು. ಅವರ ಸಾಧನೆಯಿಂದ ಪ್ರಭಾವಿತಳಾದ ಕೀರ್ತಿ ದೇವತೆ ಬೇಡವೆಂದರೂ ಬಿಡದೆ ಬೆನ್ನತ್ತಿ ಬಂದಳು. ಅವರ 'ಪರಿಪೂರ್ಣದೆಡೆಗೆ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ನೆರಳಾಚೆಯ ಬೆಳಗು' ಕಾದಂಬರಿಗೆ ಹಾಗೂ ಅವಿರಳ ಜ್ಞಾನಿ ಚನ್ನಬಸವಣ್ಣ ಕೃತಿಗೆ ಇಳಕಲ್ ಮಠದ ಶ್ರೀ ವಿಜಯ ಮಹಾಂತೇಶ್ವರ ಸಾಹಿತ್ಯ ಪ್ರಶಸ್ತಿ, 'ತಿಪ್ಪೇರುದ್ರ ವಚನಗಳು' ಕೃತಿಗೆ ಹುಬ್ಬಳ್ಳಿಯ ಮೂಜಗಂ ಗ್ರಂಥ ಪುರಸ್ಕಾರ, 'ಬಸವೇಶ್ವರ ವಚನ ದೀಪಿಕೆ' ಕೃತಿಗೆ ಸಂ.ಶಿ. ಭೂಸನೂರ ಮಠ ಪ್ರತಿಷ್ಠಾನದ ೧೯೯೫ ರ ಕನ್ನಡದ ಮಹತ್ವದ ಗ್ರಂಥ ಪ್ರಶಸ್ತಿಗಳು ದೊರೆತಿವೆ.

'ಶರಣ ಸಾಹಿತ್ಯ ಸಿದ್ಧಾಂತ ರತ್ನ', ಒಟ್ಟು ಸಾಹಿತ್ಯ ಸಾಧನೆಗೆ ಕರ್ನಾಟಕ ರಾಜ್ಯ ಅಕಾಡೆಮಿ ಗೌರವ, ಇಳಕಲ್‌ನಲ್ಲಿ ರೂಪಾಯಿ ನಾಣ್ಯಗಳಿಂದ ತುಲಾಭಾರ, ಮೈಸೂರು ಜಿಲ್ಲಾ ೪ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು, ಹೊನ್ನಾಳಿ ತಾಲ್ಲೂಕು ಮೊದಲ ಸಾಹಿತ್ಯ ಮತ್ತು ಜಾನಪದ ಸಮ್ಮೇಳನಾಧ್ಯಕ್ಷರು, ಮೈಸೂರು ಕವಿ ಸಮ್ಮೇಳನದಲ್ಲಿ ಸನ್ಮಾನ, ಮೈಸೂರಿನಲ್ಲಿ ೭ನೇ ಕನ್ನಡ ಸಮ್ಮೇಳನದಲ್ಲಿ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಸನ್ಮಾನ. ಅವರ ಗೌರವಾರ್ಥವಾಗಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ 'ತಿಪ್ಪೇರುದ್ರಸ್ವಾಮಿ ಸಭಾಂಗಣ' ಲೋಕಾರ್ಪಣೆ ಹಾಗೂ ಅವರ ಭಾವಚಿತ್ರ ಅನಾವರಣ, ಹೊನ್ನಾಳಿ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಸ್ಮಾರಕ ಗ್ರಂಥ ಭವನ ಲೋಕಾರ್ಪಣೆ ಹಾಗೂ ಅವರ ಕಂಚಿನ ಪುತ್ಥಳಿ ಅನಾವರಣವೂ ಸೇರಿದಂತೆ ಪ್ರಶಸ್ತಿ, ಗೌರವಗಳು ದೊರಕಿವೆ. ಈ ಎಲ್ಲಾ ಪ್ರಶಸ್ತಿ ಗೌರವಗಳನ್ನು ಅತ್ಯಂತ ವಿನಮ್ರತೆಯಿಂದ ಸ್ವೀಕರಿಸಿದ ಹೃದಯವಂತಿಕೆ. ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅನುಪಮ ಸೇವೆಗಾಗಿ, ಶ್ರೀ ಸಿದ್ಧಗಂಗಾ ಮಠದಿಂದ ೨೦೧೪ ರಲ್ಲಿ 'ಸಿದ್ಧಗಂಗಾಶ್ರೀ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವವನ್ನು ಸಲ್ಲಿಸಿದುದುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಅರವತ್ತಾರು ವರ್ಷಗಳ ಬೇವು ಬೆಲ್ಲವನ್ನು ಸಮಚಿತ್ತದಿಂದ ಸವಿದು, ಅರ್ಥಪೂರ್ಣವಾಗಿ ಜೀವನ ನಡೆಸಿ, ಶ್ರೇಷ್ಠ ಅಧ್ಯಾಪಕರಾಗಿ, ವಾಗ್ಮಿಗಳಾಗಿ, ಆಡಳಿತಗಾರರಾಗಿ, ಸಾಹಿತಿಗಳಾಗಿ ತಮ್ಮ ಬದುಕನ್ನೇ ಮೀಸಲಾಗಿಟ್ಟು, ಎಲ್ಲರೊಂದೊಳಗಾಗಿ ಆದರ್ಶ ಜೀವನ ನಡೆಸಿ ಅಕ್ಟೋಬರ್ ೨೮ ರಲ್ಲಿ ಲಿಂಗದೊಳಗೊಂದಾದರು. ಈ ಸಂದರ್ಭದಲ್ಲಿ ದಾರ್ಶನಿಕ ಸಾಕ್ರೆಟಿಸ್‌ನ ಮಾತುಗಳು ನೆನಪಿಗೆ ಬರುತ್ತವೆ. ಒಮ್ಮೆ ಸಾಕ್ರೆಟಿಸ್ ಶಿಷ್ಯರನ್ನು ಕೇಳಿದ "ಜೀವನದ ಸಾರ್ಥಕ್ಯ ಯಾವುದರಲ್ಲಿದೆ ?" ಶಿಷ್ಯರೆಲ್ಲ ತಮಗೆ ತೋರಿದ ಉತ್ತರಗಳನ್ನು ನೀಡಿದರು. ಗುರುವಿಗೆ ಯಾವುದೂ ಸಮರ್ಪಕವೆನ್ನಿಸಲಿಲ್ಲ. ಆತ ಹೇಳಿದ "ಜೀವನದ ಸಾರ್ಥಕ ಬದುಕಿನಲ್ಲಿಲ್ಲ, ಬದುಕಿನಾಚೆ ಇದೆ, ಸತ್ತ ಮೇಲೆ ಎಷ್ಟು ಜನರ ಹೃದಯಗಳಲ್ಲಿ ನಿಮ್ಮ ನೆನಪು ಹಸಿರಾಗಿರುತ್ತದೆಯೋ, ಎಷ್ಟು ಜನ ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆಯೋ ಅದರಲ್ಲಿದೆ. ಆ ಸ್ಮರಣೆ ಬರುವುದು ನೀವು ಬದುಕಿದ ಮೌಲ್ಯಗಳಿಂದ, ಬದುಕಿನಲ್ಲಿ ಘನತೆಯನ್ನು ನೀಡುವುದರೊಂದಿಗೆ ಸಾವಿನಲ್ಲಿಯೂ ಘನತೆ ತರುತ್ತದೆ. ಹಾಗೆ ಬದುಕಿ ಮರೆಯಾದವರು ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಅವರು. ಅವರಿಗೆ ನನ್ನ ಗೌರವಪೂರ್ವಕ ನಮನ.

ಶ್ರೀವಾಣಿ

ಮನುಷ್ಯ ಶ್ರಮಜೀವಿಯಾಗಬೇಕು. ಕಾಯಕ ಮಾಡುವಂತವನಾಗಬೇಕು. ವೃಥಾ ಕಾಲ ಹಾನಿ ಮಾಡಬಾರದು. ಫಲ ಬೇಕಾದರೆ ಕಾಯಕ ಮಾಡಿ ಫಲವನ್ನು ಸ್ವೀಕಾರ ಮಾಡಬೇಕು. ಮನುಷ್ಯ ಕಾಯಕ ಜೀವಿಯಾಗಿ ತತ್ತ್ವ ನಿಷ್ಠನಾಗಿ ತನ್ನ ಕರ್ತವ್ಯ ಚೆನ್ನಾಗಿ ಮಾಡಬೇಕು. ಆಗ ತಾನಾಗಿಯೇ ಫಲ ದೊರೆಯುತ್ತದೆ. ಮನುಷ್ಯ ಜೀವನದಲ್ಲಿ ಕಾಯಕ ಮಾಡಿಯೇ ಬದುಕಬೇಕು. ವಂಚನೆ, ದ್ರೋಹ ಮಾಡಬಾರದು. ಸನ್ಮಾರ್ಗದಲ್ಲಿ ನಡೆದುಕೊಂಡವರ ಭವಿಷ್ಯ ಬಂಗಾರವಾಗುತ್ತದೆ.



ಶ್ರೀ ಸಿ. ಕುಮಾರಸ್ವಾಮಿ

ಸಿದ್ಧಗಂಗಾ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ, ಸಿದ್ಧಗಂಗಾ ಮಾಸಪತ್ರಿಕೆಯ ನಿರ್ವಹಣಾ ಸಮಿತಿಯ ಸದಸ್ಯರಾಗಿದ್ದ ಶ್ರೀ ಸಿ. ಕುಮಾರಸ್ವಾಮಿಯವರು ರಸ್ತೆ ಅಪಘಾತದಲ್ಲಿ ಅಕ್ಟೋಬರ್ ೧ ರಂದು ನಿಧನರಾದರೆಂದು ತಿಳಿಸಲು 'ಸಿದ್ಧಗಂಗಾ' ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸದಾ ಚಟುವಟಿಕೆಯಿಂದ ಇದ್ದ ಶ್ರೀ ಕುಮಾರಸ್ವಾಮಿಯವರು ಉತ್ತಮ ಶಿಕ್ಷಕರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಸಿದ್ಧಗಂಗಾ ಮಾಸಪತ್ರಿಕೆಯ ಪ್ರಗತಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದರು. ಪ್ರತಿ ತಿಂಗಳು ಮಾಸಪತ್ರಿಕೆಗೆ ಛಾಯಾಚಿತ್ರಗಳನ್ನು ಸಂಗ್ರಹಿಸಿ ಕಳುಹಿಸಿ ಕೊಡುತ್ತಿದ್ದರು. ದಾನಿಗಳಿಂದ ಪತ್ರಿಕಾ ವಿಭಾಗಕ್ಕೆ ಕಂಪ್ಯೂಟರ್‌ನ್ನು ಪಡೆದು ಚಂದಾದಾರರ ವಿಳಾಸಗಳನ್ನು ಗಣಕೀಕರಣ ಮಾಡಿದ್ದರು. ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ತುಮಕೂರು ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಜಿಲ್ಲಾಧ್ಯಕ್ಷರಾಗಿ ಅನುಪಮಾ ಸೇವೆ ಸಲ್ಲಿಸುತ್ತಿದ್ದರು. "ಜವರಾಯ ಬಂದರೆ ಬರಿಗೈಲಿ ಬರಲಿಲ್ಲ, ಕುಡಗೋಲ ಹೆಗಲೇರಿಕೊಂಡು ಒಳ್ಳೊಳ್ಳೆ ಮರನ ಕಡಿಬಂದ' ಎಂಬ ಜನಪದ ತ್ರಿಪದಿ ಶ್ರೀ ಕುಮಾರಸ್ವಾಮಿಯಂತವರ ಸಾವನ್ನು ಕಂಡೇ ರಚಿಸಿರಬೇಕೆನಿಸುತ್ತದೆ. ಸರಳತೆ, ಸಜ್ಜನಿಕೆಯನ್ನು ಮೈಗೂಡಿಸಿಕೊಂಡಿದ್ದ ಶ್ರೀಯುತರು ವಿಧಿವಶರಾದುದು ಸಿದ್ಧಗಂಗಾ ವಿದ್ಯಾ ಸಂಸ್ಥೆ ಹಾಗೂ ಸಿದ್ಧಗಂಗಾ ಮಾಸಪತ್ರಿಕೆಗೆ ತುಂಬಲಾರದ ನಷ್ಟ. ಶ್ರೀ ಸಿದ್ಧಗಂಗಾ ಗುರು ಪರಂಪರೆ ಅವರ ಆತ್ಮಕ್ಕೆ ಶಾಂತಿಯನ್ನು, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಸಿದ್ಧಗಂಗಾ ಪ್ರಾರ್ಥಿಸುತ್ತದೆ.

ಶ್ರೀ ಎಂ. ಚಂದ್ರಪ್ಪ

ತುಮಕೂರಿನ ಶಿವಾನುಭವಿಗಳಾಗಿದ್ದ ಶ್ರೀ ಎಂ. ಚಂದ್ರಪ್ಪನವರು ಅಕ್ಟೋಬರ್ ೨ ರಂದು ನಿಧನರಾದರೆಂದು ತಿಳಿಸಲು 'ಸಿದ್ಧಗಂಗಾ' ವಿಷಾದಿಸುತ್ತದೆ.

ಶ್ರೀಯುತರು ಶ್ರೀಮಠದಲ್ಲಿ ಪ್ರತಿ ಹುಣ್ಣಿಮೆಯೆಂದು ಶಿವಾನುಭವ ಪ್ರವಚನಗಳನ್ನು ನಡೆಸಿ ಕೊಡುತ್ತಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಬಯಸುತ್ತೇವೆ. ಶರಣ ಸಾಹಿತ್ಯ ಕ್ಷೇತ್ರದಲ್ಲಿ ಅಮೂಲ್ಯ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಂ. ಚಂದ್ರಪ್ಪನವರು ವಚನ ಪರಿಷ್ಕರಣ ಕಾರ್ಯದಲ್ಲಿ ದೊಡ್ಡ ಹೆಸರು ಮಾಡಿದ್ದರು. ಸಿದ್ಧಗಂಗಾ ಮಾಸಪತ್ರಿಕೆಗೆ ಕೆಲವು ಅಮೂಲ್ಯ ಲೇಖನಗಳನ್ನು ನೀಡಿದ್ದರು.

ಶ್ರೀ ಎಂ. ಚಂದ್ರಪ್ಪನವರ ಆತ್ಮಕ್ಕೆ ಸಿದ್ಧಗಂಗಾ ಗುರು ಪರಂಪರೆ ಚಿರಶಾಂತಿಯನ್ನು ಹಾಗೂ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಸಿದ್ಧಗಂಗಾ ಪ್ರಾರ್ಥಿಸುತ್ತದೆ.

ಶ್ರೀವಾಣಿ

ಮಾತಿಗೆ ಮನೆ ಕಟ್ಟಿ ಬೆಳಗಿಸುವ, ಮನೆ ಸುಟ್ಟು ಬೂದಿ ಮಾಡುವ ಎರಡೂ ಶಕ್ತಿಗಳಿವೆ, ಇದನ್ನರಿತ ಮಾನವ ಮಾತನ್ನು ಮಾವೀಯತೆಯಿಂದ ಬಾಳಲು ಸೃಷ್ಟ್ಯಾತ್ಮಕ ಶಕ್ತಿಯನ್ನಾಗಿ ಉಪಯೋಗಿಸಬೇಕು. ಮಾತನ್ನು ಮಂತ್ರವಾಗಿ ಉಪಯೋಗಿಸಬೇಕು. ಸುಲಭವಾದ ಮಾತಿನಿಂದ ಮಹಾತತ್ತ್ವ ಅಡಕವಾಗಿರಬೇಕು. ಮಾತು ಮಿತವಾಗಿರಬೇಕು.

ಚೆನ್ನಬಸವಣ್ಣ

– ಕ.ನ. ಪ್ರಮೀಳಾ ಫಾಲನೇತ್ರ *

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಚೆನ್ನಬಸವಣ್ಣನ ಪಾತ್ರ ಪ್ರಮುಖವಾದುದು. ಈತ ವಯಸ್ಸಿನಲ್ಲಿ ಕಿರಿಯನಾದರೂ ಆಗಾಧ ಜ್ಞಾನದಿಂದ ಶರಣರಲ್ಲಿಯೇ ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಂಡವನು. ಪ್ರಭುದೇವ, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದ ಶರಣರು ಈತನನ್ನು ಸ್ತುತಿಸಿದ್ದಾರಷ್ಟೇ ಅಲ್ಲ, ಪ್ರತಿಯೊಬ್ಬ ಶರಣರನ್ನು ಕಠಿಣ ಪರೀಕ್ಷೆಗೆ ಗುರಿಪಡಿಸುವ ಪ್ರಭುದೇವನೇ ಈತನ ನಿಲುವನ್ನು ಕಂಡು ನಮೋ, ನಮೋ ಎಂದಿದ್ದಾನೆ. ಈತನನ್ನು ನಾಯಕನನ್ನಾಗಿ ಮಾಡಿಕೊಂಡು 'ಚೆನ್ನಬಸವ ಪುರಾಣ' ಸ್ವತಂತ್ರ ಕೃತಿ ರಚಿಸಿದವರು ವಿರೂಪಾಕ್ಷ ಪಂಡಿತ.

ಚನ್ನಬಸವಣ್ಣನ ಜೀವನ ಚರಿತ್ರೆಗೆ ಸಂಬಂಧಿಸಿದ ಘಟನೆಗಳನ್ನು ನಾವು ವೀರಶೈವ ಪುರಾಣ, ಕಾವ್ಯಗಳಲ್ಲಿ ಹಾಗೂ ಶರಣರ ವಚನಗಳ ಆಧಾರಗಳಿಂದಲೂ ಅವನ ಜೀವನ ಚರಿತ್ರೆಯನ್ನು ಗಮನಿಸಬಹುದಾಗಿದೆ.

ಬಸವಣ್ಣ ನಾಗಲಾಂಬಿಕೆಯ ಸೋದರ. ಆಕೆಯ ಮಗನೇ ಚೆನ್ನಬಸವಣ್ಣ, ಅವನ ತಂದೆ ಶಿವಸ್ವಾಮಿ ಎಂದು ಅನೇಕ ಜನ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ವಿದ್ಯಾಭ್ಯಾಸ–ಗುರುಕರುಣ

ಚೆನ್ನಬಸವಣ್ಣ ಜನಿಸಿದ ಸ್ಥಳ ಭಕ್ತಿಜ್ಞಾನ ಸಂಗಮವಾದ ಇತಿಹಾಸ ಪ್ರಸಿದ್ಧ ಕಪ್ಪಡಿ ಕ್ಷೇತ್ರ ಅದು ಶಿವಜ್ಞಾನದ ಕ್ಷೇತ್ರವಾಗಿತ್ತು. ಅಲ್ಲಿಯ ಗುರುಕುಲದ ಕುಲಪತಿ ಜಾತವೇದ ಶಿವಯೋಗಿಗಳು ಬಸವಣ್ಣನ ಗುರುಗಳು. ಬಾಲಕ ಚೆನ್ನಬಸವಣ್ಣ ಆ ಗುರುಕುಲದ ವಿದ್ಯಾರ್ಥಿ. ಆದರೆ ಅವನು ಹೆಚ್ಚಾಗಿ ಕಲಿತದ್ದು ತನ್ನ ಸೋದರ ಮಾವನಾದ ಬಸವಣ್ಣನಿಂದ. ಬಸವಣ್ಣನೇ ಚೆನ್ನಬಸವಣ್ಣನ ಗುರು. ಬಸವಣ್ಣನು ತನ್ನ ಸೋದರ ಅಳಿಯನಾದ ಚೆನ್ನಬಸವಣ್ಣನಿಗೆ ಸಕಲ ಶಾಸ್ತ್ರಗಳ ರಸಪಾಕವನ್ನೇ ಉಣಬಡಿಸಿದ. ಓದಲೇಬೇಕಾದ ಆಧ್ಯಾತ್ಮಿಕ ಸಾಹಿತ್ಯವನ್ನು ಅಧ್ಯಯನ ಮಾಡಲು ಉಪದೇಶಿಸಿದ. ಬಸವಣ್ಣನ ಮಾರ್ಗದರ್ಶನದಿಂದ ಚೆನ್ನಬಸವಣ್ಣನ ಕೆಲಸ ಹಗುರವಾಯಿತು. ಆತನು ಕೆಲವೇ ವರ್ಷಗಳಲ್ಲಿ ಆಗಾಧವಾದ ಜ್ಞಾನವನ್ನು ಸಂಪಾದಿಸಿ ಜ್ಞಾನಭಂಡಾರವೇ ಆದ. ಗುರುಕುಲದಲ್ಲಿ ಜಾತವೇದ ಶಿವಯೋಗಿಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಯಲ್ಲಿ ಚೆನ್ನಬಸವಣ್ಣನೂ ಭಾಗವಹಿಸುತ್ತಿದ್ದ. ಶಿವಶರಣರ ಅನುಭವಗೋಷ್ಠಿಗಳು ಅವನನ್ನು ಅನುಭಾವದತ್ತ ಆಕರ್ಷಿಸಿದವು. ಚೆನ್ನಬಸವಣ್ಣನು ಅತ್ಯಂತ ಕಿರಿಯ ವಯಸ್ಸಿನಲ್ಲೇ ಜ್ಞಾನದ ಗಣಿಯಾದ. ಅರುಹಿಂಗೆ ಹಿರಿದು ಕಿರಿದುಂಟೆ ?

ಚೆನ್ನಬಸವಣ್ಣನಿಗೆ ಗುರುಕಾರುಣ್ಯವನ್ನು ಅನುಗ್ರಹಿಸಿದ ಬಸವಣ್ಣನ ಬಗ್ಗೆ ಚೆನ್ನಬಸವಣ್ಣನೇ ತನ್ನ ವಚನಗಳಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದಾನೆ.

.......ನಾನು ಶಿಶುವಾಗಿ ಒಡಲೊಳಗೆ ಇದ್ದಲ್ಲಿ ವಿಭೂತಿಪಟ್ಟವ ಕಟ್ಟಿ ಹಸ್ತಮಸ್ತಕ ಸಂಯೋಗ ಮಾಡಿ, ಎನ್ನನುಳಿಹಿದವರಾರಯ್ಯ ನೀವಲ್ಲದೆ ? ಎನಗೆನ್ನಗುರು ಬಸವಣ್ಣ ತೋರಿದ ಘನವ ನಿಮಗೆ ಬಿನ್ನೈಸುವೆನು ಕೇಳಾ ಪ್ರಭುವೆ.

ಚೆನ್ನಬಸವಣ್ಣನು ಗರ್ಭದಲ್ಲಿರುವಾಗಲೇ ಬಸವಣ್ಣನು ಅವನಿಗೆ ಲಿಂಗದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಬಸವಣ್ಣನ ಕಾರುಣ್ಯದ ಕಂದ ಚೆನ್ನಬಸವಣ್ಣ. ಅವರೀರ್ವರ ಗುರು–ಶಿಷ್ಯ ಸಂಬಂಧ ಜನ್ಮ ಜನ್ಮಾಂತರಗಳ ಅನುಬಂಧ.

ಮುಂದೆ ಚೆನ್ನಬಸವಣ್ಣ ಕಲ್ಯಾಣಕ್ಕೆ ಬಂದ ನಂತರ ಸೋದರ ಮಾವ ಬಸವಣ್ಣನ ಆಡಳಿತ ಕಾರ್ಯವನ್ನು ಅವಲೋಕಿಸುವ ಅವಕಾಶವು ಚೆನ್ನಬಸವಣ್ಣನಿಗೆ ದೊರೆಯಿತು. ಬಸವಣ್ಣನ ದರುಶನಕ್ಕೆ ಬರುತ್ತಿದ್ದ ಪ್ರಮುಖ ವ್ಯಕ್ತಿಗಳ ಪರಿಚಯವೂ ಚೆನ್ನಬಸವಣ್ಣನಿಗೆ ಆಗತೊಡಗಿತು. ಆಧ್ಯಾತ್ಮಿಕ ಜ್ಞಾನದ ಜೊತೆಗೆ ಲೌಕಿಕ ಅನುಭವವೂ ಅವನಿಗಾಗ ಲಾರಂಭಿಸಿತು. ಸಮಾಜದಲ್ಲಿ ಮನೆ ಮಾಡಿಕೊಂಡಿದ್ದ ಅಂಧ ಶ್ರದ್ಧೆಗಳು, ಆಡಂಬರದ ಆಚರಣೆ, ಸಂಪ್ರದಾಯಗಳನ್ನು ಹಾಗೂ ಸಮಾಜವು ಎದುರಿಸುತ್ತಲಿದ್ದ ಸಮಸ್ಯೆಗಳ ಅರಿತುಕೊಂಡ. ಬಸವಣ್ಣನ ಮಹಾಮನೆಗೆ ನಿತ್ಯವೂ ಆಗಮಿಸುತ್ತಿದ್ದ ಜಂಗಮರು ಶಿವಭಕ್ತರ ಊಟ–ವಸತಿ ವ್ಯವಸ್ಥೆಯ ಹೊಣೆ ಹೊತ್ತಿದ್ದ ತನ್ನ ತಂದೆ ಶಿವಸ್ವಾಮಿಯ ಒಡನಾಟದಿಂದ ಅವರ ಅತಿಥ್ಯ ಸಂಘಟನಾ ಕಲೆಯನ್ನು ಮೈಗೂಡಿಸಿಕೊಂಡ. ಹಾಗೆಯೇ ವಿದ್ಯಾಭ್ಯಾಸವನ್ನು ಮುಂದುವರಿಸಿ, ತನ್ನಲ್ಲಿದ್ದ ಸುಪ್ತ ಪ್ರತಿಭೆ ಅರಳಿ ಹೂವಾಗಲು ಕಾರಣನಾದ, ಜ್ಞಾನವಾರಧಿಯಾದ, ಅನುಭಾವದ ಗಣಿಯಾದ, ಹಾಗೆಯೇ ಷಡುಸ್ಥಲಬ್ರಹ್ಮಿಯಾಗಿ ವೀರಶೈವ ಉದ್ಧಾರಕ್ಕೆ ಸಿದ್ಧನಾದ ಚೆನ್ನಬಸವಣ್ಣ.

* ಸಹ ಶಿಕ್ಷಕಿ, ಶ್ರೀ ಸಿದ್ಧಗಂಗಾ ಪ್ರೌಢಶಾಲೆ, ಶಿವನಗರ, ಬೆಂಗಳೂರು–೫೬೦ ೦೧೦

ಸಾಧನೆ–ಸಿದ್ಧಿ

ಬಸವಣ್ಣನು ಕಲ್ಯಾಣಕ್ಕೆ ಬಂದ ಮೇಲೆ ಮಾಡಿದ ಮೊದಲ ಮಹಾತ್ಕಾರ್ಯವೆ ಅನುಭವ ಮಂಟಪದ ಸ್ಥಾಪನೆ. ಈ ಮಂಟಪ ಕ್ರಿ.ಶ. ೧೧೫೪ರಲ್ಲಿ ರೂಪಿತವಾಗಿದ್ದಿರಬಹುದು. ಇಲ್ಲಿ ಪರಸ್ಪರ ವಿಚಾರ ವಿನಿಮಯ, ಚರ್ಚೆ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳ ವಿಮರ್ಶೆಗಳಿಂದ ವಿನೂತನ ವಿಚಾರವಾದ ಮಂಡಿತವಾದವು. ಅಲ್ಲಿ ಜಾತಿ ಭೇದವಿರಲಿಲ್ಲ, ವೃತ್ತಿ ಭೇದವಿರಲಿಲ್ಲ, ಲಿಂಗ–ವರ್ಣ ಬೇಧವಿರಲಿಲ್ಲ. ವಯೋ ಭೇದವಿಲ್ಲದೆ ಶಿವಭಕ್ತರೆಲ್ಲರೂ ಒಂದೇ – ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಕುಲಜ – ಅವನೇ ಶರಣ, ಅರಿವೇ ಗುರು, ಅರಿದವ ಶರಣ, ದಯವೇ ಧರ್ಮದ ಮೂಲ. ಕಾಯಕವೇ ಕೈಲಾಸ ಇವೇ ಮೊದಲಾದ ನಿತ್ಯನೂತನ ತತ್ತ್ವಗಳು ಅನುಷ್ಠಾನಗೊಂಡವು.

ಈ ಮಹಾ ಪರಿವರ್ತನೆಯಲ್ಲಿ ಚೆನ್ನಬಸವಣ್ಣನ ಪಾತ್ರ ಅಮೋಘವಾದುದು. ಶರಣರ ಸಂಘಟನೆ, ವಿನೂತನ ಸಮಾಜ ರಚನೆ, ಪರಧರ್ಮೀಯರ ಖಂಡನೆ, ಸ್ವಧರ್ಮ ಪ್ರಚಾರ – ಶರಣರ ಸಂರಕ್ಷಣೆ – ಮಾನವ ಧರ್ಮ ಪೋಷಣೆಯಲ್ಲಿ ಚೆನ್ನಬಸವಣ್ಣನ ಅಸದೃಶವಾದ ಕರ್ತೃತ್ವ ಶಕ್ತಿಯನ್ನು ಅಸಾಧಾರಣವಾದ ಬುದ್ಧಿಮತ್ತೆಯನ್ನು ಅನುಪಮವಾದ ಲೋಕಾನುಭವವನ್ನು ಕಾಣಬಹುದಾಗಿದೆ. ಕಿರಿಯ ವಯಸ್ಸಿಗೆ ಅಪಾರ ಜ್ಞಾನವನ್ನು ಸಂಪಾದಿಸಿ ವೇದಾಗಮ ಶಾಸ್ತ್ರ ಪುರಾಣಗಳನ್ನು ಅರಿತು ಸಕಲರಿಗೂ ಅರುಹಿದ ಚೆನ್ನಬಸವಣ್ಣನು ಲೋಕ ಪೂಜಿತನಾಗಿದ್ದಾನೆ.

ಅನುಭವ ಮಂಟಪದ ಅಧ್ಯಕ್ಷರು ಪ್ರಭುದೇವರಾದರೂ ಅದರ ಜೀವನಾಡಿ ಚೆನ್ನಬಸವಣ್ಣನೇ. ಶಿವಾನುಭವ ಮಂಟಪದ ಚರ್ಚೆಯಲ್ಲಿ ಕೊನೆಯ ತೀರ್ಮಾನವನ್ನು ಪ್ರಭುದೇವರೂ ನೀಡುತ್ತಿದ್ದರೂ ಅದಕ್ಕೆ ಮುನ್ನ ಚೆನ್ನಬಸವನ ಅಭಿಮತವನ್ನು ಪಡೆಯುತ್ತಿದ್ದರು. ಪ್ರಭುದೇವರು ಇಲ್ಲದಿರುವಾಗ ಅನುಭವ ಮಂಟಪದ ಅಧ್ಯಕ್ಷತೆಯನ್ನು ಚೆನ್ನಬಸವಣ್ಣನೇ ವಹಿಸಿ ಗೋಷ್ಠಿಗಳನ್ನು ನಡೆಸುತ್ತಿದ್ದಂತೆ ತಿಳಿದುಬರುತ್ತದೆ.

ಶರಣರು ವೇದಾಂತಿಗಳಂತೆ ಜ್ಞಾನಬದ್ಧರಲ್ಲ, ಮುನಿಗಳಂತೆ ಕ್ರಿಯಾಬದ್ಧರಲ್ಲ, ಕ್ರಿಯೆಯೇ ಜ್ಞಾನ, ಆ ಜ್ಞಾನವೇ ಕ್ರಿಯೆ, ಈ ಬಗ್ಗೆ ಚೆನ್ನಬಸವಣ್ಣನ ವಚನವೆಂದು ಹೀಗಿದೆ –

ಕ್ರಿಯೆಯೆ ಜ್ಞಾನ, ಆ ಜ್ಞಾನವೆ ಕ್ರಿಯೆ,
ಜ್ಞಾನವೆಂದಡೆ ತಿಳಿವುದು;
ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು
ಪರಸ್ತ್ರೀಯ ಭೋಗಿಸಬಾರದೆಂಬುದೇ ಜ್ಞಾನ,
ಅದರಂತೆ ಆಚರಿಸುವುದೇ ಕ್ರಿಯೆ,
ಅಂತು ಆಚರಿಸದಿದ್ದಡೆ
ಅದು ಅಜ್ಞಾನ ನೋಡಾ, ಕೂಡಲ ಚೆನ್ನಸಂಗಮದೇವ.

ಕ್ರಿಯಾಹೀನ ಜ್ಞಾನ ಅಜ್ಞಾನ, ವೀರಶೈವರಿಗೆ ಪಂಚಾಚಾರ್ಯರಗಳು, ಪಂಚಪ್ರಾಣವಿದ್ದಂತೆ. ಶರಣ ಸರ್ವಾರ್ಪಣ ಭಾವನೆಯಿಂದ ಮಾಡುವ ಕ್ರಿಯೆಯೇ ಕಾಯಕ. ಕಾಯಕವೇ ಕೈಲಾಸ. ವಾರ ತಿಥಿ, ನಕ್ಷತ್ರಗಳಲ್ಲಿ ವಿಶೇಷವಾದ ನಂಬಿಕೆಯುಳ್ಳವರನ್ನು ನೋಡಿ –

ಸೋಮವಾರ, ಮಂಗಳವಾರ, ಶಿವರಾತ್ರಿಯೆಂದು ನೋಡಿ ಮಾಡುವ ಭಕ್ತರ, ಲಿಂಗಭಕ್ತಂಗೆ ಎಂದು ಸರಿಯೆಂಬೆನಯ್ಯಾ ? ದಿನ ಶ್ರೇಷ್ಠವೋ – ಲಿಂಗ ಶ್ರೇಷ್ಠವೋ ಎಂದು ಪ್ರಶ್ನಿಸುತ್ತಾನೆ ಚೆನ್ನಬಸವಣ್ಣ. ಶರಣರಿಗೆ ನಿತ್ಯವೂ ಶಿವರಾತ್ರಿಯೆ.

ಚೆನ್ನಬಸವಣ್ಣನು ಅಂದು ರೂಢಿಯಲ್ಲಿದ್ದ ಲಿಂಗಧಾರಣೆ ಬಗ್ಗೆ ಕಟುವಾಗಿ ಖಂಡಿಸಿದ್ದಾನೆ. ವೇಷಧಾರಿ ಜಂಗಮರನ್ನು, ವೇಷಧಾರಿ ಭಕ್ತರನ್ನು ಅವನು ಕಠೋರವಾಗಿ ಖಂಡಿಸುತ್ತಾನೆ. ಸಮಾಜದ ಲೋಪ ದೋಷಗಳನ್ನು ಎತ್ತಿ ತೋರಿಸಿ, ನ್ಯಾಯ ನಿಷ್ಠುರಿಯಾಗಿ ವರ್ತಿಸುತ್ತಾನೆ. ಸತ್ಯ, ಶುದ್ಧ–ಸಮೃದ್ಧ ಸಮಾಜವನ್ನು ರಚಿಸಲು ಪ್ರಯತ್ನಿಸಿದ ಚೆನ್ನಬಸವಣ್ಣ ಸ್ವಾತಂತ್ರ್ಯ ಸಮಾನತೆ, ಸಹೋದರತೆಗಳ ಮೇಲೆ ಸುಂದರ ಸಮಾಜ ನಿರ್ಮಿಸಲು ಸದಾ ಅವಿರತವಾಗಿ ಪ್ರಯತ್ನಿಸುತ್ತಾನೆ.

ಅಂತ್ಯ

ಹೀಗೆ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದೆನೆಂಬ ಸಮಾಧಾನ ಚೆನ್ನಬಸವಣ್ಣನಿಗೆ ಮೂಡುತ್ತದೆ. ಚನ್ನಬಸವಣ್ಣ ಗವಿಗಳನ್ನು ನೋಡಲು ಹೋದಾಗ ಕಾಣಿಸಿಕೊಂಡ ತಲೆನೋವು ಕ್ರಮೇಣ ಅಧಿಕವಾಗುತ್ತದೆ. ಅಲ್ಲದೆ ತನಗಿನ್ನು ಲೋಕದಾಟ ಸಾಕೆಂದು ಶರಣರಿಗೆಲ್ಲ ಹೇಳಿ – ಒಂದು ಮುಂಜಾನೆ ಉಪಹಾರದ ನಂತರ ತನ್ನ ಎಲೆ ಮನೆಗೆ ಹೋದ ಚೆನ್ನಬಸವಣ್ಣ ರಾತ್ರಿಯಾದರೂ ಹೊರಗೆ ಬರಲಿಲ್ಲ. ಇದನ್ನು ಗಮನಿಸಿದ ನಾಗಲಾಂಬಿಕೆ – ಆತನ ತಲೆಯನ್ನು ತನ್ನ ತೊಡೆಯ ಮೇಲಿರಿಸಿ ಸಮಾಧಾನ ಹೇಳಿದರೂ – ಚೆನ್ನಬಸವಣ್ಣ "ಹೌದು ಬಸವಣ್ಣ – ನಾನೂ ಬರುತ್ತೇನೆ, ನೀ ಕೊಟ್ಟ ಕಾರ್ಯ ನಿರ್ವಹಿಸಿದ್ದೇನೆ ಅಣ್ಣ ನನ್ನನ್ನು ಕರೆದುಕೋ ಬಸವಣ್ಣ" ಎಂದು ಬಡ ಬಡಿಸುತ್ತಾ ೧೧೬೮ ರಲ್ಲಿ ಉಳಿವೆಯಲ್ಲಿ ಲಿಂಗೈಕ್ಯನಾಗುತ್ತಾನೆ. ರುದ್ರಮುನಿಯಿಂದ ವಿಧಿವತ್ತಾಗಿ ಅಂತ್ಯ ಸಂಸ್ಕಾರವಾಗುತ್ತದೆ. ಒಂಬತ್ತು ದಿನಗಳ ನಂತರ ಆಸ್ಥಾನದಲ್ಲಿ ಗದ್ದುಗೆಯೊಂದನ್ನು ನಿರ್ಮಿಸಲಾಗುತ್ತದೆ.

(ಕೃಪೆ: ಬಸವೇಶ್ವರರ ಸಮಕಾಲೀನರು, ಪ್ರ. ಬಸವ ಸಮಿತಿ, ಬೆಂಗಳೂರು)

ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ, ಬಸವ ಕಲ್ಯಾಣ

ಅನುಭವ ಮಂಟಪ ನವ ನಿರ್ಮಾಣ ತಜ್ಞರ ಸಲಹಾ ಸಮಿತಿ

ಹನ್ನೆರಡನೆಯ ಶತಮಾನದ ಕಲ್ಯಾಣದಲ್ಲಿ (ಈಗಿನ ಬಸವ ಕಲ್ಯಾಣ) ನಡೆದ ಅಪೂರ್ವ ಸಮಾಜೋ-ಧಾರ್ಮಿಕ ಆಂದೋಲನದ ಸ್ಮರಣೆಯಾಗಿ ಬಸವ ಕಲ್ಯಾಣದಲ್ಲಿ ಅಳಿದು ಉಳಿದಿರುವ ಶರಣರ ಕೇಂದ್ರಗಳ ಜೀರ್ಣೋದ್ಧಾರ ಕಾರ್ಯ ನಡೆದಿದ್ದು, ಆ ಆಂದೋಲನದ ಕೇಂದ್ರ ಬಿಂದುವಾಗಿದ್ದ **'ಅನುಭವ ಮಂಟಪ'**ದ ಯಾವುದೇ ಸುಳಿವು ದೊರೆಯದ ಕಾರಣ ಅದರ ಪುನರ್ನಿರ್ಮಾಣದ ಕೆಲಸ ನಡೆದಿರಲಿಲ್ಲ.

'ಅನುಭವ ಮಂಟಪ'ದ ಮಹತ್ವವನ್ನು ಮನಗಂಡಿರುವ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ದಿನಾಂಕ ೨೦.೦೫.೨೦೧೬ ರಂದು, ಮಂಡಳಿಯ ಅಧ್ಯಕ್ಷರೂ ಆಗಿರುವ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹನ್ನೆರಡನೆಯ ಶತಮಾನದ 'ಅನುಭವ ಮಂಟಪ'ವನ್ನು ಸ್ಮರಣೆಗೆ ತರುವ ಆಧುನಿಕ 'ಅನುಭವ ಮಂಟಪ' ನಿರ್ಮಾಣವಾಗಬೇಕೆಂದು ನಿರ್ಧರಿಸಿತು.

ಆ ನಿರ್ಧಾರವನ್ನು ಅನುಷ್ಠಾನಗೊಳಿಸುವ ಮೊದಲ ಹೆಜ್ಜೆಯಾಗಿ ಮಾನ್ಯ ಮುಖ್ಯಮಂತ್ರಿಗಳ ಸೂಚನೆಯಂತೆ 'ಅನುಭವ ಮಂಟಪ' ನಿರ್ಮಾಣ ಸಂಬಂಧ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಡಾ. ಸಿ. ವೀರಣ್ಣ, ಡಾ. ಸಿದ್ಧರಾಮ ಶರಣರು, ಡಾ. ಸಿದ್ಧಲಿಂಗಯ್ಯ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಡಾ. ರಂಜಾನ್ ದರ್ಗಾ ಮತ್ತು ಶ್ರೀ ಅರವಿಂದ ಜತ್ತಿ ಅವರು ಸದಸ್ಯರಾಗುಳ್ಳ ಸಲಹಾ ಸಮಿತಿಯನ್ನು ರಚಿಸಿತು.

ಸಲಹಾ ಸಮಿತಿಯು ಬಸವ ಕಲ್ಯಾಣದಲ್ಲಿ ಸ್ಥಳ ಪರಿಶೀಲನೆ ಮಾಡಿ, ಆರು ಸಭೆಗಳನ್ನು ನಡೆಸಿ ಚರ್ಚಿಸಿದುದಲ್ಲದೆ, ಸ್ಥಳೀಯ ಜನಪ್ರತಿನಿಧಿಗಳು ಮತ್ತು ನಾಡಿನ ನಾನಾ ಭಾಗದ ವಿದ್ವಾಂಸರೊಡನೆ ವಿಚಾರ ವಿನಿಮಯ ನಡೆಸಿತು. ಹಾಗೆಯೇ ಅನುಭವ ಮಂಟಪದ ಅಸ್ತಿತ್ವದ ಬಗೆಗೆ ಯಾವುದೇ ಸ್ಪಷ್ಟ ಕುರುಹುಗಳು ದೊರೆಯದಿರುವುದನ್ನು ಗಮನಿಸಿ, ಇದುವರೆಗೆ ಪ್ರಕಟವಾಗಿರುವ ರೆ. ಉತ್ತಂಗಿ ಚನ್ನಪ್ಪನವರ 'ಅನುಭವ ಮಂಟಪದ ಐತಿಹಾಸಿಕತೆ', ಡಾ.ಎಸ್.ಎಂ. ಜಾಮದಾರ ಅವರ 'ಅನುಭವ ಮಂಟಪದ ನವನಿರ್ಮಾಣ' ಕುರಿತ ಟಿಪ್ಪಣಿ, ಸಮಗ್ರ ವಚನ ಸಾಹಿತ್ಯ ಸಂಪುಟಗಳು, ಶರಣರನ್ನು ಕುರಿತಂತೆ ಬಂದಿರುವ ಪುರಾಣಗಳು, ಇತಿಹಾಸ ತಜ್ಞ ಡಾ. ಡಿ.ಬಿ. ದೇಸಾಯಿ, ಡಾ.ಎಸ್.ಎಸ್. ಒಡೆಯರ್, ಡಾ. ಸಾಕ್ರೆ ಅವರ ಕೃತಿಗಳು, ಬೀದರ ಜಿಲ್ಲಾ ಗೆಜೆಟಿಯರ್ – ಮೊದಲಾದ ಗ್ರಂಥಗಳಲ್ಲಿ ದೊರೆಯುವ ಸುಳಿವುಗಳ ಆಧಾರದ ಮೇಲೆ ಯೋಜಿತ 'ಅನುಭವ ಮಂಟಪ'ದ ಸ್ವರೂಪವನ್ನು ಪರಿಕಲ್ಪಿಸಿದ್ದು, ಇತರ ಯಾವುದೇ ಅನುಕರಣೆಯಿಲ್ಲದೆ ಶರಣ ಪರಂಪರೆಯ ಪ್ರತೀಕವಾಗಲಿರುವ ಅದರ ನವ ನಿರ್ಮಾಣಕ್ಕೆ ಸಂಬಂಧಿಸಿದ ಸಲಹೆಗಳನ್ನು ನೀಡಿದೆ.

ಸಲಹಾ ಸಮಿತಿಯು ನೀಡಿರುವ ಸಲಹೆಗಳ ಪ್ರಕಾರ, ಯೋಜಿತ 'ಅನುಭವ ಮಂಟಪ' ನಿರ್ಮಾಣಕ್ಕೆ ಬಸವ ಕಲ್ಯಾಣದ ತ್ರಿಪುರಾಂತಕ ಕೆರೆಯ ದಂಡೆಯಲ್ಲಿ ೨೫ ಎಕರೆಗಳ ನಿವೇಶನವನ್ನು ಗೊತ್ತು ಮಾಡಲಾಗಿದೆ. ಈ ನಿವೇಶನಕ್ಕೆ 'ಮಹಾಮನೆ ಕ್ಷೇತ್ರ'ವೆಂದು ಕರೆಯಲು ಸಲಹೆ ಮಾಡಿದೆ.

'ಮಹಾಮನೆ' ಮಧ್ಯಭಾಗದಲ್ಲಿ ಎತ್ತರದ ದಿಣ್ಣೆಯ ಮೇಲೆ ಕಾಣಿಸಿಕೊಳ್ಳುವ 'ಅನುಭವ ಮಂಟಪ' ನಿರ್ಮಾಣಕ್ಕೆ ಹನ್ನೆರಡನೆಯ ಶತಮಾನದ ಶರಣರ ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರ ಸಿದ್ಧಾಂತಗಳು ಮತ್ತು ಕಾಯಕ, ದಾಸೋಹ, ಅನುಭಾವ ಜೀವನಸೂತ್ರಗಳನ್ನು ಅಳವಡಿಸಲಾಗಿದೆ. ವೃತ್ತಾಕಾರದ ಸುಮಾರು ೧೮೨ ಅಡಿಗಳ ಎತ್ತರವಿರುವ ಈ ಕಟ್ಟಡದಲ್ಲಿ ಆರು ಅಂತಸ್ತುಗಳಿರುತ್ತವೆ. ಈ ಅಂತಸ್ತುಗಳಲ್ಲಿ ಶರಣರ ವಿಚಾರಧಾರೆಗೆ ಸಂಬಂಧಿಸಿದ ಚಿಂತನ ಮಂಟಪಗಳು, ಅನುಷ್ಠಾನ ಗವಿಗಳು, ವಚನಗಳನ್ನು ಕೊರೆದ ಕಂಬಗಳು, ಭಿತ್ತಿ ಚಿತ್ರಗಳು, ಶರಣರ ಉಬ್ಬುಚಿತ್ರಗಳು ಮೊದಲಾದವಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೇಲಂತಸ್ತಿನಲ್ಲಿ ವಚನಗಳಲ್ಲಿ ಬರುವ ೭೭೦ ಅಮರಗಣಂಗಳ ಸಂಖ್ಯೆಯ ಸಂಕೇತವಾಗಿ ೭೭೦ ಆಸನಗಳ ಸಭಾಭವನವಿರುತ್ತದೆ. ಕೆಳ ಅಂತಸ್ತಿನಲ್ಲಿ ಒಟ್ಟಿಗೆ ೧೫೦೦ ಜನ ಊಟಮಾಡಲು ಅವಕಾಶವಿರುವ 'ದಾಸೋಹ ಭವನ'ವಿರುತ್ತದೆ.

ಜೊತೆಗೆ ಆಡಳಿತ ಕಛೇರಿ, ಸ್ವಾಗತ ಕಛೇರಿ, ಭದ್ರತಾ ಕೊಠಡಿ, ಗ್ರಂಥ ಮಾರಾಟ ಮಳಿಗೆ, ಗ್ರಂಥ ಭಂಡಾರ, ಸಂಶೋಧನ ಕೇಂದ್ರ, ಧ್ಯಾನ ಮಂದಿರ, ಯೋಗ ಕೇಂದ್ರ, ಅತಿಥಿ ಗೃಹ, ಉಗ್ರಾಣ ಮೊದಲಾದ ಸೌಲಭ್ಯಗಳ ಕಟ್ಟಡಗಳಿರುತ್ತವೆ. ಕಟ್ಟಡಗಳ ಹೊರತಾಗಿ ಉಳಿಯುವ ಪ್ರದೇಶವನ್ನೆಲ್ಲ ಉದ್ಯಾನವನವನ್ನಾಗಿ ಅಭಿವೃದ್ಧಿಗೊಳಿಸಲಾಗುತ್ತದೆ. ಉದ್ಯಾನವನದಲ್ಲಿ ಶರಣರ ಕಾಯಕ ಮೂರ್ತಿಗಳು, ನೀರಿನ ಚಿಲುಮೆಗಳು, ಹೂ-ಬಳ್ಳಿ, ಮರಗಿಡಗಳಿರುತ್ತವೆ, ಹೊರಗೆ ವಾಹನ ನಿಲ್ದಾಣವಿರುತ್ತದೆ. ಇಡೀ ಕ್ಷೇತ್ರಕ್ಕೆ ಧ್ವನಿ-ಬೆಳಕಿನ ವ್ಯವಸ್ಥೆ ಇರುತ್ತದೆ.

ಯೋಜಿತ 'ಅನುಭವ ಮಂಟಪ' ನಿರ್ಮಾಣದ ವಿನ್ಯಾಸವನ್ನು ಬೆಂಗಳೂರಿನ ನೇಚರ್ಸ್ ಅಂಡ್ ನರ್ಚರ್ ಎಂಟರ್‌ಪ್ರೈಸಸ್ ಸಂಸ್ಥೆಯವರು ರೂಪಿಸಿದ್ದಾರೆ. ಪೂರ್ಣ ಶಿಲೆಯ ಈ ಬೃಹತ್ ಕಟ್ಟಡದ ನಿರ್ಮಾಣ ವೆಚ್ಚದ ಅಂದಾಜು ಸುಮಾರು ೬೦೦ ಕೋಟಿ ರೂ. ನಿರ್ಮಾಣ ಕಾರ್ಯ ಮುಗಿಸಲು ೪-೫ ವರ್ಷ ಆಗಬಹುದು. ವಿನ್ಯಾಸಕಾರರು ಈ ಯೋಜನೆಯಲ್ಲಿ, ೧೦೦ ಅಡಿ ಸುತ್ತಳತೆಯ ಜಗತ್ತಿನಲ್ಲೇ ಬೃಹತ್ ಎನಿಸುವ ಲಿಂಗಾಕಾರದ ಗೋಪುರ, ಕಟ್ಟಡದ ಒಳಭಾಗದಲ್ಲಿ ನೈಸರ್ಗಿಕ ಗಾಳಿ, ಬೆಳಕಿನ ವ್ಯವಸ್ಥೆ, ಬೇಸಗೆ ಕಾಲದಲ್ಲೂ ನೆರವಾಗುವ ಅಂತರ್ಜಲ ಸಂಗ್ರಹ, ಆಧುನಿಕ ರೊಬೊಟ್‌ಗಳ ವಾಯು ಚಲನಾ ವ್ಯವಸ್ಥೆ, ದ್ವಾರಗಳಲ್ಲಿ 'ಶರಣು-ಶರಣಾರ್ಥಿ' ಧ್ವನಿ ಸ್ವಾಗತ, ಇತ್ಯಾದಿ ಅನೇಕ ಹೊಸ ತಂತ್ರ ವಿಧಾನಗಳನ್ನು ಅಳವಡಿಸಿದ್ದಾರೆ.

ಸಲಹಾ ಸಮಿತಿ ವರದಿಯನ್ನು ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ದಿನಾಂಕ ೧೧.೦೯.೨೦೧೭ ರಂದು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಬಸವ ಕಲ್ಯಾಣದ ಸಮಗ್ರ ಅಭಿವೃದ್ಧಿಗೆ ದಾರಿಯಾಗಲಿದ್ದು, ನಗರವು ಅಂತಾರಾಷ್ಟ್ರೀಯ ಪ್ರವಾಸಿ ಹಾಗೂ ಅಧ್ಯಯನ ಕೇಂದ್ರವಾಗಲಿದೆ. ಹಾಗೆಯೇ ಸ್ಥಳೀಯರಿಗೆ ಉದ್ಯೋಗಾವಕಾಶ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯ ಸಂಪನ್ಮೂಲ ಹೆಚ್ಚಲಿದೆ.

ಮುಂದೆ, ಅಂತಾರಾಷ್ಟ್ರೀಯ ವಚನ ವಿಶ್ವವಿದ್ಯಾಲಯವಾಗಿ ಅಭಿವೃದ್ಧಿಗೊಳ್ಳಬೇಕೆಂಬ ಆಶಯದಿಂದ ರೂಪಿಸಲಾಗಿರುವ ನೂತನ 'ಅನುಭವ ಮಂಟಪ'ಕ್ಕೆ ಯಾವುದೇ ಜಾತಿ-ಮತಗಳ ನಿರ್ಬಂಧವಿಲ್ಲದೆ ಎಲ್ಲರಿಗೂ ಮುಕ್ತ ಪ್ರವೇಶದ ಅವಕಾಶವಿರುತ್ತದೆ. ಈ ಅನುಭವ ಮಂಟಪದಲ್ಲಿ ಕೇವಲ ಧಾರ್ಮಿಕ ಜಿಜ್ಞಾಸೆಗಳು ಮಾತ್ರವಲ್ಲದೆ, ಸಮಕಾಲೀನ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ, ಸಾಂಸ್ಕೃತಿಕ–ಹೀಗೆ ಜನಜೀವನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಬಗೆಗೂ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ.

ಕರ್ನಾಟಕದ ಒಂದು ಹೆಮ್ಮೆಯ ಕೇಂದ್ರವಾಗಲಿರುವ ಬಸವ ಕಲ್ಯಾಣದ ಈ ಯೋಜನೆಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಅಂಗೀಕರಿಸಿ, ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸುವುದೆಂದು ಸಲಹಾ ಸಮಿತಿ ವಿಶ್ವಾಸ ಹೊಂದಿದೆ.

ವರದಿಗೆ ಸಂಬಂಧಿಸಿದಂತೆ ಆಸಕ್ತಿ ವಹಿಸಿ ಆಗಿಂದಾಗ ಸಮಿತಿಯೊಡನೆ ಸಮಾಲೋಚಿಸಿ ಅನೇಕ ಸಲಹೆಗಳನ್ನು ನೀಡಿದ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ರಾಜ್ಯದ ಪೌರಾಡಳಿತ ಸಚಿವ ಶ್ರೀ ಈಶ್ವರ ಖಂಡ್ರೆ ಅವರು, ಬೀದರ ಜಿಲ್ಲಾಧಿಕಾರಿ ಡಾ. ಮಹಾದೇವ ಅವರು ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಸದಸ್ಯರಾದ ಶ್ರೀ ಶಿವರಾಜ ನರಶೆಟ್ಟಿ ಅವರಿಗೂ ಕೃತಜ್ಞತೆಗಳು. ಸರ್ಕಾರ ಯಾವುದೇ ಅವಧಿ ನಿಗದಿಗೊಳಿಸದಿದ್ದರೂ ಮೂರು ತಿಂಗಳ ಅವಧಿಯಲ್ಲಿ ಈ ವರದಿ ಸಲ್ಲಿಸಿದ ಸಮಾಧಾನ ಸಮಿತಿಗಿದೆ. ಈ ವರದಿ ಸಿದ್ಧತೆಗೆ ಅಗತ್ಯವಾದ ಎಲ್ಲಾ ಬಗೆಯ ಸಹಕಾರವನ್ನು ನೀಡಿದ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯ ಆಯುಕ್ತರಾದ ಶ್ರೀ ಶರಣ ಬಸಪ್ಪ ಕೊಟೆಪ್ಪಗೊಳ ಮತ್ತು ಅವರ ಸಿಬ್ಬಂದಿಗೆ ಸಮಿತಿ ಕೃತಜ್ಞವಾಗಿದೆ.

ಡಾ. ಗೊ.ರು. ಚನ್ನಬಸಪ್ಪ
ಅಧ್ಯಕ್ಷ, ತಜ್ಞರ ಸಲಹಾ ಸಮಿತಿ

ಪ್ರಾಥಮಿಕ ಹಂತದಿಂದ ಶಿಕ್ಷಣದ ಸುಧಾರಣೆ ಮಹತ್ವ

– ಶ್ರೀ ಮ.ನಿ.ಪ್ರಸ್ವ. ಶಾಂತಮಲ್ಲಿಕಾರ್ಜುನ ಸ್ವಾಮಿಗಳು *

ಸರ್ವರಿಗೂ ಶಿಕ್ಷಣ ವಿಶ್ವಸಂಸ್ಥೆಯ ಕನಸು. ಜಗತ್ತಿನ ಎಲ್ಲರೂ ಶಿಕ್ಷಣ ಪಡೆಯಬೇಕೆಂಬ ಗುರಿ ಅದರದ್ದು. ಆದರೆ ಈ ಗುರಿ ಭಾರತದಲ್ಲಿ ಈಡೇರುವ ಸಾಧ್ಯತೆಗಳಿವೆಯೇ? ಇತ್ತೀಚೆಗೆ ಯುನೆಸ್ಕೋ ಬಿಡುಗಡೆ ಮಾಡಿದ ೨೦೦೮ರ 'ಸರ್ವರಿಗೂ ಶಿಕ್ಷಣ ಜಾಗೃತಿ' ಈ ಮೇಲ್ವಿಚಾರಣಾ ವರದಿ ನಮ್ಮ ದೇಶದಲ್ಲಿನ ಶಿಕ್ಷಣ ವೀಕ್ಷಕ ವಿವರಣೆಯಂತಿದೆ. ಮಕ್ಕಳನ್ನು ಶಾಲೆಗೆ ಸೇರಿಸುವುದಿರಲಿ, ಲಿಂಗ ಅಥವಾ ಪ್ರಾದೇಶಿಕ ತಾರತಮ್ಯವಿರಲಿ, ಪ್ರತಿಯೊಂದು ವಿಷಯದಲ್ಲೂ ಭಾರತ ಏಣಿಯ ತಳಭಾಗದಲ್ಲಿಯೇ ಉಳಿದುಬಿಟ್ಟಿದೆ.

ಸ್ವಾತಂತ್ರ್ಯಾನಂತರ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಎಷ್ಟೆಲ್ಲಾ ಸಾಧನೆ ಮಾಡಿದರೂ ನಾವು ಗುರಿಯ ಸಮೀಪ ಇಲ್ಲವೇ ಇಲ್ಲ ಎಂಬ ವಾಸ್ತವವನ್ನು ಅರಿಯಬೇಕಾಗಿದೆ. ೧೯೫೧ರಲ್ಲಿ ಶೇಕಡಾ ೧೮.೩%ರಷ್ಟಿದ್ದ ಸಾಕ್ಷರತೆ ಪ್ರಮಾಣ ೨೦೦೪-೦೫ನೇ ಸಾಲಿನಲ್ಲಿ ಶೇಕಡಾ ೬೭.೩%ಕ್ಕೆ ಹೆಚ್ಚಿದರೂ ಭಾರತ ಇಂದಿಗೂ ಜಗತ್ತಿನ ಒಟ್ಟು ೭೭.೪ ಕೋಟಿ ಅನಕ್ಷರಸ್ಥರಲ್ಲಿ ಶೇಕಡಾ ೩೫%ರಷ್ಟು ಜನ ನಮ್ಮಲ್ಲಿದ್ದಾರೆ. 'ಸರ್ವರಿಗೂ ಶಿಕ್ಷಣ' ವರದಿ ಭಾರತವನ್ನು ೧೨೭ ರಾಷ್ಟ್ರಗಳ ಪೈಕಿ ೧೦೫ನೇ ಸ್ಥಾನದಲ್ಲಿ ನಿಲ್ಲಿಸಿದೆ.

ಭಾರತ ೨೦೦೭ನೇ ಸಾಲಿನಲ್ಲಿ ೧೦೦ನೇ ಸ್ಥಾನದಲ್ಲಿತ್ತು. ಈ ವರ್ಷ ಮತ್ತೆ ೫ ಸ್ಥಾನಗಳ ಕುಸಿತ ಆಗಿದೆ ಎಂದರೆ ಶಿಕ್ಷಣ ರಂಗದಲ್ಲಿ ಭಾರತದಂತಹ ಹಲವು ರಾಷ್ಟ್ರಗಳು ಶಿಕ್ಷಣ ಸುಧಾರಣೆಗೆ ಕ್ರಮ ತೆಗೆದುಕೊಂಡಿಲ್ಲ ಎಂದು ಅರ್ಥವಾಗುತ್ತದೆ. ಅಪಾರ ಸಂಖ್ಯೆಯಲ್ಲಿರುವ ಅನಕ್ಷರಸ್ಥರ ಸಂಖ್ಯೆ ಹಾಗೂ ಶಿಕ್ಷಣದ ಗುಣಮಟ್ಟದಲ್ಲಿ ಗ್ರಾಮೀಣ, ನಗರ ಪ್ರದೇಶಗಳ ನಡುವಣ ಅಂತರವನ್ನು ತಗ್ಗಿಸುವ ಶಿಕ್ಷಣ ಪದ್ಧತಿಯನ್ನು ಅಳವಡಿಸದಿರುವುದೇ ಬಡತನ ನಿರ್ಮೂಲನೆಗೆ ಇರುವ ರಡು ದೊಡ್ಡ ತೊಡಕುಗಳು ಎಂದು ಯುನೆಸ್ಕೋ ವ ಮಾಡಿದೆ. ನಮ್ಮ ಶಾಲೆಗಳಲ್ಲಿ ಶಿಕ್ಷಣದ ಗುಣಮ ಎಲ್ಲಿಯತನಕ ಸುಧಾರಿಸುವುದಿಲ್ಲವೋ ಅಲ್ಲಿಯತನ ನಮ್ಮ ಉನ್ನತ ಶಿಕ್ಷಣವೂ ಗೊಂದಲದಲ್ಲಿಯೇ ಮುಂದುವರೆಯಲಿದೆ. ನಮ್ಮಲ್ಲಿರುವ ಶೇಕಡಾ ೧೦%ರಷ್ಟು ಮಂದಿಯೂ ನೌಕರಿ ಮಾಡುವ ಯೋಗ್ಯತೆ ಇಲ್ಲದವರು ಎಂಬುದು ಈಗಾಗಲೇ ತಿಳಿದ ವಿಷಯ. ಈಚೆಗೆ ನಡೆದ ಜಾಗತಿಕ ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್‌ನಲ್ಲಿ ೨೦೦ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಒಂದೇ ಒಂದು ವಿಶ್ವವಿದ್ಯಾಲಯವೂ ಸ್ಥಾನ ಪಡೆದಿಲ್ಲ. ಏಷ್ಯಾ ಖಂಡದ ಪೈಕಿ ಜಪಾನಿನ ೧೧, ಚೀನಾದ ೬ ಮತ್ತು ಹಾಂಕಾಂಗ್‌ನ ೪ ವಿಶ್ವವಿದ್ಯಾಲಯಗಳು ಸ್ಥಾನ ಪಡೆದಿವೆ.

ಉರುಹೊಡೆಯುವ ಶಿಕ್ಷಣ ವ್ಯವಸ್ಥೆಯ ಬದಲಿಗೆ ವಿವೇಚನೆಗೆ ಹಚ್ಚುವ ಮತ್ತು ಕೌಶಲ್ಯ ವೃದ್ಧಿಸುವ ವ್ಯವಸ್ಥೆ ರೂಪಿಸಬೇಕಲ್ಲದೇ ಆದ್ಯತೆಯ ಮೇರೆಗೆ ಪ್ರತಿ ಹಳ್ಳಿಯಲ್ಲಿಯೂ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸಬೇಕು. ದೇಶದ ಪ್ರತಿಯೊಂದು ಮಗುವೂ ಶಾಲೆಗೆ ಹೋಗುತ್ತದೆ ಎಂದು ಆತ್ಮವಿಶ್ವಾಸದಿಂದ ಬೀಗಲು ಶಿಕ್ಷಣ ಕ್ಷೇತ್ರಕ್ಕೆ ಅಗತ್ಯವಾದ ಹಣ ಒದಗಿಸುವ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ. ಭಾರತದಲ್ಲಿ ಬಡತನ ಮತ್ತು ಜೀವನಸತ್ವ ಕಳೆದುಕೊಂಡ ವಿದ್ಯಾಮಾನವೇ ಅಶಕ್ತರ ಅಸ್ತಿತ್ವಕ್ಕೆ ಬೆದರಿಕೆ ಒಡ್ಡಿದೆ. ಇದರತ್ತಲೇ ಹೆಚ್ಚಿನ ಗಮನ ಹರಿಸಿರುವುದರಿಂದ ಮಕ್ಕಳು ನಮ್ಮಲ್ಲಿ ಆದ್ಯತೆಯ ವಿಷಯಗಳಾಗಿಲ್ಲ. ಇಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಎರಡನೇ ಮುಖ್ಯ ವಿಷಯವೇ ಹೊರತು ಮೊದಲಿನದಲ್ಲ.

ಈ ದೌರ್ಬಲ್ಯವನ್ನೇ ರಾಜಕಾರಣಿಗಳು ಮತ್ತು ಅಧಿಕಾರಿಗಳು ಬಳಸುತ್ತಾ ಬಂದಿದ್ದಾರೆ. ತಮ್ಮ ಸ್ವಾರ್ಥ ಸಾಧನೆಗಾಗಿ ತಮ್ಮ ಹಿರಿಯರು ಅನುಸರಿಸದ ಮಾರ್ಗವನ್ನೇ ತುಳಿದಿದ್ದಾರೆ.

ಬಡವಗೆ ಅಗತ್ಯದ ಸವಲತ್ತುಗಳ
ನೀಡಲು ಯಾರಿಗೆ ಕಾಳಜಿ !
ಕಲಿಸುವ ಗುರಿ, ಕಲಿಯುವ ಗುರಿ
ಸಾಧಿಸಲೆಲ್ಲಿದೆ ಬಾಜಿ !

- ಡಾ. ಎಂ.ಜಿ. ನಾಗರಾಜ್

* ಅಧ್ಯಕ್ಷರು, ಶ್ರೀ ಅರಮೇರಿ ಕಳಂಚೇರಿ ಮಠ, ವೀರರಾಜೇಂದ್ರಪೇಟೆ ತಾ||, ಕೊಡಗು ಜಿಲ್ಲೆ-೫೭೧ ೨೧೮

ಶ್ರೀಮಠದಲ್ಲಿ ಶಿಕ್ಷಕರ ದಿನಾಚರಣೆ



ತ್ರಿವಿಧ ದಾಸೋಹಿ, ಮಹಾಶಿವಯೋಗಿ, ಶ್ರೀ.ಮ.ನಿ.ಪ್ರ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯಮಾರ್ಗದರ್ಶನದಲ್ಲಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ಶಿಕ್ಷಕರ ದಿನಾಚರಣೆ ಸಮಾರಂಭವನ್ನು ದಿನಾಂಕ ೦೫-೦೯-೨೦೧೭ರ ಮಂಗಳವಾರ ಶ್ರೀಮಠದ ಪ್ರಾರ್ಥನಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ತಮ್ಮ ಜೀವಮಾನವೆಲ್ಲಾ ಶಿಕ್ಷಕ ವೃತ್ತಿಯಲ್ಲಿ ಶ್ರದ್ಧೆ, ದಕ್ಷತೆ, ನಿಷ್ಠೆ, ಪ್ರಾಮಾಣಿಕತೆ, ಆಸಕ್ತಿ, ಪ್ರೀತಿಯೊಂದ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿ ವೃತ್ತಿಯಲ್ಲಿ ಘನತೆ ಗೌರವ ಕಾಪಾಡಿಕೊಂಡು ಸಂಸ್ಥೆಗೆ ಗೌರವ ತಂದುಕೊಟ್ಟ ನಿವೃತ್ತರಾದ ಪ್ರಾಚಾರ್ಯರು, ಮುಖ್ಯಶಿಕ್ಷಕರು, ಶಿಕ್ಷಕರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಸನ್ಮಾನಿಸಿ ಆಶೀರ್ವಚನ ನೀಡುತ್ತಾ ಭಾರತೀಯ ಸಂಸ್ಕೃತಿಯಲ್ಲಿ ಹೆತ್ತವರ ನಂತರ ಗುರುವನ್ನೇ ದೇವರೆಂದು ಪರಿಗಣಿಸಿದೆ. ವರ್ಣ ಕಲಿಸಿದಾತ ಮಾತ್ರ ಗುರು ಎಂದಿದೆ. ಈ ಸ್ಥಾನವನ್ನು ಅರಿತು ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಬೇಕು ಎಂದು ನುಡಿದರು. ತಮ್ಮ ವೃತ್ತಿಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದ ನಿಮಗೆ ಸಿದ್ಧಗಂಗಾ ಗುರುಪರಂಪರೆಯ ಅನುಗ್ರಹ, ಆಶೀರ್ವಾದ ಲಭಿಸಲಿ ಎಂದು ತಮ್ಮ ಶಿವನುಡಿಗಳಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರಿನ ರಾಷ್ಟ್ರ ಪುರಸ್ಕೃತ ನಿವೃತ್ತ ಶಿಕ್ಷಕರಾದ ಶ್ರೀ ಎನ್.ಟಿ. ಶಿವಣ್ಣನವರು ಮಾತನಾಡುತ್ತಾ ರಾಯಭಾರಿಗಳಾಗಿ, ಉಪಕುಲಪತಿಗಳಾಗಿ, ಉಪರಾಷ್ಟ್ರಪತಿಗಳಾಗಿ, ರಾಷ್ಟ್ರಪತಿಗಳಾಗಿ, ಶಿಕ್ಷಕ ತಜ್ಞರಾಗಿ, ತತ್ವಜ್ಞಾನಿಗಳಾಗಿ ಇದಕ್ಕಿಂತ ಮಿಗಿಲಾಗಿ ತಮ್ಮ ಜೀವನ ಪರ್ಯಂತ ಅಧ್ಯಾಪಕರಾಗಿ ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ರಾಷ್ಟ್ರಾದ್ಯಂತ ಆಚರಿಸಲಾಗುತ್ತಿದೆ. ಅಂತಹ ಮಹನೀಯರು ತಮಗೆ ಸ್ಫೂರ್ತಿ ಹಾಗೂ ಮಾರ್ಗದರ್ಶಿಗಳು ಎಂದು ತಿಳಿಸುತ್ತಾ ೧೦ ಸಾವಿರ ಮಂದಿಗೆ ನಿರಂತರ ದಾಸೋಹ ನೀಡುತ್ತಿರುವ ಶತಾಯುಷಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರಿಂದ ಬಸವಾದಿ ಶರಣರ ತತ್ವಸಂದೇಶ ಶ್ರೀಮಠದಲ್ಲಿ ಸಾಕಾರಗೊಂಡಿದೆ ಎಂದು ಭಕ್ತಿಭಾವದಿಂದ ನುಡಿದರು.

ನಿವೃತ್ತ ಶಿಕ್ಷಕರ ಪರವಾಗಿ ನಿವೃತ್ತ ಮುಖ್ಯ ಶಿಕ್ಷಕರಾದ ಶ್ರೀ ಎಂ.ವಿ. ಶಿವರುದ್ರಯ್ಯನವರು, ಶ್ರೀಮಠದ ತಮ್ಮ ಅನುಭವಗಳನ್ನು ಭಾವಪೂರ್ಣವಾಗಿ ಸ್ಮರಿಸಿಕೊಂಡರು. ವಿದ್ಯಾರ್ಥಿಗಳಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು. ನಿವೃತ್ತ ಶಿಕ್ಷಕರ ಪರಿಚಯವನ್ನು ಬಸವೇಶ್ವರ ಡಿ.ಇಡಿ ಕಾಲೇಜಿನ ಉಪನ್ಯಾಸಕರಾದ ಶ್ರೀ ಎನ್.ವಿ. ವಿಶ್ವೇಶ್ವರಯ್ಯನವರು ಮಾಡಿಕೊಟ್ಟರು. ಬಸವೇಶ್ವರ ಡಿ.ಇಡಿ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾದ ಶ್ರೀಮತಿ ರಾಜಸುಲೋಚನ ಸ್ವಾಗತಿಸಿದರು. ಶ್ರೀಮಠದ ದೈಹಿಕ ಶಿಕ್ಷಣ ಕಾಲೇಜಿನ ಉಪನ್ಯಾಸಕರಾದ ಶ್ರೀ ಸಿದ್ಧಲಿಂಗದೇವರು ವಂದಿಸಿದರು. ಶ್ರೀಮಠದ ಬಸವೇಶ್ವರ ಡಿ.ಇಡಿ ಕಾಲೇಜಿನ ಉಪನ್ಯಾಸಕರಾದ ಶ್ರೀ ಟಿ.ಜಿ. ಉಮಾಶಂಕರ್‌ರವರು ನಿರೂಪಣೆ ಮಾಡಿದರು.

ವರದಿ : ಕೆ.ಬಿ. ಶಿವಶಂಕರಯ್ಯ

ಶ್ರೀ ಸಿದ್ಧಗಂಗಾ ಮಠ, ತುಮಕೂರು

ಶ್ರೀ ಸಿದ್ಧಗಂಗಾಮಠದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸಮಗ್ರ ಯೋಜನೆಗೆ ಶ್ರೀ ಸಿದ್ಧಗಂಗಾ ಗುರುಕುಲ ಡೆವಲಪ್‌ಮೆಂಟ್ ಟ್ರಸ್ಟ್‌ಗೆ ದೇಣಿಗೆ ನೀಡಿದ ದಾನಿಗಳ ಪಟ್ಟಿ ತಾವು ನೀಡುವ ಹಣಕ್ಕೆ ಆದಾಯ ತೆರಿಗೆ ಇಲಾಖೆಯಿಂದ ೮೦ಜಿ ಅಡಿಯಲ್ಲಿ ಶೇ. ೫೦ರವರೆಗೆ ತೆರಿಗೆ ವಿನಾಯಿತಿ ಇರುತ್ತದೆ.

ಕ್ರಸಂ.	ಹೆಸರು ಮತ್ತು ಊರು	ಮೊತ್ತ
೧೭೯೩.	ಶ್ರೀ ಜಿ.ಎಂ. ಹಿರೇಮಠ ಕುಂದಗೋಳ್	೧೦,೦೦೦.೦೦
೧೭೯೪.	ಶ್ರೀ ರಾಮಚಂದ್ರ ಎಸ್. ಮುಟಗಿ ಹುಬ್ಬಳ್ಳಿ	೧,೦೦೦.೦೦
೧೭೯೫.	ಶ್ರೀ ಎಸ್.ಕೆ. ಸೋನ್ಸ್ ಧಾರವಾಡ	೧,೦೦೦.೦೦
೧೭೯೬.	ಶ್ರೀ ಎಸ್. ಜಗದೀಶ್ ಸಿ.ರಿ. ಧಾರವಾಡ	೫,೦೦೦.೦೦
೧೭೯೭.	ಶ್ರೀ ಎಂ.ಇ. ದೊಡ್ಡಮನಿ ಹುಬ್ಬಳ್ಳಿ	೫,೦೦೦.೦೦
೧೭೯೮.	ಶ್ರೀ ನಾಗರಾಜ್ ಅವತಡೆ ಹುಬ್ಬಳ್ಳಿ	೧,೦೦೦.೦೦
೧೭೯೯.	ಶ್ರೀ ಎಲ್. ನಾಗರಾಜು ಹುಬ್ಬಳ್ಳಿ	೧,೦೦೦.೦೦
೧೮೦೦.	ಶ್ರೀ ಆಂಥೋನಿ ಸಿರಸಿ	೫,೦೦೦.೦೦
೧೮೦೧.	ಶ್ರೀ ಮೈಸೂರು ಸ್ಟೀಲ್ಸ್ ಹುಬ್ಬಳ್ಳಿ	೧,೦೦೦.೦೦
೧೮೦೨.	ಶ್ರೀ ಎಂ.ಎ. ಕಬನೂರ್ ಮತ್ತು ಸ್ಟಾಫ್ ಹುಬ್ಬಳ್ಳಿ	೨,೦೦೦.೦೦
೧೮೦೩.	ಶ್ರೀ ಗೋವಿಂದರ ಜಯಪ್ಪ ತ್ಯಾವಣಿಗಿ	೧,೦೦೦.೦೦
೧೮೦೪.	ಶ್ರೀ ಜಿ.ಸಿ. ಪೂಜಾರ್ ನಾಗವೋಂಡ್	೧,೦೦೦.೦೦
೧೮೦೫.	ಶ್ರೀ ಜಿ.ಕೆ. ಗೋಟಿಹಾಳ್ ಬಿಜಾಪುರ	೫,೦೦೦.೦೦
೧೮೦೬.	ಶ್ರೀ ಎಸ್.ಕೆ. ಕುಲಕರ್ಣಿ ಬಿಜಾಪುರ	೧,೦೦೦.೦೦
೧೮೦೭.	ಶ್ರೀ ಪಸಂತಕುಮಾರ್ ರಾಥೋಡ್ ಹುಬ್ಬಳ್ಳಿ	೧,೦೦೦.೦೦
೧೮೦೮.	ಶ್ರೀ ಲಕ್ಷ್ಮಣ ಕೆ. ರಾಥೋಡ್ ಹುಬ್ಬಳ್ಳಿ	೪,೦೦೦.೦೦
೧೮೧೯.	ಶ್ರೀ ಶ್ರೀಶೈಲ ವಿರೂಪಾಕ್ಷ ಗೂಡ್ಲುರ ಮುನವಳ್ಳಿ ಜಿಡಿ ಓಣಿ	೩,೦೦೦.೦೦
೧೮೧೦.	ಶ್ರೀ ಸೋಮಲಿಂಗಪ್ಪ ನಾಗಪ್ಪ ಚುಡ್ಯ ಮುನವಳ್ಳಿ	೩,೦೦೦.೦೦
೧೮೧೧.	ಶ್ರೀ ಹನುಮಂತ ಜಿ. ಜುಗನವರ ರೈನಾಪುರ	೧,೦೦೦.೦೦
೧೮೧೨.	ಶ್ರೀ ನಿಂಗಲ್ಲಿ ಎಸ್. ಬಿರೇದಾರ್ ಹುಬ್ಬಳ್ಳಿ	೧೦,೦೦೦.೦೦
೧೮೧೩.	ಶ್ರೀ ಮೃತ್ಯುಂಜ ಎಸ್. ಹಿರೇಮಠ ಬ್ಯಾಡಗಿ	೫,೦೦೦.೦೦
೧೮೧೪.	ಶ್ರೀ ಎನ್.ಹೆಚ್. ಬೀರಣ್ಣನವರ ರಾಣೆಬೆನ್ನೂರು	೧,೦೦೦.೦೦
೧೮೧೫.	ಶ್ರೀ ಪಾಪ್ ಹೆಚ್. ಅರಳಿಕಟ್ಟೆ ರಾಣೇಬೆನ್ನೂರು	೧೦,೦೦೦.೦೦
೧೮೧೬.	ಶ್ರೀ ಸಿದ್ದೀರಪ್ಪಗೌಡ ರಾಣೇಬೆನ್ನೂರು	೧,೦೦೦.೦೦
೧೮೧೭.	ಶ್ರೀ ಜಿ.ಬಿ. ಲೋರೆಕೇರಿ ಚಳಗೇರಿ	೧,೦೦೦.೦೦
೧೮೧೮.	ಶ್ರೀ ಜಿ.ಎಸ್. ಆರಾಧ್ಯಮಠ ಹಲಗೇರಿ	೧,೦೦೦.೦೦
೧೮೧೯.	ಶ್ರೀ ಶೃತಿ ಹೆಚ್. ಲಪೋಜಿ ಹಾವೇರಿ	೧,೦೦೦.೦೦
೧೮೨೦.	ಶ್ರೀ ಹಾಲಲೆಸ್ಟ್ ಡಿ ಕಾಳಪ್ಪನವರ ಪನಲರಕಟ್ಟೆ	೧,೦೦೦.೦೦
೧೮೨೧.	ಶ್ರೀ ನಿಂಗಪ್ಪ ಬಿ. ಚೋಡಣ್ಣನವರು ಆಲದಕಟ್ಟೆ	೧,೦೦೦.೦೦
೧೮೨೨.	ಶ್ರೀ ಹೆಚ್.ಆರ್. ಮುದವ್ಯಾವಣ್ಣನವರ ಕರೂರು	೧,೦೦೦.೦೦
೧೮೨೩.	ಶ್ರೀ ಚಂದ್ರಶೇಖರಯ್ಯ ವೀರಯ್ಯ ಮಠದ್ ಹನುಮನಹಳ್ಳಿ	೧,೦೦೦.೦೦
೧೮೨೪.	ಶ್ರೀ ಕೆ.ಸಿ. ಸಿದ್ದಣ್ಣಗೌಡ ರಾಣೇಬೆನ್ನೂರು	೧,೦೦೦.೦೦
೧೮೨೫.	ಶ್ರೀ ಯಮುನಪ್ಪ ನಾಗಪ್ಪ ರಾಜನಹಳ್ಳಿ ಮಣಕೂರು	೧,೦೦೦.೦೦
೧೮೨೬.	ಶ್ರೀ ಆರ್.ಸಿ. ಪಮನಗೌಡರ್ ಕರೂರು	೧,೦೦೦.೦೦
೧೮೨೭.	ಶ್ರೀ ಹನುಮಂತಪ್ಪ ಬಸಪ್ಪ ಆದಿವಿ ಪುರವರ್ ಮಾಗೋಡು	೧,೦೦೦.೦೦

(ಮುಂದುವರೆಯುತ್ತದೆ)

ಸಿದ್ಧಗಂಗಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ರಸ್ತೆ, (ಬಿ.ಹೆಚ್. ರಸ್ತೆ), ತುಮಕೂರು

ವೈದ್ಯಕೀಯ ಸೌಲಭ್ಯಗಳು

ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳು

- ನ್ಯೂರಾಲಜಿ ಮತ್ತು ನ್ಯೂರೋಸರ್ಜರಿ
- ಕಾರ್ಡಿಯಾಲಜಿ ಮತ್ತು ಸಿ.ಟಿ.ವಿ.ಎಸ್
- ಮೆಡಿಕಲ್ ಮತ್ತು ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ
- ಮೆಡಿಕಲ್ ಮತ್ತು ಸರ್ಜಿಕಲ್ ಆಂಕೊಲಜಿ
- ನೆಫ್ರಾಲಜಿ ಮತ್ತು ಯುರಾಲಜಿ
- ಡಯಬಿಟಾಲಜಿ ಮತ್ತು ಎಂಡೋಕ್ರೈನಾಲಜಿ
- ಪಲ್ಮನಾಲಜಿ • ರುಮಟಾಲಜಿ
- ಪ್ಲಾಸ್ಟಿಕ್ ರಿಕನ್‌ಸ್ಟ್ರಕ್ಟೀವ್ ಮತ್ತು ಕಾಸ್ಮೆಟಿಕ್ ಸರ್ಜರಿ
- ಜೆರಿಯಾಟ್ರಿಕ್ ಮೆಡಿಸಿನ್

SIDDAGANGA HOSPITAL
AND RESEARCH CENTER
— Dedicated to Health —

ತುರ್ತು ಚಿಕಿತ್ಸಾ ಸೇವೆಗಳು

- ಅಪಘಾತ, ತುರ್ತು ಚಿಕಿತ್ಸೆ ಮತ್ತು ಕ್ರಿಟಿಕಲ್ ಕೇರ್
- ಎಮ್.ಐ.ಸಿ.ಯು., ಐ.ಸಿ.ಸಿ.ಯು., ನ್ಯೂರೋ ಐ.ಸಿ.ಯು., ಎಸ್.ಐ.ಸಿ.ಯು., ಎನ್.ಐ.ಸಿ.ಯು., ಪಿ.ಐ.ಸಿ.ಯು
- ಕ್ಯಾಥ್ ಲ್ಯಾಬ್ ಸೇವೆಗಳು
- ಡಯಾಲಿಸಿಸ್ ಸೇವೆಗಳು
- ಡಯಾಗ್ನೋಸ್ಟಿಕ್ ಸೇವೆಗಳು
- ಇಂಟರ್‌ವೆನ್ಷನಲ್ ರೇಡಿಯಾಲಜಿ
- ಸಿ ಟಿ ಸ್ಕ್ಯಾನ್ – 16 ಸ್ಲೈಸ್
- ರಕ್ತ ನಿಧಿ ಮತ್ತು ಕಾಂಪೋನೆಂಟ್ಸ್
- ಆಂಬ್ಯುಲೆನ್ಸ್ ಸೇವೆಗಳು • ಔಷಧಾಲಯ

ಇತರೆ ಸೌಲಭ್ಯಗಳು

- ಇಂಟರ್ನಲ್ ಮೆಡಿಸಿನ್
- ಮನೋವೈದ್ಯಕೀಯ ಸೇವೆಗಳು
- ಜನರಲ್ ಮತ್ತು ಲ್ಯಾಪರೊಸ್ಕೋಪಿಕ್ ಸರ್ಜರಿ
- ಬೆರಿಯಾಟ್ರಿಕ್ ಮತ್ತು ಮೆಟಾಬಾಲಿಕ್ ಸರ್ಜರಿ
- ಆರ್ಥೋಪೆಡಿಕ್ ಮತ್ತು ತುರ್ತು ಅಪಘಾತ ಚಿಕಿತ್ಸೆ
- ಎಂಡೋಸ್ಕೋಪಿ, ಕೊಲೊನೋಸ್ಕೋಪಿ ಮತ್ತು ಇ.ಆರ್.ಸಿ.ಪಿ
- ನಿಯೋನೇಟಾಲಜಿ, ಪೀಡಿಯಾಟ್ರಿಕ್ಸ್ ಮತ್ತು ಪೀಡಿಯಾಟ್ರಿಕ್ ಸರ್ಜರಿ
- ಪ್ರಸೂತಿ ಮತ್ತು ಸ್ತ್ರೀ ರೋಗ ಚಿಕಿತ್ಸೆ
- ಫೀಟಲ್ ಮೆಡಿಸಿನ್ • ಐ.ವಿ.ಎಫ್ ಕೇಂದ್ರ • ಇ.ಎನ್.ಟಿ.
- ನೇತ್ರ ಚಿಕಿತ್ಸೆ • ಡರ್ಮಟಾಲಜಿ
- ದಂತ ಚಿಕಿತ್ಸೆ ಮತ್ತು ಮ್ಯಾಕ್ಸಿಲೋಫೇಶಿಯಲ್ ಸರ್ಜರಿ
- ಮಿನಿಮಲಿ ಇನ್‌ವೇಸಿವ್ ಸರ್ಜರಿ ಮತ್ತು ಫಂಡೋಪ್ಲಿಕೇಷನ್

ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಹಾಗೂ ಮಾಜಿ ಮುಖ್ಯಮಂತ್ರಿ, ಶ್ರೀ ಬಿ.ಎಸ್. ಯಡಿಯೂರಪ್ಪನವರು ಶ್ರೀಮಠಕ್ಕೆ ಭೇಟಿ ನೀಡಿ ಪರಮಪೂಜ್ಯ ಶ್ರೀ ಶ್ರೀಗಳವರ ಆರೋಗ್ಯ ವಿಚಾರಿಸಿದರು.

ಸಂಸದರಾದ ಶ್ರೀ ಎಂ. ವೀರಪ್ಪ ಮೊಯ್ಲಿ ಅವರು ಶ್ರೀಮಠಕ್ಕೆ ಭೇಟಿ ನೀಡಿ ಪರಮಪೂಜ್ಯ ಶ್ರೀ ಶ್ರೀಗಳವರ ದರ್ಶನ ಮಾಡಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಬೆಂ.ಮ.ಪಾಲಿಕೆ ಮಾಜಿ ಉಪ ಮಹಾಪೌರರಾದ ಶ್ರೀ ಬಿ.ಎಸ್. ಪುಟ್ಟರಾಜು, ಮಾಜಿ ಶಾಸಕ ಶ್ರೀ ಶಫೀ ಅಹ್ಮದ್, ತುಮಕೂರು ಮತ್ತಿತ್ತರು ಉಪಸ್ಥಿತರಿದ್ದರು.



ಪರಮಪೂಜ್ಯ ಶ್ರೀ ಶ್ರೀಗಳವರು ಸಿದ್ಧಗಂಗಾ ಸೆಪ್ಟೆಂಬರ್ ಸಂಚಿಕೆಯನ್ನು ಅವಲೋಕಿಸುತ್ತಿರುವುದು. ಈ ಸಂದರ್ಭದಲ್ಲಿ ಸಿದ್ಧಗಂಗಾ ಪತ್ರಿಕೆಯ ನಿರ್ವಹಣಾ ಸಮಿತಿಯ ಸದಸ್ಯರಾದ ಶ್ರೀ ಸಿ. ಕುಮಾರಸ್ವಾಮಿ ಅವರು ಉಪಸ್ಥಿತರಿದ್ದರು.

ಸಕ್ಕರೆ ಮತ್ತು ಸಣ್ಣ ಕೈಗಾರಿಕೆ ನೂತನ ಸಚಿವರಾದ ಡಾ. ಗೀತಾ ಮಹಾದೇವ ಪ್ರಸಾದ್ ಅವರು ಶ್ರೀಮಠಕ್ಕೆ ಭೇಟಿ ನೀಡಿ ಪೂಜ್ಯ ಶ್ರೀ ಶ್ರೀಗಳವರ ದರ್ಶನ ಮಾಡಿ ಆಶೀರ್ವಾದ ಪಡೆದರು.



ದೂರದರ್ಶನ ಕೇಂದ್ರದ ನಿವೃತ್ತ ಉಪ ಮಹಾ ನಿರ್ದೇಶಕರಾದ ನಾಡೋಜ ಡಾ. ಮಹೇಶ್ ಜೋಶಿಯವರು ಶ್ರೀಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಸನ್ಮಾನಿಸಿ ಆಶೀರ್ವದಿಸಿದರು.

ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಪ್ರಾಚಾರ್ಯರು, ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನು ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಸನ್ಮಾನಿಸಿ ಆಶೀರ್ವದಿಸಿದರು.

Cover printed at : Geetanjali Graphics, B-71, KSSIDC Indl. Area, 6th Block, Rajajinagar, Bengaluru-10. Ph : 23404232
email ID : geetanjaligraphics@gmail.com